SRI K. BHASKAR NAIDU.—Water is the most important thing for everybody.

MR. SPEAKER.—Then the hon. member may please send a notice to-day, itself.

SRI K. BHASKAR NAIDU.—I do not represent only Bellary. I represent Karnataka. This government is showing favour only to the citizen of Bangalore.

MR. SPEAKER.—The hon. member may send a notice.

SRI K. BHASKAR NAIDU.—There is no need to send notice.

SRI C. M. ARMUGHAM.—Sir, there is a separate Water Board for Bangalore and in respect of whatever expenditure is incurred for the water supply, you do not ask the Bangalore Corporation to take loan and re-pay. Will you consider applying the same yard stick to cities like K.G.F., Bellary etc ? K.G:F. is the fifth or sixth largest city in Karnataka. Such cities should get the same treatment as Bangalore. Why should you insist on the City Municipalities on paying for it, when you are not insisting on the Corporation of Bangalore to repay the loan ? Government is there to look after the interests of entire Karnataka and not Bangalore only. You are not insisting on the City Corporation on paying the loan Yon have spent about 35 crores of rupees to supply water to Bangalore City. Why are you insisting on this amount of 18 lakhs from this Municipality ? May I request the Government to show relaxation in respect of certain cities like K. G. F. not to insist on Municipalities to take loans and make them repay ? It is the responsibility of the Government to provide water for the citizens of Karnataka.

SRI H. C. SRIKANTAIAH.—Not only K. G. F. Municipality, but almost all the Municipalities are not in a position to maintain water supply. Government is examining how the Municipalities can be taken over by the Karnataka Urban Water Supply Board.

MR. SPEAKER.—Now we will continue the general discussion on the budget.

[MR. CHAIRMAN, (SRI VEERAPPA MOILY) in the Chair]

Budget Estimates for 1979-80, General Discussion
(Debate Continued)

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರ) —ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಗಳು ರಾಜ್ಯದ ಆಹಾರ ಪರಿಸ್ಥಿತಿ ಕುರಿತು ಒಂದು ಉತ್ತಮ ಮಾತನ್ನು ಹೇಳಿದ್ದಾರೆ, ಈಗ ಸರ್ಕಾರದ ಬಳಿ ಎರಡು ಲಕ್ಷ ಟನ್ನುಗಳಷ್ಟು ಭಾರಿ ಪ್ರಮಾಣದ ಧಾನ್ಯ ಸಂಗ್ರಹವಿದೆ, ಮುಂದಿನ ೧೨ ತಿಂಗಳುಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನುಯ ನಮ್ಮ ಅವಶ್ಯಕತೆಗಳನ್ನು ಪೂರೈಸಲು ಇದು ಸಾಕು ಎನ್ನುವ

ಮಾತನ್ನು ಹೇಳುತ್ತಾ ಈ ವರ್ಷ ಆಹಾರಧಾನ್ಯ ಸಂಗ್ರಹಣೆಯಲ್ಲಿ ಮತ್ತು ಉತ್ಪಾದನೆಯಲ್ಲಿ ನಮ್ಮ ರಾಜ್ಯ ಹೊಸ ದಾಖಲೆಯನ್ನು ಸ್ಥಾಪಿಸಿದೆ ಎಂದು ಹೆಮ್ಮೆಯಿಂದ ನುಡಿದಿದ್ದಾರೆ. ಈ ಮಾತನ್ನು ನಾನು ಬಳಕೆದಾರರ ದೃಷ್ಟಿಯಿಂದ ಅವಲೋಕನ ಮಾಡಬೇಕಾಗಿದೆ. ಪ್ರತಿ ವರ್ಷ ಆಯವ್ಯಯ ಪತ್ರ ಪ್ರಕಟವಾಗುತ್ತದೆ ಎಂದಾಗ ಬಳಕೆದಾರರಿಗಾಗುವ ನೋವು ಮತ್ತು ಸಂಕಟವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ರಾಜ್ಯದಲ್ಲಿ ಆಹಾರ ಪರಿಸ್ಥಿತಿ ಸುಗಮವಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅವರು ಆಯವ್ಯಯ ಪತ್ರ ಮಂಡಿಸುವ ಮುಂಚೆ ಒಂದು ಕೇಜಿ ಗೋಧಿ ಬೆಲೆ ೧-೬೫ ರೂಪಾಯಿ ಇತ್ತು, ಈಗ ೧-೭೫ ರೂಪಾಯಿಗೆ ಏರಿದೆ, ಅಕ್ಕಿ ೧-೯೦ ರೂಪಾಯಿ ಇತ್ತು, ಈಗ ೨-೧೦ಕ್ಕೆ ಏರಿದೆ. ಮಂಡಿಸಿದ ನಂತರ ರಾಗಿ ೧-೧೦ ರೂಪಾಯಿ ನಿಂದ ೧-೧೫ ರೂ.ಗೆ ಏರಿದೆ, ಎಣ್ಣೆ ೬-೯೦ ರೂ. ನಿಂದ ೭-೫೫ಕ್ಕೆ ಏರಿದೆ, ಸಕ್ಕರೆ ೨-೧೮ ರೂಪಾಯಿನಿಂದ ೨-೭೦ ರೂ. ಗೆ ಏರಿದೆ ಮತ್ತು ವನಸ್ಪತಿ ೯-೮೦ ರೂಪಾಯಿನಿಂದ ೧೦-೮೦ ರೂಪಾಯಿಗೆ ಏರಿದೆ. ಭಾರಿ ಪ್ರಮಾಣದಲ್ಲಿ ಆಹಾರ ಧಾನ್ಯ ಸಂಗ್ರಹಣೆಯಿರುವಾಗ ಧಾನ್ಯಗಳ ಬೆಲೆಯಲ್ಲಿ ಏತಕ್ಕೆ ಏರಿಕೆ ಉಂಟಾಯಿತು ? ಹಾಗಾದರೆ, ಧಾನ್ಯ ಸಂಗ್ರಹಣೆಯ ಉದ್ದೇಶವಾದರೂ ಏನು ? ಬಹಿರಂಗ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಸಿಕ್ಕಾಪಟ್ಟೆ ಏರಿದಾಗ, ದಾಸ್ತಾನಿನಲ್ಲಿರುವ ಧಾನ್ಯವನ್ನು ಬಹಿರಂಗ ಮಾರುಕಟ್ಟೆಗೆ ಬಿಟ್ಟು, ಬೆಲೆ ಏರಿಕೆಯನ್ನು ತಡೆಗಟ್ಟುವುದು ಧಾನ್ಯ ಸಂಗ್ರಹಣೆಯ ಉದ್ದೇಶವಲ್ಲವೇ ? ಭಾರಿ ಪ್ರಮಾಣದ ಆಹಾರ ಧಾನ್ಯಗಳ ದಾಸ್ತಾನಿಟ್ಟುಕೊಂಡು, ಬೆಲೆ ಏರಿಕೆಯನ್ನು ತಡೆಗಟ್ಟಲು ಶ್ರಮ ಏತಕ್ಕೆ ಮಾಡಲಿಲ್ಲ ? ಸಹಕಾರ ಸಂಘಗಳ ಮುಖಾಂತರ ಬೆಲೆ ತಡೆಗಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದ್ದೀರಿ. ಕೋಟ್ಯಾಂತರ ರೂಪಾಯಿಗಳನ್ನು ರಾಜ್ಯ ಸರ್ಕಾರದ ಬೊಕ್ಕಸದಿಂದ ಆಹಾರ ಧಾನ್ಯ ಸಂಗ್ರಹಣೆ ಮಾಡಲಿಕ್ಕೆ ಕೊಡುತ್ತಿದ್ದೀರಿ, ಆದರೂ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಬಳಕೆದಾರನಿಗೆ ಪದಾರ್ಥಗಳ ಬೆಲೆ ಜಾಸ್ತಿಯಾಗಿ ಜನಗಳ ಶೋಷಣೆ ಮಾಡತಕ್ಕಂಥಾದ್ದು ಕಂಡುಬರುತ್ತದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡುತ್ತಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಆದುದರಿಂದ ಬೆಲೆ ಏರಿಕೆಯನ್ನು ತಡೆಗಟ್ಟಲಿಕ್ಕೆ ಕೂಡಲೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಕ್ಕಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿ ಹಣವನ್ನು ಕೊಟ್ಟಿದ್ದಾರೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಕಾರ್ಯಚಟುವಟಿಕೆಯನ್ನು ನೋಡಿದಾಗ ಸರ್ಕಾರದವರು ಕೊಟ್ಟಿರತಕ್ಕ ಹಣ ದುರುಪಯೋಗವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ, ಇದರಿಂದ ಬಡ ಜನತೆಗೆ ಆಗಬೇಕಾದಷ್ಟು ಅನುಕೂಲ ಆಗಲಿಲ್ಲ. ಒಂದೆರಡು ಉದಾಹರಣೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ೧೯೭೪-೭೫ರಲ್ಲಿ ಗ್ರಾಂಟ್ಸ್ ಮತ್ತು ಅಡ್ವಾನ್ಸಸ್‌ನಿಂದ ಒಂದುಕೋಟಿ ರೂಪಾಯಿಗಳನ್ನು ತೆಗೆದುಕೊಂಡರು. ಖಾದಿ ಕಮೀಷನ್ನಿಂದ ೮೪೭ ಲಕ್ಷ ರೂಪಾಯಿಗಳು, ಸ್ಟೇಟ್ ಗೌರ್ನಮೆಂಟ್‌ನಿಂದ ೨೨೮ ಲಕ್ಷ ರೂಪಾಯಿಗಳು, ಈ ಹಣವನ್ನು ಸುಮಾರು ೧೧೯೬ ಸೊಸೈಟಿಗಳಿಗೆ ಕೊಟ್ಟಿದ್ದಾರೆ. ೭೩ ಸೊಸೈಟಿಗಳಲ್ಲಿ ನಾಲ್ಕುವರೆ ಲಕ್ಷ ರೂಪಾಯಿ ಬಾಕಿ ಇದೆ, ಸುಮಾರು ಸೊಸೈಟಿಗಳ ಹೆಸರುಗಳೇ ಇಲ್ಲ. ೫ ಲಕ್ಷ ರೂಪಾಯಿ ಬಾಕಿ ಕೊಡತಕ್ಕ ಸೊಸೈಟಿಗಳು ಮುಚ್ಚಲ್ಪಟ್ಟಿವೆ. ಇಂಥ ಸಂಘ ಸಂಸ್ಥೆಗಳಿಗೆ ಸರ್ಕಾರ ಹಣ ಕೊಡುವಾಗ ಬಿಗಿಯಾದ ಕ್ರಮಗಳನ್ನು ಅನುಸರಿಸಿ ನ್ಯಾಯವಾಗಿ ವಸೂಲು ಮಾಡುವಂತ ವ್ಯವಸ್ಥೆ ಏತಕ್ಕೆ ಮಾಡಿಲ್ಲ ? ೬೨೯ ಸೊಸೈಟಿಗಳಲ್ಲಿ ಸುಮಾರು ೭೨.೯ ಲಕ್ಷ ರೂಪಾಯಿಗಳು ಬಾಕಿ ಇದೆ. ಈ ಹಣವನ್ನು ಇನ್ನೂ ವಸೂಲು ಮಾಡಿಲ್ಲ. ೯೦ ಯೂನಿಟ್‌ಗಳಲ್ಲಿ ಪೂರ್ತಿಯಾಗಿ ಮಿಸ್‌ಮ್ಯಾನೇಜ್‌ಮೆಂಟ್ ಆಗಿ ಅಲ್ಲಿ ಕೂಡ ಹಣ ವಸೂಲು ಮಾಡಿಲ್ಲ. ೨೧ ಸೊಸೈಟಿಗಳಲ್ಲಿ ೯ ಲಕ್ಷ ರೂಪಾಯಿ ಬಾಕಿ ಇದ್ದು ಇದುವರೆವಿಗೂ ಕೂಡ ಅದನ್ನು ವಸೂಲು ಮಾಡುವುದಕ್ಕೆ ಕಾನೂನಿನ ಕ್ರಮ ತೆಗೆದುಕೊಂಡಿಲ್ಲ. ಮತ್ತೆ ಈ ಆಯವ್ಯಯ ಪತ್ರದಲ್ಲಿ ಕೋಟ್ಯಾಂತರ ರೂಪಾಯಿ ಇಟ್ಟಿದ್ದೀರಿ, ಸರ್ಕಾರದ ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡಿಸುವ ಬಗ್ಗೆ ಸರ್ಕಾರ ತನ್ನ ಚಾಣಾಕ್ಯತನವನ್ನು ತೋರಿಸಿಲ್ಲ. ಕೋಟ್ಯಾಂತರ ರೂಪಾಯಿಗಳು ದುರುಪಯೋಗವಾಗುವುದನ್ನು ತಡೆಗಟ್ಟುವ ವಿಷಯದಲ್ಲಿ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಜಾಗೃತ ಆಯೋಗ ತನ್ನ ವರದಿಯನ್ನು ಕೊಟ್ಟಿದೆ. ಇದನ್ನು ಜಾಗೃತ ಆಯೋಗ ಎಂದು ಕರೆಯಬೇಕೋ ಅಥವಾ ಕುಂಭಕರ್ಣ ಆಯೋಗ ಎಂದು ಕರೆಯಬೇಕೋ ತಿಳಿಯದು. ಇದರ ಒಂದು ಕೆಲಸವನ್ನು ನೋಡಿದರೆ ಕನ್ನಡಿ ಇದ್ದಂತೆ ಇದೆ, ಮಾನ್ಯ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಎಲ್ಲಾ ಕ್ಷೇತ್ರ

ದಲ್ಲಿ ಪ್ರಗತಿ ಸಾದಿಸಿದ್ದೇವೆಂದು ಹೇಳಿದ್ದಾರೆ, ಅದೇರೀತಿ ಲಂಚದ ಕ್ಷೇತ್ರದಲ್ಲಿಯೂ ಪ್ರಗತಿ ಸಾಧಿಸಿದ್ದೇವೆಂದು ಹೇಳಿದ್ದರೆ ಚೆನ್ನಾಗಿತ್ತು. ಜಾಗೃತ ಆಯೋಗ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ೧೯೭೬-೭೭ ರಲ್ಲಿ ಸರ್ಕಾರದವರು ಜಾಗೃತ ಆಯೋಗಕ್ಕೆ ೪೬೦೦ ಕೇಸುಗಳನ್ನು ಕಳುಹಿಸಿದ್ದಾರೆ. ಅವುಗಳಲ್ಲಿ ಇತ್ಯರ್ಥವಾಗಿರತಕ್ಕ ಕೇಸುಗಳು ೩೬೮ ಮಾತ್ರ. ಇನ್ನು ೨೫೨೪ ಕೇಸುಗಳು ಇತ್ಯರ್ಥವಾಗಿಲ್ಲ. ೧೪೩ ಕೇಸುಗಳನ್ನು ಸರ್ಕಾರದವರು ಇತ್ಯರ್ಥ ಮಾಡಲಿಕ್ಕಾಗಿ ಕಳುಹಿಸಿದ್ದಾರೆ, ಅದು ೧೯೭೭ರಲ್ಲಿ. ೭೭-೭೮ರಲ್ಲಿ ೩೫೦ ಕೇಸುಗಳನ್ನು ರೆಫರ್ ಮಾಡಿದ್ದಾರೆ, ಅನೇಕ ಕೇಸುಗಳಲ್ಲಿ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಬಹಳ ಕಷ್ಟಪಟ್ಟು ೨೦-೨೫ ಕೇಸುಗಳಲ್ಲಿ ತನಿಖೆ ಮಾಡಿದ್ದಾರೆ. ಅದರಲ್ಲೂ ಕೆಲವು ಕೇಸುಗಳಲ್ಲಿ ಕೇವಲ ಎಚ್ಚರಿಕೆ ಕೊಟ್ಟಿದ್ದಾರೆ. ಜಾಗೃತ ಆಯೋಗದವರು ಕ್ರಮ ತೆಗೆದುಕೊಂಡಿರತಕ್ಕಂಥಾದ್ದು ಹೆಚ್ಚಾಗಿ ಪೋಲೀಸ್ ಪೇದೆಗಳ ಮೇಲೆ ವಿಲೇಜ್ ಅಕೌಂಟೆಂಟರುಗಳ ಮೇಲೆ ಮತ್ತು ಗುಮಾಸ್ತರ ಮೇಲೆ. ೧೦,೫ ರೂಪಾಯಿ ತೆಗೆದುಕೊಳ್ಳುವವರ ಮೇಲೆ ಕೇಸು ಹಾಕಿದ್ದಾರೆ. ದೊಡ್ಡ ಅಧಿಕಾರಿಗಳ ಮೇಲೆ ಒಂದೇ ಒಂದು ಕೇಸ್‌ಕೂಡ ಹಾಕಿಲ್ಲ, ಒಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರ್ ಮೇಲೆ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿದ್ದಾರೆ. ಜಾಗೃತ ಆಯೋಗವನ್ನು ಸಮರ್ಪಕವಾಗಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ ಕಲಬೆರಕೆ ವ್ಯಾಪಾರ ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟಲಿಕ್ಕಾಗಿ ಒಂದು ಇಲಾಖೆಯನ್ನು ತೆಗೆದು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದರಿಂದ ಯಾವುದೇ ರೀತಿಯ ಪರಿಣಾಮ ಜನಸಾಮಾನ್ಯರಿಗೆ ಆಗಿಲ್ಲವೆಂದು ಹೇಳಬೇಕಾಗಿದೆ. ಕಲಬೆರೆಕೆ ವಿಚಾರದಲ್ಲಿ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರಸರ್ಕಾರದ ನೀತಿ ಇದ್ದರೂ ಕೂಡ ಇದು ಸುಲಲಿತವಾಗಿ ನಡೆಯುತ್ತಿದೆ. ಕಲಬೆರೆಕೆ ವ್ಯಾಪಾರಿಗಳನ್ನು ಹಿಡಿದರೂ, ದುಡ್ಡು ತೆಗೆದುಕೊಂಡು ಕ್ರಮ ತೆಗೆದುಕೊಳ್ಳದೆ ಬಿಡುತ್ತಾರೆ. ಇನ್ನು ಕೇಂದ್ರೀಯ ಬಂಧೀಖಾನೆಯನ್ನು ಸ್ಥಳಾಂತರಿಸಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ, ಈ ಸ್ಥಳವನ್ನು ಕಾಂಗ್ರೆಸ್ ಎಕ್ಸಿಬಿಷನ್‌ಗೆ ಕೊಟ್ಟ ರೀತಿಯಲ್ಲಿ ಕೊಡದೇ ಉತ್ತಮವಾದ ಷಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಸುತ್ತಲೂ ಕಟ್ಟಿ ಜನೋಪಯೋಗಿ ಸ್ಥಳವನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಅಂತರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಮಕ್ಕಳಿಗಾಗಿ ಖರ್ಚು ಮಾಡತಕ್ಕ ಹಣ ಬಹಳ ಕಡಿಮೆ ಇದೆ, ಕೇವಲ ೫ ಕೇಂದ್ರಗಳನ್ನು ತೆಗೆಯಲಾಗುವುದು ಎಂದು ಹೇಳಿದ್ದೀರಿ, ಇನ್ನು ಹೆಚ್ಚು ಕೇಂದ್ರಗಳನ್ನು ತೆಗೆಯಬೇಕೆಂದು ಹೇಳುತ್ತೇನೆ, ಮಕ್ಕಳ ಅನುಕೂಲಕ್ಕಾಗಿ ಎಷ್ಟು ಖರ್ಚುಮಾಡಿದರೂ ತಪ್ಪಾಗುವುದಿಲ್ಲ ಎಂದು ಹೇಳುತ್ತೇನೆ. ಅಂತರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಬಂದಮುಕ್ತರಾಗಿರತಕ್ಕ ಮಕ್ಕಳನ್ನು ಬಂಧವಿಮುಕ್ತನ್ನಾಗಿ ಮಾಡಬೇಕೆನ್ನುವ ಸಲಹೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

೩-೩೦ ಪಿ.ಎಂ.

†ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಅರ್ಥ ಮಂತ್ರಿಗಳು ಈ ಸದನದ ಮುಂದೆ ಇಟ್ಟಿರತಕ್ಕ ೧೯೭೯-೧೯೮೦ರ ಆಯವ್ಯಯ ಪತ್ರಕ್ಕೆ ನಾನು ಸ್ವಾಗತ ಬಯಸಿ ಕೆಲವು ಮಾತನಾಡಲಿಕ್ಕೆ ಬಯಸುತ್ತೇನೆ. ಇವೊತ್ತು ಈ ಆಯವ್ಯಯ ಪತ್ರವನ್ನು ಮಂಡನೆ ಮಾಡುವುದರಲ್ಲಿ ಬಹಳ ಕಠಿಣ ಸಮಸ್ಯೆ ಇದೆ. ಏಕೆಂದರೆ ನಮ್ಮ ದೇಶದಲ್ಲಿ ಪ್ರತಿಯೊಬ್ಬರ ವಿಚಾರಧಾರೆಯು ಒಂದೊಂದು ರೀತಿಯಲ್ಲಿ ಇರುತ್ತದೆ. ಆದುದರಿಂದ ಇವರನ್ನೆಲ್ಲಾ ಈ ಆಯವ್ಯಯ ಪತ್ರದಲ್ಲಿ ಸಮಾಧಾನ ಮಾಡುವುದು ಬಹಳ ಕಷ್ಟ ಇದೆ. ನಮ್ಮ ಮಾನ್ಯಮಂತ್ರಿಗಳು ನಮ್ಮ ಸರ್ಕಾರದ ನೀತಿ ಪ್ರಕಾರ ಯಾವ ಯಾವ ಇಲಾಖೆಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕು ಅದನ್ನೆಲ್ಲಾ ವಿಚಾರಿಸಿ ನಮ್ಮ ದೇಶದಲ್ಲಿ ಕೃಷಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಇನ್ನು ಹೆಚ್ಚು ಉದ್ದಿಮೆಗಳು ಬೆಳೆಯಬೇಕೆಂದು, ವಿದ್ಯುಚ್ಛಕ್ತಿ ನಿರ್ಮಾಣ ಮಾಡಲಿಕ್ಕೆ ಹಾಗೂ ನೀರಾವರಿ ಕಾಮಗಾರಿ ಕೆಲಸಕ್ಕೆ ಹೆಚ್ಚು ಹಣ ಖರ್ಚು ಮಾಡಲಿಕ್ಕೆ ಈ ಬಡ್ಜೆಟ್‌ನಲ್ಲಿ ಹಣವನ್ನು ತೆಗೆದಿಟ್ಟಿದ್ದಾರೆ. ಇದಕ್ಕೆ ನಾನು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇವೊತ್ತು ನಮ್ಮದೇಶದಲ್ಲಿ ಬಡತನವನ್ನು ಹೇಗೆ ನಿವಾರಣೆ ಮಾಡಬೇಕೆಂಬುದು ಒಂದು ದೊಡ್ಡ ಪ್ರಶ್ನೆ ಇದೆ. ನಮ್ಮ ದೇಶದಲ್ಲಿ ಜಾಗ ಇಲ್ಲದಂತಹ ಜನರಿಗೆ ಜಾಗ ಕೊಡಬೇಕೆಂದು ೮ ಲಕ್ಷ ಜನರಿಗೆ ಜಾಗವನ್ನು ಕೊಟ್ಟಿದ್ದಾರೆ. ಆದೇ ರೀತಿಯಲ್ಲಿ ಇದೇ ವರ್ಷ ನಮ್ಮ ಸರ್ಕಾರದವರು ೨೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಒಂದು ಲಕ್ಷ ಮನೆಗಳನ್ನು ಕಟ್ಟುವ ನಿರ್ಧಾರ ತೆಗೆದುಕೊಂಡಿದ್ದಾರೆ. ಬಹಳ ಅತ್ಯಂತ ಅಭಿನಂದನೀಯವಾದುದು ಇದು ಈ ರೀತಿಯಾಗಿ ಬಡ ಜನರಿಗೆ ಅನುಕೂಲ ಮಾಡಿಕೊಡುವಂತಹ ಅನೇಕ ಕೆಲಸಕಾರ್ಯಗಳನ್ನು ಸರ್ಕಾರ

ಕೈಗೊಂಡಿದೆ ನಮ್ಮ ದೇಶದಲ್ಲಿ ದೇವರಾಜ್ ಅರಸ್ ಅವರು ಬಡವರಿಗೆ ಅನುಕೂಲ ಮಾಡಿಕೊಡುವಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದಾರೆ. ಜಾಗವಿಲ್ಲದಂತಹ ಬಡ ಜನರಿಗೆ ಜಾಗ ಒದಗಿಸುವುದು, ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು. ಇಷ್ಟೇ ಅಲ್ಲದೇ ಪದವೀಧರರಿಗೆ ಸ್ಟೈಫಂಡರಿ ಸ್ಕೀಮಿನಲ್ಲಿ ಕೆಲಸ ಕೊಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ತಿಂಗಳಿಗೆ ೧೫೦ರೂಪಾಯಿಗಳ ಪ್ರಕಾರ ಕೊಟ್ಟು ಪದವೀಧರರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಪದವೀಧರರನ್ನು ಹಾಗೆ ನಿರುದ್ಯೋಗ ಸಮಸ್ಯೆಯಲ್ಲಿ ಇಡಬಾರದು ಎಂದು ಅವರಿಗೆ ಈ ರೀತಿಯ ಸ್ಟೈಫಂಡರಿ ಯೋಜನೆ ಜಾರಿಗೆ ತಂದು ಎಲ್ಲ ಕಡೆ ಅವರುಗಳಿಗೆ ಕೆಲಸ ಒದಗಿಸಿಕೊಟ್ಟಿದ್ದಾರೆ. ಇದು ಬಹಳ ಅತ್ಯಂತ ಉತ್ತಮವಾದಂತಹ ಯೋಜನೆ. ಅದೇ ರೀತಿ ನಮ್ಮ ಹಿಂದೂಸ್ತಾನದಲ್ಲಿ ಕೂಲಿ ಮಾಡತಕ್ಕಂಥ ಕೂಲಿಗಾರರು ಏನಿದ್ದಾರೆ ಅವರಿಗೆ ಯಾವಾಗಲೂ ಉದ್ಯೋಗ ಸಿಕ್ಕುವುದಿಲ್ಲ. ಕೆಲವು ದಿವಸಗಳು ಮಾತ್ರ ಕೂಲಿ ಕೆಲಸ ಸಿಕ್ಕಿ ಇನ್ನು ಕೆಲವು ದಿವಸ ಕೂಲಿ ಕೆಲಸ ಇಲ್ಲದೇ ಹಾಗೆ ಉಳಿಯಬೇಕಾಗುತ್ತದೆ. ಇಂತಹವರಿಗೂ ಕೂಡ ನಮ್ಮ ಸರ್ಕಾರ ಒಂದು ಯೋಜನೆಯನ್ನು ಮಾಡಿ. ಯಾವ ಕಾಲದಲ್ಲಿ ಉದ್ಯೋಗ ಇರುವುದಿಲ್ಲ ಆ ಕಾಲದಲ್ಲಿ ಪ್ರತಿಯೊಬ್ಬ ಕೂಲಿಗಾರನಿಗೂ ಕೂಡ ೧೦೦ ದಿವಸಗಳ ಕಾಲ ಕೆಲಸ ಕೊಡುವಂತಹ ಒಂದು ಯೋಜನೆಯನ್ನು ಮಾಡಿದ್ದಾರೆ. ಇದು ಬಹಳ ಅತ್ಯಂತ ಸುಂದರವಾದಂತಹ ಒಂದು ಯೋಜನೆ. ಇಷ್ಟೆಲ್ಲಾ ಯೋಜನೆಗಳನ್ನು ಮಾನ್ಯಮಂತ್ರಿಗಳು ಮಾಡಿದರೂ ಕೂಡ ಅಲ್ಲಲ್ಲೇ ಬಡ್ಜಟ್ ಮೇಲೆ ಟೀಕೆಗಳು ಬರುತ್ತಾ ಇವೆ. ಇದು ಸ್ವಾಭಾವಿಕ. ಇವೊತ್ತು ಮಾನ್ಯ ಮಂತ್ರಿಗಳ ಬಡ್ಜಟ್ ತಯಾರಿಸಕ್ಕದ್ದು ಬಹಳ ಕಠಿಣ ಇದೆ ಏಕೆಂದರೆ ಈ ಬಡ್ಜಟ್ ತಯಾರು ಮಾಡ ಬೇಕಾದರೆ ಪ್ರತಿಯೊಂದು ವಿಚಾರವನ್ನು ಜ್ಞಾಪಕದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ಬಡ್ಜಟ್ ತಯಾರು ಮಾಡುವ ಕೆಲಸ ಬಹಳ ಕಷ್ಟದ ಕೆಲಸ ಬಡ್ಜಟ್ ತಯಾರು ಮಾಡಿ ಎಲ್ಲರ ಮನಸ್ಸನ್ನು ಸಮಾಧಾನ ಮಾಡಲಿಕ್ಕೆ ಸಾಧ್ಯವಿಲ್ಲ. ಏಕಂದರೆ ಪ್ರತಿಯೊಬ್ಬರಲ್ಲೂ ಭಿನ್ನಭಿನ್ನ ವಿಚಾರ ಸರಣಿಗಳು ಇರುತ್ತವೆ. ಆದುದರಿಂದ ಎಲ್ಲರನ್ನೂ ಸಮಾಧಾನ ಮಾಡಲಿಕ್ಕೆ ಆಗುವುದಿಲ್ಲ. ಮಾನ್ಯ ನೆಹರೂರವರು ಏನು ಹೇಳಿದ್ದಾರೆ ಅಂದರೆ, there are as many problem as there are people in India. ಪ್ರತಿಯೊಬ್ಬರಿಗೂ ಒಂದೊಂದು ಸಮಸ್ಯೆ ಇರುತ್ತದೆ. ಯಾವುದೇ ಸರ್ಕಾರವೂ ಕೂಡ ಎಲ್ಲರನ್ನೂ ಸಮಾಧಾನ ಮಾಡಲಿಕ್ಕೆ ಆಗುವುದಿಲ್ಲ. ಇದುವರೆಗೂ ಇಲ್ಲಿ ಚರ್ಚೆ ಏನು ನಡೆದಿದೆ ಅನ್ನುವುದನ್ನು ಕೇಳುತ್ತಿದ್ದೇವೆ. ಇವೊತ್ತು ಒಬ್ಬ ಸದಸ್ಯರು ಒಂದು ವಿಚಾರದ ಬಗ್ಗೆ ಟೀಕೆ ಮಾಡಿದರೆ ಮತ್ತೊಬ್ಬ ಸದಸ್ಯರು ಮತ್ತೊಂದು ವಿಚಾರದ ಬಗ್ಗೆ ಟೀಕೆ ಮಾಡುತ್ತಾರೆ. ಅದು ಅವರ ಕರ್ತವ್ಯ. ಅದನ್ನು ನಾನು ದೋಷ ಎಂದು ಹೇಳುವುದಿಲ್ಲ. ಯಾವ ಯಾವ ಸದಸ್ಯರಿಗೆ ಯಾವ ಯಾವ ವಿಚಾರದ ಮೇಲೆ ಆಸಕ್ತಿ ಇರುತ್ತದೆ ಆ ವಿಚಾರದ ಮೇಲೆ ಮಾತನಾಡುತ್ತಾರೆ. ನಮ್ಮ ಮಾನ್ಯ ಸದಸ್ಯರೊಬ್ಬರು ಹರಿಜನರ ವಿಷಯದ ಬಗ್ಗೆ ಬಹಳ ಕಳಕಳಿಯನ್ನು ತೋರಿ ಮಾತನಾಡಿದರು, ಅವರು ಹೆಸರು ನನಗೆ ನೆನಪಾಗುತ್ತಾ ಇಲ್ಲ. ಅವರು ತಮ್ಮ ಗ್ರಾಮದಲ್ಲಿ ಹರಿಜನರಿಗೆ ಎರಡು ಹೊತ್ತು ಊಟ ಸಿಕ್ಕುವುದಿಲ್ಲ ಎನ್ನತಕ್ಕ ವಿಚಾರವನ್ನು ಹೇಳಿದರು. ಮಾನ್ಯ ಸದಸ್ಯರು ಅಷ್ಟು ಮಾತ್ರ ನೋಡಿದ್ದಾರೆ, ಅವರು ರಾಜ್ಯ ಎಲ್ಲಾ ನೋಡಲಿಲ್ಲ, ದೇಶ ಎಲ್ಲಾ ನೋಡಲಿಲ್ಲ. ಹರಿಜನರ ಗತಿ ಏನಾಗಿದೆ, ಅವರಿಗೆ ಎರಡು ಹೊತ್ತು ಊಟ ಸಿಕ್ಕುವುದಿಲ್ಲ ಎನ್ನುವ ಅರಿವು ಎಲ್ಲರಿಗೂ ಬರಬೇಕು. ಇವೊತ್ತು ಸರ್ಕಾರದವರಿಗೆ ಅರಿವು ಅದಂತೆ ಅಧಿಕಾರಿಗಳಿಗೆ ಅರಿವು ಆಗಿಲ್ಲ. ಆ ಅರಿವು ಅಧಿಕಾರಿಗಳಿಗೆ ತೀವ್ರವಾಗಿ ಆಗಬೇಕು. ನನ್ನ ಲೆಕ್ಕದ ಪ್ರಕಾರ ಈ ಬಡತನ ನಿವಾರಣೆ ಮಾಡುವ ಕಾರ್ಯವನ್ನು ಸರ್ಕಾರದವರು ಮಾಡಿದರೆ ಮಾತ್ರ ಸಾಧ್ಯ ವಾಗುವುದಿಲ್ಲ. ಸರ್ಕಾರದಲ್ಲಿ ಕೆಲಸ ಮಾಡತಕ್ಕಂಹ ಅಧಿಕಾರಿ ವರ್ಗ, ನಮ್ಮ ಸಮಾಜದಲ್ಲಿರತಕ್ಕಂತಹ ರಾಜಕಾರಣಿಗಳು ಇವರೆಲ್ಲರಲ್ಲೂ ಆ ಅರಿವು ಬಂದರೆ ಮಾತ್ರ ಸಾಧ್ಯ ಇಲ್ಲದಿದ್ದರೆ ಸಾಧ್ಯವಿಲ್ಲ. ಇನ್ನು ಬೆಂಗಳೂರು ಕೊಳೆಚೆ ಪ್ರದೇಶಗಳ ವಿಚಾರದಲ್ಲ ಕೆಲವು ಮಾತುಗಳು ಬಂದವು. ಈ ಸಂದರ್ಭದಲ್ಲಿ ಕೊಳಚೆ ಪ್ರದೇಶಗಳಲ್ಲಿರತಕ್ಕವರಿಗೆ ಯಾವ ರೀತಿಯ ಸವಲತ್ತುಗಳು ಇರುವುದಿಲ್ಲ ಎನ್ನುವ ಮಾತುಗಳು ಕೂಡ ಬಂದವು. ಅದರೆ ಇದನ್ನು ಹೇಗೆ ನಿರ್ಮೂಲನ ಮಾಡಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆ ಇದೆ. ಇವೊತ್ತು ಬೆಂಗಳೂರು ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡಿದರೆ ಇಡೀ ನಮ್ಮ ದೇಶದ, ನಮ್ಮ ರಾಜ್ಯದ ಕೊಳಚೆ ಪ್ರದೇಶವನ್ನು ನಿರ್ಮೂಲನ ಮಾಡಿದಂತೆ ಆಗುವುದಿಲ್ಲ. ಬೆಂಗಳೂರಿನಲ್ಲಿ ಇದ್ದವರಿಗೆ ಬೆಂಗಳೂರಿನ ಕೊಳಚೆ ಪ್ರದೇಶ ಕಾಣುತ ದೆ. ಆದೇ ಗ್ರಾಮಾಂತರ ಪ್ರದೇಶಗಳಲ್ಲಿ, ಹರಿಜನರ ಪ್ರದೇಶಗಳು ಇರತಕ್ಕದ್ದು ಕೊಳಚೆ ಪ್ರದೇಶಗಳಲ್ಲಿಯೇ ಇವೊತ್ತು ಆ ಕೊಳಚೆ ಪ್ರದೇಶಗಳನ್ನೆಲ್ಲಾ ಯಾವ ರೀತಿ ನಿವಾರಣೆ ಮಾಡಬೇಕು ಎನು ವುದು ಬಹಳ ದೊಡ್ಡ ಸಮಸ್ಯೆ ಇದೆ. ಆದುದರಿಂದ ಇದರ ಬಗ್ಗೆ ನಾವು ಒಂದು ಊರು, ಒಂದು ಗ್ರಾಮ ವಿಚಾರ

ಮಾಡಬೇ, ರಾಜ್ಯ, ದೇಶದ ವಿಚಾರ ಮಾಡುವುದಾದರೆ ನಾವು ಮಾಡಬೇಕಾದಂತಹ ಕೆಲಸ ಬಹಳಷ್ಟು ಇದೆ. ಈಗ ನಮ್ಮಲ್ಲಿ ಏನಾಗಿದೆ ಅಂದರೆ ಒಬ್ಬ ಸದಸ್ಯರು ನಮ್ಮಲ್ಲಿ ರಸ್ತೆಗಳು ಆಗಬೇಕು ಎಂದು ಹೇಳಿದರೆ ಮತ್ತೊಬ್ಬ ಸದಸ್ಯರು ನಮ್ಮಲ್ಲಿಗೆ ಹೆಚ್ಚು ಬಸ್ಸು ಸೌಲಭ್ಯವಾಗ ಬೇಕು ಎಂದು ಹೇಳುತಾರೆ. ಇನ್ನೊಬ್ಬರು ನಮ್ಮ ಜಾಮೀನು ಹತ್ತಿರ ನೀರಿನ ಕಾಲುವೆ ಹೋಗಬೇಕೆಂದು ಹೇಳುತ್ತಾರೆ. ಈ ರೀತಿ ಒಬ್ಬೊಬ್ಬ ಸದಸ್ಯರು ಒಂದೊಂದು ರೀತಿಯಲ್ಲಿ ಹೇಳುತ್ತಾ ಇರುತ್ತಾರೆ. ಅದುದರಿಂದ ಎಲ್ಲರದೂ ಒಂದೇ ವಿಚಾರ ಸರಣಿ ಆಗಲಿಕ್ಕೆ ಸಾಧ್ಯವಿಲ್ಲ ಯಾವಾಗಲೂ ಬಡ್ಜೆಟ್ ಮೇಲೆ ಟೀಕೆ ಆಗುವುದು ಸ್ವಾಭಾವಿಕವಾಗಿ ಇರುತ್ತದೆ. ನಾನು ಪ್ರತಿಯೊಂದು ಸಾರಿಯೂ ನೋಡುತ್ತಲೇ ಇದ್ದೇನೆ. ಈ ಬಡ್ಜೆಟ್ ಬಂದಾಕ್ಷಣ ಒಂದು ಕರಪ್‌ಷನ್ ಎದ್ದುಬಿಡುತ್ತದ. ಅದರೊಳಗೆ ಶ್ರೀ ದೇವರಾಜಅರಸ್‌ರವರ ಸರ್ಕಾರ ದೇಶದಲ್ಲಿ ಬಹಳ ಉತ್ತಮವಾದ ಕೆಲಸವನ್ನು ಮಾಡಿದೆ. ಬಡ ಜನರ ಕಡೆಗೆ ಮೊದಲು ಗಮನ ನೀಡಿ ಬಡವರ ಜೀವನ ಉತ್ತಮ ಗೊಳಿಸಲು ಪೂರ್ಣ ಪ್ರಯತ್ನ ಮಾಡುತ್ತಿರುವ ಸರ್ಕಾರವೆಂದರೆ ಇದು. ಇಲ್ಲಿ ಕೆಲವು ಸದಸ್ಯರು ಟೀಕೆ ಮಾಡಿ ಮಾತನಾಡುವಾಗ ತಾವು ಏನು ಟೀಕೆ ಮಾಡುತ್ತಿದ್ದೇವೆಂದು ಯೋಚನೆ ಮಾಡಲಿಲ್ಲ. ಸ್ವಾಮಿ ಒಂದು ಮಾತು ಹೇಳುವುದಾದರೆ, ಇವತ್ತು ನಮ್ಮ ಸರ್ಕಾರ ಅಕ್ಟ್ರಾಯ್ ರದ್ದು ಮಾಡಿದೆ. ಈ ಒಂದು ಸಮಸ್ಯೆ ಬಹಳ ದಿವಸಗಳಿಂದಲೂ ಇತ್ತು. ಇಂಥ ಒಳ್ಳೆಯ ಕೆಲಸವನ್ನು ಮಾಡಿದ್ದರೂ ಕೂಡ ಮಾನ್ಯ ಸದಸ್ಯರಾದ ಶ್ರೀಮಾನ್ ರಾಮ್‌ದೇವ್‌ರವರು ಮಾತನಾಡುವಾಗ 'ನೀವು ನಾಳೆ ಬರಲಿರುವ ಬೆಂಗಳೂರು ನಗರಸಭೆಯ ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಈ ರೀತಿ ಅಕ್ಟ್ರಾಯ್‌ನ್ನು ರದ್ದುಮಾಡಿದಿರಿ'' ಎಂದು ಹೇಳಿದರು. ಈ ರೀತಿ ಟೀಕೆ ಮಾಡುವುದು ಎಲ್ಲರಿಗೂ ಬರುತ್ತದೆ. ಇನ್ನೊಬ್ಬ ಸದಸ್ಯರು ಮಾತನಾಡುವಾಗ ''ನೀವು ಹರಿಜನ ಗಿರಿಜನರ ಮತವನ್ನು ಪಡೆದುಕೊಳ್ಳುವ ಸಲುವಾಗಿ ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೀರಿ'' ಎಂದು ಹೇಳಿದರು. ಹಾಗಾದರೆ, ನಮ್ಮ ಸರ್ಕಾರ ಬಡವರಿಗಾಗಿ, ಅವರ ಉದ್ಧಾರಕ್ಕಾಗಿ ಒಳ್ಳೆಯ ಕೆಲಸಗಳನ್ನು ಮಾಡುವುದು ಬೇಡವೆ ? ನಾವು ರಾಜಕೀಯದಲ್ಲಿದ್ದೇವೆ, ರಾಜಕಾರಣಿಗಳಾಗಿರುವುದರಿಂದ ನಾವು ಚುನಾವಣೆಗಳಲ್ಲಿ ಗೆಲ್ಲುವುದು ಇದೆ. ನಾವು ಇವತ್ತು ಸರಿಯಾಗಿ ಕೆಲಸಮಾಡಿದರೆ ಅವರು ನಮಗೆ ಓಟು ಕೊಡುತ್ತಾರೆ ಮತ್ತೊಬ್ಬರು ಸದಸ್ಯರು ಹೇಳಿದರು, ದೇವರಾಜಅರಸ್‌ರವರ ಸರ್ಕಾರ ''ಕರಪ್ಟ್'' ಎಂದು. ಅದೇ ಸಂದರ್ಭದಲ್ಲಿ ಅದೇ ಪಕ್ಷಕ್ಕೆ ಸೇರಿದ ಮಾನ್ಯ ಜೆ. ಹೆಚ್. ಪಾಟೀಲ್ ರವರು ''ಈ ಕರಪ್‌ಷನ್ ಎಂಬುದು ನಮ್ಮ ರಾಜ್ಯದಲ್ಲೂ ಇದೆ, ಕೇಂದ್ರ ಸರ್ಕಾರದಲ್ಲೂ ಇದೆ, ಜಗತ್ತಿನ ಎಲ್ಲ ಕಡೆಗಳಲ್ಲೂ ಇದೆ'' ಎಂದು ತಿಳಿಸಿದರು ಅವರ ಮಾತನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಅದಕ್ಕೂ ಮುಂಚಿತವಾಗಿ ಸದಸ್ಯರಾದ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ''All politicians are named as Corrupt'' ಎಂದು ಹೇಳಿದರು. ಅದನ್ನು ಕೇಳಿ ನಾವು ಕರಪ್ಟೇ ಎಂದು ಆಶ್ಚರ್ಯವಾಯಿತು. ಸಾಮಾನ್ಯವಾಗಿ ಯಾವ ಕೆಲಸವಾಗುವುದಿಲ್ಲವೆಂದು ಗೊತ್ತಾಗುತ್ತದೆ. ಅಂಥ ಸಂದರ್ಭದಲ್ಲಿ ದುಡ್ಡು ಕೊಟ್ಟು ಕೆಲಸಮಾಡಿಸಿಕೊಳ್ಳಬೇಕಾದ ಸಂದರ್ಭ ಬರುತ್ತದೆ. ಅದು ಇರಬಹುದು. ಕೆಲವರಿಗೆ ದುಡ್ಡು ಕೊಟ್ಟು ಕೆಲಸ ಮಾಡಿಸಿಕೊಳ್ಳುವ ಶಕ್ತಿ ಇರುತ್ತದೆ. ಅದೇ ರಾಜಕಾರಣಿಗಳಾದ ನಾವು ಏನು ಮಾಡುತ್ತೇವೆಂದರೆ, ಯಾವ ಕೆಲಸ ಆಗುವುದಿಲ್ಲ ಎಂದು ಗೊತ್ತಾಗುತ್ತದೆ, ಆಗ ಸಂಬಂಧಪಟ್ಟ ಅಧಿಕಾರಿಗಳ ಮೇಲಾಗಲಿ, ಅಥವಾ ಸಂಬಂಧಪಟ್ಟ ಮಂತ್ರಿಗಳ ಮೇಲಾಗಲಿ, ಒತ್ತಡವನ್ನು ತಂದು ನಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತೇವೆ. ಅಂದರೆ ಇದು ಕರಪ್‌ಷನ್ ಆದಂತಾಗುವುದಿಲ್ಲವೆ ? ಇವತ್ತು ಸಮಾಜದಲ್ಲಿ ಗುಂಪುಗಾರಿಕೆ. ಜಾತೀಯತೆ ಇವುಗಳು ಜಾಸ್ತಿಯಾಗಿ ಕರಪ್‌ಷನ್ ಹೆಚ್ಚುವುದಕ್ಕೆ ಅವಕಾಶವಾಗಿದೆ ಇವತ್ತು ಕರಪ್ಟ್ ಆಗಿರದಿದ್ದರೆ ಅವರಿಗೆ ಹೊಟ್ಟೆ ತುಂಬುವುದಿಲ್ಲ. ಯಾರೇ ಆಗಲಿ, ನ್ಯಾಯ ಸಮ್ಮತವಾದ ಮಾರ್ಗದಲ್ಲೆ ಹೋಗಿ ತಮ್ಮ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವುದಾದರೆ ಆಗ ನಮ್ಮ ರಾಜ್ಯದಲ್ಲಿ ಈ ಕರಪ್‌ಷನ್ ಎಂಬುದೇ ಇರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಈ ಕರಪ್‌ಷನ್ ಬಗ್ಗೆ ನಾವು ಇಲ್ಲಿ ಹೆಚ್ಚು ಮಾತನಾಡುವುದು ಬೇಡ. ನಾವೆಲ್ಲರೂ ಕರಪ್ಟ್ ಇದ್ದೇವೆ. ಮೊದಲು ನಾವೆಲ್ಲರೂ ಒಳ್ಳೆಯ ಮಾರ್ಗದಲ್ಲಿ, ನ್ಯಾಯ ಸಮ್ಮತ ಮಾರ್ಗದಲ್ಲಿ, ನಡೆಯುವುದನ್ನು ಕಲಿಯಬೇಕು.

ಸ್ವಾಮಿ, ಮತ್ತೊಂದು ವಿಷಯ ಹೇಳುವುದಾದರೆ, ಮಾನ್ಯ ಸದಸ್ಯರಾದ ಶ್ರೀಮಾನ್ ವೈ. ರಾಮಕೃಷ್ಣರವರು ಮಾತನಾಡುತ್ತಾ, ದೇಶದಲ್ಲಿ ಬೇರೆ ಬೇರೆ ಬಾಬುಗಳಿಗೆ ಖರ್ಚು ಮಾಡತಕ್ಕ ಹಣವನ್ನೆಲ್ಲಾ ನಿಲ್ಲಿಸಿ ಅದೇ ಹಣವನ್ನು ಕೊಳಚೆ ಪ್ರದೇಶದಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿ ಎಂದು ಹೇಳಿದರು. ಇಂಥ ಮಾತನಾಡುವವರು ದೇಶದಲ್ಲಿ ಎಷ್ಟ ಜನರಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ

ಮಾಡಬೇಕಾದರೆ ಕೇವಲ ದೇವರಾಜ ಅರಸ್‌ರವರೊಬ್ಬರಿಂದ. ಅಥವಾ ಅವರ ಸರ್ಕಾರದಿಂದ ಆಗುವುದಿಲ್ಲ. ಇದಕ್ಕೆ ರಾಷ್ಟ್ರದಲ್ಲಿರತಕ್ಕ ಎಲ್ಲಿ ಸರ್ಕಾರಗಳೂ, ಜನತಾ ಪ್ರತಿನಿಧಿಗಳೂ, ಸಮಾಜದ ಎಲ್ಲ ವರ್ಗದವರೂ ಒಗ್ಗಟ್ಟಾಗಿ ಕೆಲಸಮಾಡಿದರೆ ಮಾತ್ರ ಇದಂ ಸಾಧ್ಯವಾಗುತ್ತದೆ.

ಸ್ವಾಮಿ, ಇನ್ನೊಂದು ವಿಶೇಷ ವಿಚಾರವನ್ನು ಹೇಳುವುದಾದರೆ, ಒಬ್ಬ ಮಾನ್ಯ ಸದಸ್ಯರು ಮಾತನಾಡುತ್ತಾ, ಈ ಕೊಳಚೆ ಪ್ರದೇಶಗಳು ಹೊಸದಾಗಿ ಹುಟ್ಟಿಕೊಳ್ಳುದಂತೆ ನೋಡಿಕೊಳ್ಳುವ ಸಲುವಾಗಿ ಒಂದು ಬೋರ್ಡ್‌ನ್ನು ನಿರ್ಮಿಸ ಬೇಕೆಂದು ಹೇಳಿದರು. ಅವರ ಮಾತು ಬಹಳ ಸುಂದರವಾದ್ದು, ಅವರ ಮಾತನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇಲ್ಲಿ ಒಂದು ಮಾತು ಹೇಳುವುದಾದರೆ, ನಮ್ಮಲ್ಲಿ ''ಮೃಗಜಲ'' ಎಂದು ಹೇಳತ್ತೇವೆ. ಇದು ಬೇಸಿಗೆಯಲ್ಲಿ ದೂರದಲ್ಲಿ ನೀರು ಕಂಡಂತೆ ಕಾಣುತ್ತದೆ. ಜಿಗರೆ ನೀರಡಿಸಿರುವಾಗ ದೂರದಲ್ಲಿ ಈ ಮೃಗಜಲವನ್ನು ಕಂಡು ಅಲ್ಲಿ ನೀರು ಹರಿಯುತ್ತಿದೆಯೆಂದು ತಿಳಿದು ಅಲ್ಲಿಗೆ ಹೋಗುತ್ತದೆ ಅದರೆ ಅಲ್ಲಿ ನೀರೇ ಇರುವುದಿಲ್ಲ ಅದೇ ರೀತಿ ಗ್ರಾಮಾಂತರ ಪ್ರದೇಶದ ಬಡ ಜನರೂ ಕೂಡ ಏನೋ ಒಂದು ಆಸೆಯನ್ನಿಟ್ಟುಕೊಂಡ ದುಡಿದರು ಕೂಡ ಅವರಿಗೆ ಜೀವನಕ್ಕೆ ಆಗುವಷ್ಟು ಸಿಕ್ಕುವುದಿಲ್ಲ. ಹಾಗಾದರೆ ಅವರು ಎಲ್ಲಿಗೆ ಹೋಗಬೇಕು ? ಅಂಥ ಬಡ ಜನರು ಹೊಟ್ಟೆಗೆ ಕೂಳು, ನೀರು ಇಲ್ಲದ ಸಮಯದಲ್ಲಿ ಪಟ್ಟಣಗಳಿಗೆ ಬರುತ್ತಾರೆ. ಆದರೆ ಇಲ್ಲಿಗೆ ಬಂದರೆ ನಾವು ಸುಖವಾಗಿರುತ್ತೇವೆಂದು ಅವರು ಬರುವುದಿಲ್ಲ. ಪಟ್ಟಣಗಳಲ್ಲಾದರೆ ಹೇಗೋ ತಮ್ಮ ಜೀವನವನ್ನು ನಡೆಸಬಹುದೆಂದು ಬರುತ್ತಾರೆ. ಈ ರೀತಿ ಬಂದವರು ಅಲ್ಲಲ್ಲೆ ಗುಡಿಸಲುಗಳನ್ನು ಹಾಕಿಕೊಂಡು ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡುತ್ತಾರೆ. ಅದ್ದರಿಂದ ಬಡವರ ವಿಷಯ ಬಂದಾಗ ಬಹಳ ಸೂಕ್ಷ್ಮವಾಗಿ ಅಭ್ಯಾಸ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ದೇಶದಲ್ಲೆಲ್ಲ ದೊಡ್ಡ ದೊಡ್ಡದಾಗಿ ಮಾತನಾಡುತ್ತಿದ್ದರೆ. ಅಸ್ಪೃಶ್ಯತೆಯ ಬಗ್ಗೆ ಹೋರಾಡಿದಂಥ ಮಹಾತ್ಮಾ ಗಾಂಧಿಜೀಯವರ ಶಿಷ್ಯರು, ಅನುಯಾಯಿಗಳೆಂದು ಹೇಳಿಕೊಂಡು ಜನರು ಮನಸ್ಸನ್ನು ಸೆಳೆಯುವುದರ ಸಲುವಾಗಿ ಒಂದು ರೀತಿಯಾದ ನಾಟಕವನ್ನೇ ಆಡುತ್ತಿದ್ದಾರೆಂದರೆ ಅದು ತಪ್ಪಾಗಲಾರದು. ಮಹಾತ್ಮಾ ಗಾಂಧಿಯವರ ತತ್ವವನ್ನು ಇಂದಿಗೂ ಯಾರು ಆಚರಣೆಗೆ ತರುತ್ತಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇಂದಿಗೂ ಕುಡಿಯುವ ನೀರಿನ ಸಮಸ್ಯೆ ಹಾಗೆಯೇ ಉಳಿದಿರುತ್ತದೆ. ಸಾಮೂಹಿಕವಾಗಿ ಹರಿಜನರು ನೀರನ್ನು ತಗೆದುಕೊಳ್ಳಲು ಅವಕಾಶವಿರುವುದೇ ಇಲ್ಲ. ಬಹಿಷ್ಕಾರಗಳನ್ನು ಹಾಕುತ್ತಲೇ ಇರುತ್ತಾರೆ. ಕಳೆದ ಮೂರು ವರ್ಷಗಳಲ್ಲಿ ಹರಿಜನರು ನೀರನ್ನು ತೆಗೆದುಕೊಳ್ಳುವ ಬಗ್ಗೆ ಬಹಿಷ್ಕಾರಗಳನ್ನು ಹಾಕುತ್ತಿರುವ ಬಗ್ಗೆ ಪತ್ರಗಳನ್ನು ಬರೆಯುತ್ತಲೇ ಇರುತ್ತಾರೆ ಯಾರಿಗೆ ಯಾವ ರೀತಿಯಲ್ಲಿ ಉತ್ತರವನ್ನು ಕೊಡಬೇಕು ತಿಳಿಯುತ್ತಿಲ್ಲ, ಸರ್ಕಾರದವರನ್ನು ಕೇಳಿದರೆ ಒಂದು ಊರಿಗೆ ಒಂದು ಬಾವಿಯನ್ನು ತೆಗೆಸಿರುತ್ತೇವೆ, ಅಲ್ಲಿ ಹೋಗಿ ಅವರು ನೀರನ್ನು ತುಂಬಲಿಅಸ್ಪೃಶ್ಯತೆ ಹೋಗಲಿ ಎನ್ನುವ ದೃಷ್ಟಿಯಿಂದಲೇ ಒಂದು ಊರಿಗೆ ಒಂದು ಬಾವಿಯನ್ನು ತೆಗೆಸುತ್ತಿರುವುದು ಎಂದು ಹೇಳುತ್ತಾರೆ ಈ ರೀತಿಯಾದ ಬಾವಿ ಬೇಡವೆಂದು ಹೇಳುತ್ತೇನೆ. ಪ್ರದೇಶಗಳಲ್ಲಿ ಈ ರೀತಿಯಾದ ಸ್ವತಂತ್ರವಾಗಿ ನೀರನ್ನು ತುಂಬಲು ಬಾವಿಗಳನ್ನು ತೆಗೆಸಬೇಕೆಂಬುದರ ಸಂಭಾವಿಸತಕ್ಕಂಥವ ರು ಬಗ್ಗೆ ವಿಚಾರವನ್ನು ಮಾಡಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಅಸ್ಪೃಶ್ಯತೆ ನಡೆಯುತ್ತಲೇ ಇರುತ್ತದೆ. ಇದನ್ನು ನೋಡುವವರು ಯಾರೂ ಇಲ್ಲ, ಯಾರೂ ಇಲ್ಲ. ಅಧಿಕಾರಿ ವರ್ಗದವರು ಕೂಡ ಸಹಾಯ ಮಾಡುತ್ತಾ ಇಲ್ಲ. ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಯವರಿಗೆ ಹೇಳಿದರು, ಎಷ್ಟೋ ಬಡಜನರಿಗೆ ೪೦ ಸಾವಿರಕ್ಕಿಂತಲೂ ಹೆಚ್ಚಿಗೆ ಸೈಟುಗಳನ್ನು ಕೊಟ್ಟಿರುತ್ತೇವೆಂದು. ನನ್ನ ಕ್ಷೇತ್ರವಾದ ಸದಲಗದಲ್ಲಿ ಒಂದು ಸೈಟನ್ನು ಕೊಟ್ಟಿಲ್ಲ. ನಾನೇ ನಾದರೂ ತಪ್ಪು ತಿಳಿದುಕೊಂಡಿರುತ್ತೇನೆಯೋ ಎಂದು ಪ್ರತಿಯೊಂದು ಗ್ರಾಮಕ್ಕೂ ಹೋಗಿ ಕೇಳಿದೆ, ಅವರು ನಮಗೆ ಒಂದಿಷ್ಟು ಜಾಗವನ್ನು ಕೊಟ್ಟರೆ ಚಾಪೆಯನ್ನಾದರೂ ಕಟ್ಟಿಕೊಂಡು ಬದುಕುತ್ತೇವೆಂದು ಹೇಳಿಕೊಂಡಿರುತ್ತಾರೆ. ಚಿಕ್ಕೋಡಿ ತಾಲ್ಲೂಕ್ಕಿನಲ್ಲಿ ಸೈಟನ್ನು ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದವರು ಕೂಡಲೇ ಎನ್‌ಕ್ವಯರಿ ಮಾಡಬೇಕೆಂದು ಹೇಳುತ್ತೇನೆ. ಬಿ.ಡಿ.ಓ ಅವರನ್ನು ನಾವು ಸೈಟುಗಳನ್ನು ಹಂಚಬೇಕೆಂದು ಕೇಳಿದರೆ ಅವರು ಡೆಪ್ಯೂಟಿ ಕಮಿಷನರ್‌ರವರಿಗೆ ಬರೆದಿದ್ದೇವೆ, ಅವರು ನಮಗೆ ಇದರ ಬಗ್ಗೆ ಏನು ಉತ್ತರ ಕೊಟ್ಟಿಲ್ಲವೆಂದು ಹೇಳುತ್ತಾರೆ. ಇದೆಲ್ಲ ಲೋಕಲ್ ಪಾಲಿಟಿಕ್ಸ್ ಹಿನ್ನೆಲೆಯಿಂದ ನಡೆಯುತ್ತಿದೆ. ಸರ್ಕಾರ ಎಲ್ಲ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹರಿಜನರ ಬಗ್ಗೆ ಯಾರಿಗೆ ಕಳಕಳಿಯಿಂದೆ ಅಂಥ ನಮ್ಮ ಮಿತ್ರ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಾವು ನೀವು ಎಲ್ಲರೂ ಕೆಲಸ ಮಾಡತಕ್ಕಂಥ ಸಮಾಜವನು ತಯಾರು ಮಾಡಬೇಕು, ಅಧಿಕಾರ ವರ್ಗದವರಿಗೆ

ನಾವು ಬಿಸಿ ಹಚ್ಚಬೇಕು. ಅವರು ದುರ್ಲಕ್ಷದಿಂದ ವರ್ತಿಸದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಹೇಳಿ. ಬಡಜನರ ಅಭಿವೃದ್ಧಿಗೆ ತೆಗೆದುಕೊಂಡಂಥ ಕಾರ್ಯಕ್ರಮಗಳಿಗೆ ಸರ್ಕಾರದವರನ್ನು ಅಭಿನಂದಿಸಿ ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವಿ. ರಾಜಶೇಖರನ್ (ಉತ್ತರಹಳ್ಳಿ).—ಮಾನ್ಯ ಸಭಾಪತಿಗಳೇ ನಮ್ಮ ಮಾನ್ಯ ಅರ್ಥಮಂತ್ರಿಗಳು ಈ ಒಂದು ಸದನದ ಮುಂದೆ ಇಟ್ಟಿರತಕ್ಕಂಥ ಆಯವ್ಯಯ ಏನು ಇದೆ ಇದರಿಂದ ನಿಜವಾಗಿಯೂ ಹಳ್ಳಿಗಾಡಿನ ರೈತರಬಗ್ಗೆ ಅಷ್ಟೊಂದು ಸಹಾಯವಾಗುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇದನ್ನು ಪ್ರಸ್ತಾಪ ಮಾಡುವಾಗ ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈವತ್ತಿನದಿವಸ ಈ ಒಂದು ಆಯವ್ಯಯದಿಂದ ನಿಜವಾಗಿಯೂ ಅನುಕೂಲ ದೊರೆಯಬೇಕಾಗಿರತಕ್ಕಂಥಾದ್ದು ಬಡರೈತರಿಗೆ. ಮಾನ್ಯ ಅರ್ಥಮಂತ್ರಿಗಳು ಮಾತನಾಡುತ್ತಾ ಮೊಟ್ಟಮೊದಲನೆಯ ಪ್ಯಾರದಲ್ಲಿ ಹೇಳಿದ್ದಾರೆ, ''ಆದರಲ್ಲಿಯೂ ವಿಶೇಷವಾಗಿ ಬಡವರ್ಗದವರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಮನಃಪೂರ್ವಕವಾದ ಪ್ರಯತ್ನಗಳನ್ನು ಕುರಿತು ಸರ್ಕಾರದವರ ಧೋರಣೆಯ ಸ್ಥೂಲ ವಿವರಣೆಯನ್ನು ನೀಡಿದ್ದೆ'', ಎಂದು ಹೇಳಿದ್ದಾರೆ. ಬಡವರ ಅಭಿವೃದ್ಧಿಯ ಕಾರ್ಯದಲ್ಲಿ ಎಷ್ಟರಮಟ್ಟಿಗೆ ತಮ್ಮ ಕಾರ್ಯಕ್ರಮಗಳು ಇದೆಯೆಂದು ಯೋಚನೆ ಮಾಡುವುದಾದರೆ ಇದು ನಿಜವಾಗಿಯೂ ಬಡಜನರ ಅಭಿವೃದ್ಧಿಕಾರ್ಯಗಳಲ್ಲಿ ಅಷ್ಟರಮಟ್ಟಿಗೆ ಸಹಭಾಗಿತ್ವವನ್ನು, ಅಷ್ಟು ಪ್ರಾತಿನಿಧ್ಯವನ್ನು ಪಡೆದಿಲ್ಲ ಎನ್ನತಕ್ಕಂಥಾದ್ದನ್ನು ಈವತ್ತಿನದಿವಸ ತಿಳಿಸಬೇಕಾಗಿದೆ.

ಆಯವ್ಯಯ ಮಂಡನೆಯಲ್ಲಿ ಹಣ ಬಂದಿರತಕ್ಕಂಥಾದ್ದು, ಖರ್ಚಾಗಿರತಕ್ಕಂಥಾದ್ದು ಏನು ಇರುತ್ತದೆ ಅದನ್ನೆಲ್ಲ ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಬಡ ಜನರ ತಲಾ ಬಡ್ಜೆಟ್ ಎಷ್ಟು ಎನ್ನತಕ್ಕಂಥಾದ್ದನ್ನು ಅವರು ಇಟ್ಟಿಲ್ಲ. ಈವತ್ತಿನ ದಿವಸ ಸರ್ಕಾರ ಬಹಳಷ್ಟು ಅನುಕೂಲತೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬಡಜನರಿಗೆ ಮಾಡಿದ್ದೇವೆಂದು ಹೇಳಿ ಸಾವಿರಾರು ಕೋಟಿ ರೂಪಾಯಿಗಳನ್ನು ಇವರಿಗಾಗಿ ವ್ಯಯ ಮಾಡುತ್ತಿದ್ದೇವೆಂದು ಹೇಳುತ್ತಿರುವಾಗ ಎಲ್ಲೋ ಅಲ್ಲಿ ಇಲ್ಲಿ ಸ್ವಲ್ಪ ಅನುಕೂಲವಾಗಿರಬಹುದು. ಅದನ್ನು ಒಪ್ಪುತ್ತೇನೆ, ಆದರೆ ಅದು ಎಷ್ಟರ ಮಟ್ಟಿಗೆ ಖರ್ಚುಮಾಡಿರುತ್ತಾರೆ ಅದರ ಪೂರ್ಣ ಲಾಭವನ್ನು ಜನತೆಯು ಪಡೆಯುವುದಕ್ಕೆ ಸಾಧ್ಯವಾಗಿದೆಯೋ ಎನ್ನುವುದನ್ನು ಈವತ್ತಿನದಿವಸ ಯೋಚನೆ ಮಾಡಬೇಕಾಗಿದೆ. ನಾನು ಮೊದಲೇ ಹೇಳಿದ ಹಾಗೆ ಸರ್ಕಾರ ಜನತೆಯ ಅಭಿವೃದ್ಧಿ ಕಾರ್ಯಗಳಲ್ಲಿ ಸಹಭಾಗಿತ್ವ ಹೊಂದಿದ್ದರೆ, ಎಷ್ಟರಮಟ್ಟಿಗೆ ಸರ್ಕಾರ ಜನಗಳ ಆಶೆ ಆಕಾಂಕ್ಷೆಗಳ ಕಡೆಗೆ ಗಮನ ಕೊಟ್ಟಿದೆ ಎಂಬುದರ ಬಗ್ಗೆ ಯೋಚನೆ ಮಾಡುವುದಾದರೆ ನಿಜವಾಗಿಯೂ ಅಷ್ಟರಮಟ್ಟಿಗೆ ಗಮನಕೊಟ್ಟಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈವತ್ತಿನದಿವಸ ಗ್ರಾಮಾಂತರ ಪ್ರದೇಶದ ಚಿತ್ರವೇನಿದೆ ಎಂಬುದರ ಬಗ್ಗೆ ಹೇಳುವುದಾದರೆ ಸ್ವತ: ನನ್ನ ಕ್ಷೇತ್ರದ ವಿಚಾರವಾಗಿ ಒಂದೆರಡು ಅಂಶಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅಪ್ಪಣೆ ಕೊಡುವುದಾದರೆ ಹೇಳುತ್ತೇನೆ. ಇದು ಬೆಂಗಳೂರಿಗೆ ೨ ಮೈಲಿ ದೂರದಲ್ಲಿ ಕಾರ್ಪೊರೇಷನ್ ಲಿಮಿಟ್ ಬಿಟ್ಟು ಒಂದು ಮೈಲಿ ಮುಂದೆ ಹೋದರೆ ಇಡಿ ಕ್ಷೇತ್ರದ ಒಂದು ಚಿತ್ರ ತಮಗೆ ಕಾಣುತ್ತಿದೆ. ಅಲ್ಲಿ ಸರಿಯಾದ ರಸ್ತೆ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ. ರಸ್ತೆಗಳಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ದೀಪಗಳಿಲ್ಲ. ಬಡಜನರ ಕಷ್ಟವನ್ನು ಇವತ್ತಿನ ದಿವಸ ಯಾರ ಮುಂದೆ ಹೇಳಬೇಕು, ಏನು ಮಾಡಬೇಕು ಎಂಬುದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳಿಗೆ ರಸ್ತೆಗಳ ವಿಚಾರದಲ್ಲಿ, ಕುಡಿಯುವ ನೀರಿನ ವಿಚಾರದಲ್ಲಿ, ದೀಪಗಳ ವಿಚಾರದಲ್ಲಿ ಮತ್ತು ಬಡಜನರ ಕಷ್ಟಕಾರ್ಪಣ್ಯಗಳ ವಿಚಾರದಲ್ಲಿ ಪತ್ರ ಬರೆದರೆ ಅತಿಶೀಘ್ರವಾಗಿ ಅದನ್ನು ಮಾಡಿಸಿಕೊಡುತ್ತೇವೆ. ಅಧಿಕಾರಿಗಳಿಗೆ ಈ ವಿಷಯದಲ್ಲಿ ನಿರ್ದೇಶನ ಕೊಟ್ಟಿದ್ದೇನೆ ಎಂದು ಪತ್ರ ಬರೆಯುತ್ತಾರೆ. ಆದರೆ ಅದು ಕಾರ್ಯವಾಗುತ್ತಿದೆಯೋ ಎಂಬುದನ್ನು ನೋಡಬೇಕು. ಇವತ್ತಿನ ದಿವಸ ಅಧಿಕಾರಿಗಳು ನಡೆಯುತ್ತಿರತಕ್ಕ ವೈಖರಿ ಏನು ಎಂಬುದನ್ನು ನೋಡಬೇಕು. ಇವತ್ತು ಪ್ರಜಾಪ್ರಭುತ್ವ ಎಂದರೆ ಜನತೆಯ ಪ್ರಜಾಪ್ರಭುತ್ವ participatary democracy ಆಗಬೇಕು. ಅದು ಆಗಬೇಕಾದರೆ ಬರೀ ಮಂತ್ರಿಗಳ ಜವಾಬ್ದಾರಿ ಮಾತ್ರ ಮುಖ್ಯವಲ್ಲ. ಮಂತ್ರಿಗಳಿಗಿಂತ ಹೆಚ್ಚಾಗಿ ಅಲ್ಲಿ ಆಡಳಿತ ನಡೆಸತಕ್ಕ ಆಡಳಿತಾಂಗದ ಜವಾಬ್ದಾರಿ ಹೆಚ್ಚಾಗಿದೆ ಎಂಬುದನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಸ್ವಾಮಿ, ಇವತ್ತಿನ ದಿವಸ ಈ ಸರ್ಕಾರದಲ್ಲಿ ನಾನಾ ಘಟ್ಟಗಳಲ್ಲಿರತಕ್ಕ ಅಧಿಕಾರಿಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದ್ದಾರೆ, ಮಂತ್ರಿಗಳು ಕೊಟ್ಟಂತಹ ನಿರ್ದೇಶನ

ವನ್ನು ಎಷ್ಟರಮಟ್ಟಿಗೆ ಜಾರಿಗೆ ತರುತ್ತಿದ್ದಾರೆ ಎಂಬುದನ್ನು ನೋಡಿದರೆ ನಿಜವಾಗಿಯೂ ನನಗೆ ವ್ಯಸನ ವಾಗುತ್ತದೆ. ಮಾನ್ಯ ಮಂತ್ರಿಗಳು ಸರ್ಕಾರೀ ಅಧಿಕಾರಿಗಳ ಮೇಲೆ ಒಂದು ಕಡಿವಾಣವನ್ನು ಇಟ್ಟಿಲ್ಲವೆಂದು ಹೇಳಬೇಕಾಗಿದೆ.

೪-೦೦ ಪಿ.ಎಂ.

ಒಬ್ಬ ವಿರೋಧಪಕ್ಷದ ಸದಸ್ಯರು.—ಕಡಿವಾಣವೇ ಇಲ್ಲ.

ಶ್ರೀ ಎಂ. ವಿ. ರಾಜಶೇಖರನ್.— ಕಡಿವಾಣವೇ ಇಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ಜನಗಳಿಗೆ ಇರತಕ್ಕ ಕಷ್ಟಸುಖಗಳನ್ನು ನಾವು ಮಂತ್ರಿಗಳ ಗಮನಕ್ಕೆ ತಂದು ಪರಿಹಾರವನ್ನು ಕೇಳಿದಾಗ ಮಂತ್ರಿಗಳು ಆಶ್ವಾಸನೆ ಕೊಡುತ್ತಾರೆ. ಆದರೆ ಸರ್ಕಾರೀ ಅಧಿಕಾರಿಗಳು ಎಷ್ಟರಮಟ್ಟಿಗೆ ಈ ಬಗ್ಗೆ ಗಮನ ಕೊಟ್ಟು ಜನರಿಗೆ ಅನುಕೂಲವನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನು ವಿಮರ್ಶೆ ಮಾಡುವುದಾದರೆ ಫಲಿತಾಂಶ ಅಷ್ಟೇನೂ ತೃಪ್ತಿಕರವಾಗಿಲ್ಲ ಎಂದು ಹೇಳ ಬೇಕಾಗಿದೆ. ಈ ಸಮಯದಲ್ಲಿ ನಾನು ಎಲ್ಲ ವಿಚಾರಗಳನ್ನೂ ಪಟ್ಟಿ ಮಾಡಿ ಹೇಳುವುದಕ್ಕೆ ಕಾಲಾವಕಾಶ ವಿಲ್ಲ. ಆದರೆ ಒಂದು ವಿಚಾರವನ್ನು ಮಾತ್ರ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮಿಷನ್ ಅವರು ಪಬ್ಲಿಕ್ ಗ್ರಿವೆನ್ಸಸ್ ವಿಚಾರದಲ್ಲಿ ಏನು ಶಿಫಾರಸು ಮಾಡಿದ್ದಾರೆ ಎಂಬುದನ್ನು ಈಗ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ನಾನು ಇದನ್ನು ಓದುವುದಕ್ಕೆ ಇಷ್ಟಪಡುತ್ತೇನೆ. ಅದು ಹೀಗಿದೆ.—

"The goals of administration wedded to the welfare ideology is to provide reasonable satisfaction to the people of the State. The functions of Government are so wide spread in a welfare State that they touch almost every aspect of citizen's daily life. Anything that causes dissatifaction to the citizen as a result of Governmental action or otherwise would constitute a public grievance. Public grievances are varied in kind and character. Some of them may be due to natural causes and others due to governmental action or inaction. Some of them may be justifiable and some easy and others difficult of solution. We are, however, concerned here with all public grievances caused either by nature or by administrative action or inaction which can be remedied by administrative machinery. The grievances which are justifiable are to be remidied by Courts of law. The grievances that can be set right by the administrative machinery are our present concern."

ಕಮಿಷನ್ನಿನವರು ಮಾಡಿರತಕ್ಕ ಶಿಫಾರಸುಗಳನ್ನು ಮಾತ್ರ ಇಲ್ಲಿ ನಾನು ಓದುವುದಕ್ಕೆ ಇಷ್ಟ ಪಡುತ್ತೇನೆ.

"Government should give priority considerations to the following preventive measures which will either plug or minimise sources of public grievances.

(a) The range of economic controls to be reduced to the minimum and operated only to the extent to the time and area necessary.

(b) Regorous enforcement of Rule of Law.

(c) Rules and Procedures to be made clear cut, unambiguous and expressed in simple language.

(d) Number of decision taking levels to be increased and delegation of powers to be adequate.

(e) Area of discretionary powers to be reduced to the minimum.

(f) Severe punishment to be imposed for

(i) non-exercise of powers;

(ii) evasion of responsibilities;

(iii) improper exercise and abuse of powers;

(iv) discrimination on grounds of caste, community and region."

Here I would like to add discrimination against political groups also.

(g) Adequate training to be given to all officers in—

(i) Public Relations;

(ii) Methods of procedures.

(h) Public to be well educated—

(i) on points of contacts;

(ii) procedures to be adopted in their dealings with government machinery for their various requirements.

(i) Special arrangements to be made provide all literature pertaining to common laws, rules and procedures, points of contact, etc., in English and the regional languages down to the taluk or block level."

ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಈ ಸಮಯದಲ್ಲಿ ಇದನ್ನು ಯಾತಕ್ಕೋಸ್ಕರ ಪ್ರಸ್ತಾಪ ಮಾಡಿದರೋ ಗೊತ್ತಾಗಲಿಲ್ಲ. ಒಂದು ವಿಚಾರವನ್ನು ಮಾತ್ರ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿಂದೆ ಅವರು ತಪ್ಪು ಮಾಡಿದ್ದರಿಂದ ನಾವೂ ತಪ್ಪು ಮಾಡಬೇಕು ಎಂಬ ವಾದವನ್ನು ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಮಾಡುವುದಾದರೆ.........

SRI S. M. SHEERNALY CHANDRASEKHAR.—The hon. member was almost defacto Chief Minister of Karnataka in 1962 and he was very powerful. What prevented him to solve the problems of the people?

ಶ್ರೀ ಎಂ. ವಿ. ರಾಜಶೇಖರನ್.—ಈ ಡೀಫ್ಯಾಕ್ಟೋ ಛೀಫ್ ಮಿನಿಸ್ಟರ್ ಎಂಬುದು ಈಚೆಗೆ ಬಂದಿರತಕ್ಕದ್ದು. ಅದು ಹಿಂದೆ ಇರಲಿಲ್ಲ. ನನ್ನ ಸಂಬಂಧಿಕರು ಮಂತ್ರಿಗಳಾಗಿದ್ದಾರೆ, ಮುಖ್ಯಮಂತ್ರಿಗಳಾಗಿದ್ದಾರೆ ಎಂಬುದನ್ನು ನೋಡದೇ ಕೆಲಸ ಮಾಡಿರತಕ್ಕವನು ನಾನು. ಆದರೆ ಮಾನ್ಯ ಚಂದ್ರಶೇಖರ್ ಅವರು ನಾನು ಆಗ ಡೀಫ್ಯಾಕ್ಟೋ ಚೀಫ್ ಮಿನಿಸ್ಟರ್ ಆಗಿದ್ದೆ ಎಂಬ ಮಾತನ್ನು ಏತಕ್ಕೆ ಹೇಳಿದರೋ

ಗೊತ್ತಿಲ್ಲ ; ನನಗಂತೂ ಈ ಮಾತಿನಿಂದ ಮನಸ್ಸಿಗೆ ಬಹಳ ನೋವಾಗಿದೆ. ಅವರೂ ಮೊದಲು ಸಹ ಭಾಗತ್ವದಿಂದ ನಮ್ಮ ಪಕ್ಷದಲ್ಲಿದ್ದರು. ಈಗ ಅಲ್ಲಿ ಹೋಗಿದ್ದಾರೆ. ಆದರೂ ಅವರಿಗೆ ಏನೂ ಅನುಕೂಲ ವಾಗಲಿಲ್ಲ. ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್ ಅವರು ನನ್ನ ಪರಮ ಸ್ನೇಹಿತರು. ಆದ್ದರಿಂದ ನಾನು ಅವರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮಿಷನ್ನಿನವರು ಮಾಡಿರತಕ್ಕ ಒಳ್ಳೆಯ ಸಲಹೆಗಳನ್ನಾದರೂ ನಮ್ಮ ಸರ್ಕಾರದವರು ಜಾರಿಗೆ ತರಲಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ನಿಜವಾಗಿ ಬಡವನಿಗೆ ಅನುಕೂಲ ಆಗ ಬೇಕಾದರೆ ಸರಿಯಾದ ಆಡಳಿತ ಇರಬೇಕು. ಅದು ಯಾವ ಪಕ್ಷದ್ದೇ ಆಗಿರಲಿ ಅದು ಮುಖ್ಯವಲ್ಲ. ಈಗ ಈ ಸರ್ಕಾರವನ್ನು ಕಾಂಗ್ರೆಸ್ (ಐ) ಪಕ್ಷದವರು ನಡೆಸುತ್ತಿದ್ದಾರೆ ಎಂಬ ದೃಷ್ಟಿಯಿಂದ ಆರೋಪಣೆಗಳನ್ನು ನಾನು ಮಾಡುತ್ತಿಲ್ಲ. ಹಿಂದೆ ಇದ್ದ ಪಕ್ಷವೂ ಇದೇ ರೀತಿ ಕೆಲಸ ಮಾಡಿದ್ದರೆ ಅದನ್ನೂ ನಾನು ಟೀಕೆ ಮಾಡುತ್ತೇನೆ. ತಪ್ಪನ್ನು ತಿದ್ದಿಕೊಂಡು ಸರಿಯಾಗಿ ಕೆಲಸ ಮಾಡಬೇಕು, ಬಡವನಿಗೆ ಅನುಕೂಲವಾಗ ಬೇಕಾದರೆ, ನ್ಯಾಯ ಸಿಗಬೇಕಾದರೆ ಆಡಳಿತಾಂಗ ಸರಿಯಾಗಿ ಕೆಲಸ ಮಾಡಬೇಕು. ಇವತ್ತಿನ ದಿವಸ ಮಾತ್ರವಲ್ಲ, ಹಿಂದಿನ ಸರ್ಕಾರದಲ್ಲಾಗಲೀ. ಮುಂದೆ ಬರತಕ್ಕ ಸರ್ಕಾರದಲ್ಲಾಗಲೀ ಹೆಚ್ಚಿಗೆ ಅನುಕೂಲ ಯಾರಿಗೆ ಸಿಗುತ್ತದೆ ಎಂದರೆ ಯಾರಿಗೆ ಹೆಚ್ಚು ಇನ್‌ಫ್ಲುಯೆನ್ಸ್ ಇದೆಯೋ, ಯಾರಿಗೆ ರಾಜಕಾರಣಿಗಳ ಸಂಬಂಧ ಇದೆಯೋ, ಅವರಿಗೆ ಮಾತ್ರ ಸಿಗುತ್ತಿದೆ. ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡ ಬೇಕಾಗಿದೆ. ಯಾವ ಅತೀ ಕಡುಬಡವನಿಗೆ ಮಂತ್ರಿಗಳ ಸಂಬಂಧವಾಗಲೀ, ಅವರ ಅಳಿಯಂದಿರ ಸಂಬಂಧ ವಾಗಲೀ, ಅಥವಾ ಅವರ ಅಣ್ಣಂದಿರ ಸಂಬಂಧವಾಗಲೀ ಇರುವುದಿಲ್ಲವೋ ಅಂಥವನಿಗೂ ನಮ್ಮ ರಾಜ್ಯ ದಲ್ಲಿ ನ್ಯಾಯ ದೊರೆಯಬೇಕಾಗಿದೆ. ಅವನಿಗೂ ನ್ಯಾಯವನ್ನು ದೊರಕಿಸಿಕೊಡಬೇಕಾಗಿದೆ. ಅಷ್ಟರ ಮಟ್ಟಿಗೆ ಈ ರಾಜ್ಯದಲ್ಲಿನ ಆಡಳಿತ ಬದಲಾವಣೆಯಾಗಬೇಕು. ಹಿಂದೆ ಮಾತನಾಡಿದಂಥ ಸದಸ್ಯರು ಭ್ರಷ್ಟಾಚಾರದ ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಈಗ ಇರತಕ್ಕ ಭ್ರಷ್ಟಾಚಾರದಿಂದ ರಾಜ್ಯದಲ್ಲಾಗಲಿ ರಾಷ್ಟ್ರದಲ್ಲಾಗಲೀ ಹೆಚ್ಚು ಕಷ್ಟವನ್ನು ಅನುಭವಿಸುತ್ತಾ ಇರತಕ್ಕ ಜನಗಳು ಎಂದರೆ ಈ ಬಡಜನರು. ಅನುಕೂಲಸ್ಥನು ಯಾವ ಸರ್ಕಾರ ಬಂದರೂ ಹೇಗೆ ಕೆಲಸ ಮಾಡಿಕೊಳ್ಳಬೇಕೆಂಬುದು ಆತನಿಗೆ ಗೊತ್ತಿರು ತ್ತದೆ. ಅವನಿಗೆ ಯಾವ ಯಾವ ಮಟ್ಟದಲ್ಲಿ ಎಷ್ಟು ಎಷ್ಟು ಹಣವನ್ನು ಕೊಡಬೇಕು ? ಯಾರ್ಯಾರಿಗೆ ಎಷ್ಟೆಷ್ಟು ಕೊಡಬೇಕೆಂಬುದು ಗೊತ್ತಿರುತ್ತದೆ. ಅಷ್ಟು ಹಣವನ್ನು ಕೊಟ್ಟು ತನ್ನ ಕೆಲಸವನ್ನು ಮಾಡಿಸಿ ಕೊಳ್ಳುತ್ತಾನೆ. ಆದರೆ ಏನೂ ಇಲ್ಲದ ಕಡುಬಡವನಿಗೆ ಎಷ್ಟರ ಮಟ್ಟಿಗೆ ಕೆಲಸವಾಗುತ್ತದೆಂಬುದನ್ನು ಇವತ್ತಿನ ದಿವಸ ನಾವು ನೋಡಬೇಕಾಗಿದೆ. ಮಾನ್ಯ ಹೆಗ್ಗಡೆಯವರು ಭ್ರಷ್ಟಾಚಾರದ ಬಗ್ಗೆ ಇಲ್ಲಿ ಮಾತನಾಡಬೇಡಿ ಎಂಬುದಾಗಿ ಹೇಳಿದರು. ಇದರ ಬಗ್ಗೆ ಒಂದು ಕೆಲಸವನ್ನು ಮಾಡೋಣ. ಭ್ರಷ್ಟಾಚಾರ ವನ್ನು ರೆಕಗ್‌ನೈಸ್ ಮಾಡೋಣ. ಇದರ ಬಗ್ಗೆ, ಒಂದು ತೀರ್ಮಾನ ಮಾಡೋಣ, ಠರಾವು ಮಾಡೋಣ, ಒಂದು ಲೆಜಿಸ್ಲೇಷನ್ ಪಾಸ್ ಮಾಡೋಣ. ಯಾವ ಯಾವ ಮಟ್ಟದಲ್ಲಿ ಎಷ್ಟೆಷ್ಟು ದುಡ್ಡನ್ನು ಕೊಡ ಬೇಕೆಂದು ಜನಗಳಿಗೆ ತಿಳಿಸೋಣ. ಜನಗಳಿಗೆ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಟ್ಟು ಆತನ ಕೆಲಸವನ್ನು ಮಾಡಿಸಿಕೊಳ್ಳಲಿ, ಇಲ್ಲದಿದ್ದರೆ ಬಿಡಲಿ. ಇವತ್ತಿನದಿವಸ ಬಡಜನಗಳಿಗೆ ನಿಜವಾಗಿಯೂ ಅಭಿವೃದ್ಧಿ ಕಾರಣ ದಿಂದ ಅನುಕೂಲ, ನ್ಯಾಯ ದೊರಕಬೇಕಾದರೆ ಭ್ರಷ್ಟಾಚಾರ ನಿರ್ಮೂಲವಾಗಬೇಕು. ಅದನ್ನು ನಿರ್ಮೂಲನ ಮಾಡದ ಹೊರತು ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಬಡವರಿಗೆ ಅನುಕೂಲವಾಗುವು ದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಹೇಳುವವರಲ್ಲಿ ನಾನೂ ಒಬ್ಬ. ಅದು ಯಾವ ಸರ್ಕಾರವೇ ಆಗಿರಲಿ, ರಾಜಕೀಯ ವ್ಯಕ್ತಿಗಳಿಂದ, ರಾಜಕೀಯ ಸ್ಥಾನದಲ್ಲಿ ಕುಳಿತಿರತಕ್ಕಂಥ ವ್ಯಕ್ತಿಗಳಿಂದ ಈ ಭ್ರಷ್ಟಾಚಾರ ಹೋಗಬೇಕೇ ಹೊರತು ನಾವು ಇಲ್ಲಿ ಸುಮ್ಮನೆ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಏನೂ ಆಗುವುದಿಲ್ಲ. ಅಧಿಕಾರಿಗಳು ಏನು ಮಾಡುತ್ತಾರೆ, ಸರ್ಕಾರವನ್ನು ನಡೆಸತಕ್ಕಂಥ ರಾಜಕೀಯ ಮುಖಂಡರು ಏನಿದ್ದಾರೆ, ಅವರು ಹೇಳಿದ ಹಾಗೆ ಕೇಳಬೇಕಾಗುತ್ತದೆ. ಆದ್ದರಿಂದ ಅಧಿಕಾರ ಸ್ಥಾನದಲ್ಲಿರತಕ್ಕಂಥ ರಾಜಕೀಯ ಮುಖಂಡರಿಂದ ಈ ಭ್ರಷ್ಟಾಚಾರ ನಿರ್ಮೂಲನವಾಗಬೇಕು. ಆಗ ನಾವು ಈ ಒಂದು ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಸಾವಿರಾರು ವರ್ಷ ಗಳಿಂದ ಭ್ರಷ್ಟಾಚಾರ ಇದೆ, ಎಲ್ಲಾ ರಾಷ್ಟ್ರಗಳಲ್ಲೂ ಇದೆ. ಭ್ರಷ್ಟಾಚಾರ ಇಲ್ಲದೆ ಇರತಕ್ಕಂಥ ರಾಷ್ಟ್ರ ಇಡೀ ವಿಶ್ವದಲ್ಲೂ ಇಲ್ಲ. ಕಮ್ಯುನಿಸ್ಟ್ ರಾಷ್ಟ್ರಗಳೂ ಇದರಲ್ಲಿ ಸೇರಿಕೊಂಡಿವೆ. ಆದರೆ ಇವತ್ತಿನ ದಿವಸ ನಾವು ಈ ಒಂದು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೆ ತೆಗೆದುಕೊಂಡಂತಹ ಹೆಜ್ಜೆ ಏನು ? ಎಂಬು ದನ್ನು ನಾವು ಯೋಚನೆ ಮಾಡಬೇಕಾಗಿದೆ. ದುರ್ದೈವದಿಂದ ಲೋಕಪಾಲ, ಲೋಕಾಯುಕ್ತ ಎರಡು ಮಸೂದೆಗಳು ಇನ್ನೂ ಪಾಸಾಗುತ್ತಿಲ್ಲ. ಈ ಎರಡು ಮಸೂದೆಗಳು ಆದಷ್ಟು ಜಾಗ್ರತೆ ಪಾಸ್ ಆಗಬೇಕು.

ಈ ಮಾತನ್ನು ಹೇಳಿದರೆ ಅದಕ್ಕೆ ಒಂದು ಪಕ್ಷದ ಕಲರ್ ಕೊಟ್ಟುಬಿಡುತ್ತಾರೆಂದು ಶ್ರೀಮಾನ್ ಹೆಗ್ಗಡೆಯವರು ಹೇಳಿದರು. ಈ ರೀತಿಯ ಪಕ್ಷದ ಕಲರ್ ಹಚ್ಚಿರುವುದರಿಂದ ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕಾದರೆ ಅದು ಮೊದಲು ರಾಜಕೀಯ ಸ್ಥಾನದಲ್ಲಿರುವವರಿಂದ ಪ್ರಾರಂಭವಾಗಬೇಕು. ಅದನ್ನು ಮಾಡಬೇಕಾದರೆ ಈ ಸಭೆಯಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಜಾಗ್ರತೆ ಲೋಕಾಯುಕ್ತ, ಹಾಗೂ ಲೋಕಪಾಲ್ ಈ ಎರಡು ಮಸೂದೆಗಳನ್ನು ಬೇಗ ಪಾಸ್ ಮಾಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ರಾಜಶೇಖರನ್‌ರವರು ಬಹಳ ತಡವಾಗಿ ತಮ್ಮ ಕಣ್ಣನ್ನು ತೆರೆಯುತ್ತಿದ್ದಾರೆ.

ಶ್ರೀ ಎಂ. ವಿ. ರಾಜಶೇಖರನ್.—ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಒಂದೆ ಮಾನ್ಯ ಚರಣಸಿಂಗ್‌ರವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ ಒಂದು ಬಿಲ್ಲನ್ನು ಪಾಸ್ ಮಾಡಿದ್ದಾರೆ. U. P. Public men enquiry ordinance ಅಂತಹ ಒಂದು ಬಿಲ್ಲನ್ನು ಇಲ್ಲೂ ತಂದು ಪಾಸ್ ಮಾಡುವುದಕ್ಕೆ ಸಾಧ್ಯವಿಲ್ಲವೇ ? ಏಕೆಂದರೆ ಈ ರೀತಿಯಾಗಿ ಒಂದು ಬಿಲ್ಲನ್ನು ತಂದು ಪಾಸ್ ಮಾಡಿ ಭ್ರಷ್ಟಾಚಾರವನ್ನು ತಡೆಹಿಡಿಯದೆ ಹೋದರೆ ನಾವು ಶುದ್ಧವಾದ ಆಡಳಿತವನ್ನು ಕೊಡುತ್ತಿದ್ದೇವೆಂದು ಜನರಿಗೆ ಯಾವ ರೀತಿಯಲ್ಲಿ ಹೇಳುವುದಕ್ಕಾಗುತ್ತದೆ ? ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಹತ್ತಾರು ಮಂತ್ರಿಗಳಿದ್ದಾರೆ. ಆ ಮಂತ್ರಿಗಳ ಪೈಕಿ ಎಷ್ಟು ಜನ ಮಂತ್ರಿಗಳು ಮುಖ್ಯಮಂತ್ರಿಗಳಲ್ಲಿ ತಮ್ಮ ಆಸ್ತಿ–ಪಾಸ್ತಿಯ ವಿವರವನ್ನು ನೀಡಿದ್ದಾರೆ ? ಅದನ್ನು ಈ ಸಭೆಯ ಮುಂದೆ ಇಡಬೇಕು. ಈ ಸಮಯದಲ್ಲಿ ಅಡ್ಮಿನಿಸ್ಟ್ರೇಟಿವ್ ರಿಫಾರಂಸ್‌ನಲ್ಲಿ ಮಾಡಿರತಕ್ಕಂಥ ಒಂದು ರೆಕಮೆಂಡೇಷನ್‌ನ್ನು ತಮ್ಮ ಮೂಲಕ ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

Annexure VII — Report of the Study Team on State Level Administration.

Administrative Reforms Recommendations :

"Code of Conduct for Ministers.–In addition to the observance of provisions of the Constitution, the Representation of the Peoples Act 1951 and any other law for the time being in force, a person before taking office of the Minister shall disclose to the Prime Minister or the Chief Minister as the case may be, details of assets and liabilities and all business interests of himself and of members of his family. The details to be disclosed should contain all particular s of immoveable property and total approximate value of shares, debentures, cash holdings, jewellery".

ಇದರ ಬಗ್ಗೆ ಇನ್ನೂ ವಿಚಾರವನ್ನು ಕೊಟ್ಟುಕೊಂಡು ಹೋಗಿದ್ದಾರೆ. ಅದೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುವುದೇನೆಂದರೆ ಎಷ್ಟು ಜನ ಮಂತ್ರಿಗಳು ತಮ್ಮಲ್ಲಿ ತಮ್ಮ ಆಸ್ತಿ ಪಾಸ್ತಿಯ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ ? ಆ ರೀತಿ ಕೊಟ್ಟಿರತಕ್ಕಂಥಾ ವಿವರವನ್ನು ಈ ಸದನದ ಮುಂದೆ ಇಟ್ಟಿದ್ದಿರಾ ಎಂಬುದಾಗಿ ಕೇಳುತ್ತೇನೆ ? ಏಕೆಂದರೆ ಇದು ಬಹಳ ಗಹನವಾದ ವಿಚಾರ. ಈ ವಿಷಯದಲ್ಲಿ ಎಲ್ಲ ಶಾಸಕರಿಗೂ ಕೂಡ ತಮ್ಮ ಆಸ್ತಿಪಾಸ್ತಿಯ ವಿವರವನ್ನು ಕೂಡತಕ್ಕಂಥಾದ್ದು ಬಹಳ ಮುಖ್ಯವೆಂದು ಒತ್ತಾಯದಿಂದ ಹೇಳುತ್ತಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಎಲ್ಲಿಯವರೆಗೆ ರಾಜಕೀಯ ಕ್ಷೇತ್ರದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೇ ಮಾಡುವುದಿಲ್ಲವೋ ಅಲ್ಲಿಯವರೆಗೂ ಆಡಳಿತಾಂಗದಲ್ಲಿ ಅಥವಾ ಅಧಿಕಾರ ರಂಗದಲ್ಲಿ ಭ್ರಷ್ಟಾಚಾರವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ, ಅದರಲ್ಲೂ ಮುಖ್ಯವಾಗಿ ಬೇರೆ ಬೇರೆ ರಂಗದಲ್ಲಿ ಅಂದರೆ ಆಡಳಿತಾಂಗದಲ್ಲಿ ಅಧಿಕಾರದಲ್ಲಿರತಕ್ಕಂಥ ಜನರು ಬಡವರ ಸಮಸ್ಯೆಯ ಬಗೆಹರಿಸುವ ಬಗ್ಗೆ ಎಷ್ಟರಮಟ್ಟಿಗೆ ರೆಸ್‌ಪಾನ್ಸಿವ್ ಆಗಿದ್ದಾರೆ ? ಬಡವರ ಒಂದು ಕೂಗಿಗೆ ಎಷ್ಟರಮಟ್ಟಿಗೆ ಓಗೊಡುತ್ತಾರೆ ಎನ್ನತಕ್ಕಂಥಾದ್ದನ್ನು ಪರಿಶೀಲಿಸಿದರೆ ಬಹಳ ವಿಷಾದ ಪರಿಸ್ಥಿತಿಯಲ್ಲಿದ್ದೇವೆ. ಕಾರಣವೇನೆಂದರೆ ನಾವು ಘನಮೂಲ ಸಮಸ್ಯೆ ಕಡೆಗೆ ಹೋಗುತ್ತಿದ್ದೆವೆ. ಇವತ್ತು

ಅಧಿಕಾರದಲ್ಲಿರುವ ಪೈಕಿ ಬಹುಭಾಗ ಜನ ಹಳ್ಳಿಗಳಿಂದ ಬಂದಿರುವವರೇ ಎಂದು ಹೇಳಿದರೆ ತಪ್ಪಾಗಲಾರದ ಅಥವಾ ಹಳ್ಳಿಯಿಂದ ಬಂದು ಪಟ್ಟಣದಲ್ಲಿ ನೆಲೆಸಿ ವಿದ್ಯಾಭ್ಯಾಸ ಮಾಡಿ ನಾನಾ ಕ್ಷೇತ್ರದಲ್ಲಿ ಆಡಳಿತದಲ್ಲಿದ್ದಾರೆ. ಇದಕ್ಕೆ ಕಾರಣವೇನಂದರೆ ನಮ್ಮ ರಿಕ್ರೂಟ್‌ಮೆಂಟ್ ಪಾಲಿಸಿ ಏನಿದೆ ಅದು ಬದಲಾವಣೆಯಾಗಬೇಕು.

It must be a vibrant responsive administration to the problems of the rural poor. ಈ ಬಗ್ಗೆ ಎಲ್ಲಿಯವರೆಗೆ ಬದಲಾವಣೆಯಾಗುವುದಿಲ್ಲವೋ ಅಲ್ಲಿಯವರೆಗೆ ಈ ದೇಶ ಅಭಿವೃದ್ಧಿಯಾಗುವುದಿಲ್ಲ. ನಾನು ಮೊದಲೇ ಹೇಳಿದಹಾಗೆ ಎಲ್ಲೋ ಹಣವನ್ನು ಖರ್ಚು ಮಾಡಿರಬಹುದು. ಅದಕ್ಕೆ ತಕ್ಕ ಅಂಕಿ ಅಂಶಗಳನ್ನು ತೋರಿಸಬಹುದು. ಆದರೆ ಮೆಚ್ಚತಕ್ಕಂಥ ರೀತಿಯಲ್ಲಿ ಹಣವನ್ನು ಖರ್ಚುಮಾಡಿಲ್ಲ. ಮತ್ತು ಮೆಚ್ಚತಕ್ಕಂಥ ರೀತಿಯಲ್ಲಿ ಕೆಲಸಗಳಾಗಿಲ್ಲ. ಬೆಂಗಳೂರು ನಗರದಲ್ಲಿ ಬರತಕ್ಕಂಥ ಹೊಸ ಮನೆಗಳನ್ನು ನೋಡಬಹುದು ಹೊಸ ರಸ್ತೆಗಳಾಗುವುದನ್ನು ನೋಡಬಹುದು. ಆದರೆ ಬೆಂಗಳೂರು ನಗರ ಬಿಟ್ಟು ಒಂದು ಮೈಲಿ ದೂರ ಹೋದರೆ ಕಾರ್ಪೊರೇಷನ್ ಲಿಮಿಟ್ ಬಿಟ್ಟು ಒಂದು ಮೈಲಿ ದೂರ ಹೋಗಿ ನೋಡುವುದಾದರೆ ಎಷ್ಟರ ಮಟ್ಟಿಗೆ ಹೊಸ ಮನೆಗಳು ಬರುತ್ತಿವೆ ಎಷ್ಟು ಹೊಸ ರಸ್ತೆಗಳಾಗುತ್ತಿವೆ ಎಂಬುದನ್ನು ತೋರಿಸುತ್ತೀರಾ

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಮ್ಮ ಕ್ಷೇತ್ರಕ್ಕೆ ಬನ್ನಿ ಸ್ವಾಮಿ ತೋರಿಸುತ್ತೇವೆ. ಮತ್ತೆ ವಿಚಾರಣೆಯ ಬಗ್ಗೆ ತಾವು ಮಾತನಾಡುತ್ತಿದ್ದೀರಿ, ಶರಾವತಿ ಕರ್ಮಕಾಂಡದ ಬಗ್ಗೆಯೂ ವಿಚಾರಣೆಯಾಗಬೇಕೆಂದು ಹೇಳುತ್ತೀರಾ.

ಶ್ರೀ ಎಂ. ವಿ. ರಾಜಶೇಖರನ್.—ಎಲ್ಲದರ ಬಗ್ಗೆಯೂ ಆಗಬೇಕು. ಆ ಶರಾವತಿ ಕರ್ಮಕಾಂಡ ಇಂತಹವರು ಸೇರಿಕೊಂಡು ಆಗಿರತಕ್ಕಂಥಾದ್ದು. ನಮಗೆಲ್ಲಾ ವಿಷಯ ಗೊತ್ತಿದೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಈ ಶರಾವತಿ ಕರ್ಮ ಕಾಂಡದ ಬಗ್ಗೆ ವಿಚಾರಣೆ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ಬೇಕಾದಗೆ ಮಾಡಿ ಎಂಬುದಾಗಿ ಹೇಳಿದರು. ಆದರೆ ಇವರು ಏಕೆ ಯಾವ ಒಂದು ಸಮಿತಿಯನ್ನೂ ಮಾಡಲಿಲ್ಲ

ಶ್ರೀ ಎ ಲಕ್ಷ್ಮಿಸಾಗರ್.—ಅಧಿಕಾರ ತಮ್ಮ ಪಕ್ಷದಲ್ಲಿದೆ. ಶ್ರೀಮಾನ್ ಹಾವನೂರ್‌ರವರು ಸುಮಾರು ೬ ತಿಂಗಳ ಹಿಂದೆ ಅನೇಕರ ಗಮನಕ್ಕೆ ತಂದಂತಹ ವಿಚಾರವೇನೆಂದರೆ. ಕಾನೂನು ಪ್ರಕಾರ ತನಿಖಾ ಆಯೋಗವನ್ನು ರಾಜ್ಯ ಸರ್ಕಾರದವರೇ ಮಾಡಬಹುದೆಂದು ಹೇಳಿದ್ದಾರೆ. ತಾವು ಒಂದು ಆಯೋಗವನ್ನು ರಚನೆ ಮಾಡಿದ್ದೀರಿ, ಅದು ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಯಿತೆ ತನಿಖಾ ಆಯೋಗವನ್ನು ರಚನೆ ಮಾಡುವುದಕ್ಕೆ ನಾವು ಎಲ್ಲೂ ಹೋಗಬೇಕಾದುದು ಇಲ್ಲ. ಯಾವ ಸಮಯಕ್ಕೆ ಬೇಕಾದರೂ ತನಿಖಾ ಆಯೋಗವನ್ನು ನೇಮಕ ಮಾಡಿ ಆಗಿರತಕ್ಕಂಥ ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡಿ ವರದಿಯನ್ನು ಕೊಡಬೇಕೆಂದು ಕೇಳತಕ್ಕಂಥಹ ಅಧಿಕಾರವನ್ನು ತಮ್ಮ ಕೈಯಲ್ಲೇ ಇಟ್ಟುಕೊಂಡು ನಮ್ಮ ಪಕ್ಷ ಅಧಿಕಾರದಲ್ಲಿ ಇಲ್ಲದೇ ಇರತಕ್ಕಂಥ ಸಮಯದಲ್ಲಿ ಹಿಂದಿನ ೭ ವರ್ಷಗಳಲ್ಲಿ ಆಗಿರತಕ್ಕಂಥ ಅನ್ಯಾಯದ ಬಗ್ಗೆ ಏಕೆ ವಿಚಾರಣೆ ಮಾಡಲಿಲ್ಲವೆಂದು ಕೇಳುತ್ತೀರಾ ಹೇಗೆ, ಇದು ಯಾವ ನ್ಯಾಯ. ನೀವೇ ಈಗ ತನಿಖಾ ಆಯೋಗವನ್ನು ರಚನೆ ಮಾಡಿ.

ಶ್ರೀ ವಿ. ಎ. ಮತ್ತಿಕಟ್ಟಿ.—ಅಧಿಕಾರ ನಡೆಸುತ್ತಿರುವವರೆಲ್ಲಾ ಒಂದೇ ವರ್ಗ.

ಶ್ರೀ ಎ. ಲಕ್ಷ್ಮಿಸಾಗರ್.—ಇದರಲ್ಲಿ ಅಡಗಿರತಕ್ಕಂಥಾ ತತ್ವವನ್ನು ಕುರಿತು ಈಗಲಾದರೂ ಮಾಡಬಹುದಲ್ಲಾ ಇದರಲ್ಲಿ ನಾವು ನೀವು ಅನ್ನುವ ಪ್ರಶ್ನೆ ಬರುವುದಿಲ್ಲಾ. ನಿಮಗೆ ಅಧಿಕಾರ ಇದೆ. ನಿಮಗೆ ಅಧಿಕಾರದ ಒಂದು ಅಸ್ತ್ರ ಇರುವುದರಿಂದ ದಯವಿಟ್ಟು ಇದನ್ನು ತನಿಖೆ ಮಾಡಿ. ಈ ತನಿಖೆಗೆ ಯಾರನ್ನಾದರೂ ನೇಮಕ ಮಾಡಿ, ಅದರಲ್ಲಿ ಯಾರು ತಪ್ಪು ಮಾಡಿರುತ್ತಾರೋ ಅವರನ್ನು ನೇಣು ಹಾಕಿ, ಅದಕ್ಕೆ ನಾವು ತಮಗೆ ಸಂಪೂರ್ಣ ಬೆಂಬಲ ಕೊಡುತ್ತೇವೆ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ಈಗ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರವರು ಶರಾವತಿ ಕರ್ಮಕಾಂಡದ ಬಗ್ಗೆ ಹೇಳಿದರು, ಆ ಬಗ್ಗೆ ಕಮೀಷನ್ ರಚನೆ ಮಾಡುವುದಕ್ಕೆ ನಮ್ಮ ಪಕ್ಷದ ಪರವಾಗಿ ನಾವು ಒಪ್ಪಿಕೊಳ್ಳುತ್ತೇನೆ. ಅವರು ಇದಕ್ಕೆ ಒಪ್ಪುವುದಕ್ಕೆ ಅಥವಾ ಒಪ್ಪಿಸುವುದಕ್ಕೆ ಸಿದ್ಧರಾಗಿದ್ದಾರೆ ಎಂದು ನಾನು ಕೇಳುತ್ತೇನೆ. ಅವರು ಏಕೋ ಸುಮ್ಮನೆ ಇದ್ದಾರೆ ಮಾತನಾಡುತ್ತಾ ಇಲ್ಲಾ.

SRI. S. M, SHEERNALI CHANDRASHEKAR.—I am neither a Minister nor the Chief Minister.

Sri. M. V. RAJASHEKAR.—I am glad that he has accepted the fact. ಸ್ವಾಮಿ ಒಂದು ವಿಚಾರ ಏನೆಂದರೆ ನಮ್ಮ ಮುಂದೆ ಆಯವ್ಯಯ ಪಟ್ಟಿ ಏನು ಇಟ್ಟಿದ್ದಾರೆ ಅದರಲ್ಲಿ ಹೆಣ್ಣು ಮಕ್ಕಳ ಒಂದು ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು ಕೇಳುತ್ತೇನೆ. ನಮ್ಮ ತಾಯಂದಿರು ಒಬ್ಬರು ಇಲ್ಲಿ ಮಂತ್ರಿಗಳಾಗಿದ್ದಾರೆ. ನನಗೆ ಅವರ ಬಗ್ಗೆ ಗೌರವ ಇದೆ ಮತ್ತು ಅವರು ಚೆನ್ನಾಗಿಯೂ ಕೆಲಸ ಮಾಡುತ್ತಾರೆ. ಆದರೆ ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ೧೦೦ಕ್ಕೆ ೫೦–೫೧ ಜನ ಇರುವಂಥಾ ಹೆಣ್ಣು ಮಕ್ಕಳಿಗೆ ಎಷ್ಟು ಹಣವನ್ನು ನಿಜವಾಗಿಯೂ ಖರ್ಚು ಮಾಡುತ್ತಾ ಇದ್ದಾರೆ ಅದು ಮುಖ್ಯ. ಈವೊತ್ತಿನ ದಿವಸ ರಾಜ್ಯದಲ್ಲಿ ಒಳ್ಳೆಯ ದೇಶಭಕ್ತಿ ಇರುವ ಮಕ್ಕಳನ್ನು ಮತ್ತು ಜನಗಳನ್ನೂ ಮುಂದಕ್ಕೆ ತರಬೇಕಾದರೆ ನಮ್ಮ ಅಕ್ಕತಂಗಿಯರು ಮತ್ತು ತಾಯಂದಿರನ್ನೂ ಮುಂದಕ್ಕೆ ಬರುವಂತೆ ಪ್ರೋತ್ಸಾಹ ಮಾಡಬೇಕು. ಆದುದರಿಂದ ಅವರ ಅಭಿವೃದ್ಧಿಗಾಗಿ ತಾವು ಈ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಇಟ್ಟೀದ್ದೀರಿ.

ಶ್ರೀ ವಿ. ಎ. ಮತ್ತಿಕಟ್ಟಿ.—ಸ್ವಾಮಿ. ಈ ಬಡ್ಜೆಟ್ಟಿನಲ್ಲಿ ಗಂಡಸರಿಗೆ ಇಷ್ಟು ಹೆಂಗಸರಿಗೆ ಇಷ್ಟು ಅಂತ ಇಲ್ಲ ಅನ್ನುವುದನ್ನು ಮಾನ್ಯ ಸದಸ್ಯರು ತಿಳಿಯಬೇಕು.

ಶ್ರೀ ಎಂ. ವಿ. ರಾಜಶೇಖರನ್.—ನಾನು ನಮ್ಮ ಸ್ನೇಹಿತರಿಗೆ ಹೇಳುವುದೇನೆಂದರೆ ಹೆಣ್ಣು ಮಕ್ಕಳ ಕಲ್ಯಾಣ ಏನು ಎಂಬುದನ್ನು ಈ ಬಡ್ಜೆಟ್ಟಿನಲ್ಲಿ ಕೊಡಬೇಕಾಗಿತ್ತು ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಇದು ಅವರಿಗೂ ಕೂಡ ಗೊತ್ತಿದೆ. ಈ ವಿಚಾರ ಏನೂ ಅವರಿಗೆ ಗೊತ್ತಿರಲಿಕ್ಕಿಲ್ಲಾ.

The benefit should go to crores of women population. Are you prepared to make that statement ?

ಸ್ವಾಮಿ, ಈ ಮಾತು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ರಾಷ್ಟ್ರದಲ್ಲಿ ದೇಶದ ಭಕ್ತಿ ಕುಗ್ಗದೇ ಇರಬೇಕಾದರೆ ನಮ್ಮ ಮಕ್ಕಳು ಸರಿಯಾದ ರೀತಿಯಲ್ಲಿ ತರಪೇತು ಮಾಡಬೇಕು. ಆ ರೀತಿ ಮಾಡುತ್ತಾ ಇಲಾ , ಈ ಕೆಲಸ ಮಾಡುವವರು ಯಾರು ? ಈ ಕೆಲಸವನ್ನು ಮಾಡುವವರು ಮೊಟ್ಟಮೊದಲು ನಮ್ಮ ತಾಯಂದಿರೇ ಆದುದರಿಂದ ಅವರ ಒಂದು ಅನುಕೂಲಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತೀರಿ ಅನ್ನುವುದನ್ನು ಒಂದು ಕಡೆಯಲ್ಲಿ ಕೊಟ್ಟಿದ್ದೀರಿ, ಅದನ್ನು ನೋಡಿದವರು ನಿಜವಾಗಿಯೂ ಬಹಳ ವಿಷಾದವಾಗುತ್ತದೆ. ಅದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ೧೭ ವರ್ಷದಿಂದ ೨೬ ವರ್ಷದವರೆಗೆ ಏನು ಯುವಕರು ಇದ್ದಾರೆ ಅವರ ಒಂದು ಅಭಿವೃದ್ಧಿಗಾಗಿ ನೀವು ಏನೇನು ಮಾಡಿದ್ದೀರಿ ? ಒಂದು ಕಡೆ ನಿರುದ್ಯೋಗದ ಕೂಗು ಕೇಳಿ ಬರುತ್ತಾ ಇದೆ.

ಶ್ರೀ ಮಳೂರು ಆನಂದರಾವ್.—ಸ್ವಾಮಿ. ಅರಣ್ಯರೋಧನವಾಗುತ್ತಾ ಇದೆ. ಅತ್ತ ಕಡೆ ಯಾರೂ ಇಲ್ಲಾ.

ಶ್ರೀ ವಿ. ಎ. ಮತ್ತಿಕಟ್ಟಿ.—ಅವರ ಕಡೆ ಯಾರ್‍ಯಾರು ಇದ್ದಾರೆ ಮೊದಲು ಹೇಳಲಿ. ಇಲ್ಲಿ ಮಾನ್ಯ ಪ್ರಭಾಕರವರು ಇನ್ನೂ ಮೂರು ಜನ ಮಂತ್ರಿಗಳು ಇದ್ದಾರೆ.

ಶ್ರೀ ಮಳೂರು ಆನಂದರಾವ್.—ಮುಖ್ಯವಾಗಿ ಹಣಕಾಸಿನ ಸಚಿವರು ಇರಬೇಕು ಸ್ವಾಮಿ, ಮಾನ್ಯ ಪ್ರಭಾಕರ್‌ರವರು ಫೈಲುಗಳನ್ನು ನೋಡುತ್ತಾ ಇದ್ದಾರೆ ಅಷ್ಟೆ.

ಶ್ರೀ ಬಿ. ಬಾಸ್ಕರಶೆಟ್ಟಿ.—ಸ್ವಾಮಿ. ಹಣಕಾಸಿನ ಮಂತ್ರಿಗಳು ಕೌನ್ಸಿಲ್‌ಗೆ ಹೋಗಿದ್ದಾರೆ.

ಛೇರ್ಮನ್‌ನವರು.—ಈಗ ಇಲ್ಲಿ ೩ ಜನ ಮಂತ್ರಿಗಳು ಇದ್ದಾರೆ, ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ಇದ್ದಾರೆ, ಸಿರಿಕಲ್‌ಚರಲ್ ಮಂತ್ರಿಗಳು ಇದ್ದಾರೆ. ಮೈನರ್ ಇರಿಗೇಷನ್ ಮಂತ್ರಿಗಳು ಇದ್ದಾರೆ, ಹಣಕಾಸಿನ ಮಂತ್ರಿಗಳು ಈಗತಾನೇ ಹೊರಗೆ ಹೋಗಿದ್ದಾರೆ, ಬರುತ್ತಾರೆ. ತಾವು ಭಾಷಣವನ್ನು ಮುಂದುವರೆಸಿ.

ಶ್ರೀ ಎಂ. ವಿ. ರಾಜಶೇಖರನ್.—ಅವರು ಈ ಬಡ್ಜೆಟ್ಟಿನಲ್ಲಿ ನಿರುದ್ಯೋಗದ ಬಗ್ಗೆ ಏನು ಕಾರ್ಯಕ್ರಮ ಹಾಕಿದ್ದಾರೆ ಅದೊಂದನ್ನೂ ಕೂಡ ತೋರಿಸಿಲ್ಲಾ, ಈ ಅನ್‌ಎಪ್ಲಾಂಯ್‌ಮೆಂಟಿನ ಎನ್‌ಫೋರ್ಸ್‌ಮೆಂಟಿನ ಒಂದು ಸ್ಕೀಮ್‌ನ ಯೋಜನೆ ಬಿಟ್ಟರೆ ಇನ್ನಾವುದನ್ನೂ ಕೂಡಾ ಇದರಲ್ಲಿ ಸೇರಿಸಿಲ್ಲಾ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ ಬೆಂಗಳೂರು ಸೌತ್ ಮತ್ತು ನಾರ್ತ್ ತಾಲ್ಲೂಕಿನಲ್ಲಿ ಸಾವಿರಾರು ಯುವಕರು ನಿರುದ್ಯೋಗಿಗಳಾಗಿದ್ದಾರೆ. ಅಲ್ಲಿ ಇಲ್ಲಿ ಇದ್ದಂಥಾ ಸಣ್ಣ ಪುಟ್ಟ ಕಾರ್ಖಾನೆಗಳೂ ಕೂಡ ಮುಚ್ಚಿವೆ. ಕರ್ನಾಟಕದಲ್ಲಿ ವೈರ್ ಇಂಡಸ್ಟ್ರೀಸ್ ಅಂತ ಒಂದು ಇತ್ತು. ಅದು ಮುಚ್ಚಿಹೋಗಿ ೪ ತಿಂಗಳಾಯಿತು. ಈವೊತ್ತಿನ ದಿವಸ ಹೀಗೆ ಹತ್ತಾರು ಕಾರ್ಖಾನೆಗಳು ಮುಚ್ಚಿಹೋಗಿವೆ. ಶ್ರೀ ವೈ. ಆರ್ ರಾಮಕೃಷ್ಣ ಅವರು ಹೇಳಿದ ಹಾಗೆ ೬೦ ಕಾರ್ಖಾನೆಗಳು ಮುಚ್ಚಿಹೋಗಿವೆ. ಅದರ ಕಡೆ ಎಷ್ಟು ಗಮನ ಕೊಟ್ಟಿದ್ದೀರಿ ಎಂಬುದನ್ನು ನಾನು ತಮ್ಮನ್ನು ಕೇಳಬಯಸುತ್ತೇನೆ. ಈ ವಿಚಾರದ ಕಡೆಗೆ ಈಗಲಾದರೂ ಕೂಡ ಹೆಚ್ಚಿನ ಗಮನ ಕೊಡಬೇಕೆಂದು ಕೇಳುತ್ತೇನೆ.

ಇನ್ನೊಂದು ಅತಿ ಮುಖ್ಯವಾದ ವಿಚಾರ ಏನೆಂದರೆ ನಮ್ಮ ರಾಜ್ಯದಲ್ಲಿ ಈವೊತ್ತಿನ ದಿವಸ ಒಂದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಅಂತ ಇದೆ. ಕೆಲವು ವರ್ಷಗಳಿಂದ ಈಚೆಗೆ ಅದು ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಈ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ ಹಿಂದೆ ಒಂದು ಪ್ಲಾನಿಂಗ್ ಬೋರ್ಡ್ ಅಂತ ಇತ್ತು. ಈ ಹೊಸ ಸರ್ಕಾರ ಬಂದಮೇಲೆ, ಈ ನಮ್ಮ ಮುಖ್ಯ ಮಂತ್ರಿಗಳು ಬಂದಮೇಲೆ ಅದನ್ನು ಏತಕ್ಕೋಸ್ಕರವಾಗಿ ತೆಗೆದು ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ ಈ ಪ್ಲಾನಿಂಗ್ ಬೋರ್ಡ್ ಇರುವುದುಅನಾವಶ್ಯಕ ಎಂದು ತಿಳಿದುಕೊಂಡಿದ್ದಾರೆಯೋ ಏನೋ. ನಾನು ಹೇಳುತ್ತೇನೆ ಈ ಪ್ಲಾನಿಂಗ್ ಬೋರ್ಡ್ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇರಬೇಕು ಏತಕ್ಕೆಂದರೆ ಅವುಗಳು ಜಿಲ್ಲಾ ಮಟ್ಟದಲ್ಲಿ ಪ್ಲಾನ್ ಮಾಡಿ ಚೆನ್ನಾಗಿ ಕೆಲಸ ಮಾಡಬೇಕು. ಈ ಬಗ್ಗೆ ಜನತಾ ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದಾರೆ ಮತ್ತು ಈ ಸರ್ಕಾರ ಸಹಿತವೂ ಒಪ್ಪಿಕೊಂಡಿದೆ. ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮತ್ತು ಸಾಧ್ಯವಾದರೆ ತಾಲ್ಲೂಕು ಮಟ್ಟದಲ್ಲೂ ಸಹಿತ ಒಂದು ಪ್ಲಾನಿಂಗ್ ಬೋರ್ಡ್ ಮಾಡಿದರೆ ಅಲ್ಲಿಇರತಕ್ಕಂಥಾ ರಿಸೋರ್ಸಸ್ ಲೋಕಲ್ ರಿಸೋರ್ಸಸ್ ಏನು ಇದೆ ಅದನ್ನು ನೋಡಿಕೊಂಡು ಅವರ ಅನುಕೂಲತೆಗೆ ತಕ್ಕಂತೆ ಕೆಲಸ ಮಾಡಬಹುದು. ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ ಜಾರಿಗೆ ತರಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇದರಿಂದ ಬಹಳ ಜನಗಳಿಗೆ ಅನುಕೂಲವಾಗುತ್ತವೆ.

SRI. K. B. SHIVAIAH.—Sir, the State Planning Board has been constituted and it is still there even now.

SRI. Y. RAMAKRISHNA.—When it was constituted ?

SRI. K. B. SHIVAIAH.—That I will as certain.

ಶ್ರೀ ಎಂ. ವಿ. ರಾಜಶೇಖರನ್. —ಅದರೆ ಆದು ಯಾವುದೂ ಕೂಡ ಸದಸ್ಯರ ಗಮನಕ್ಕೆ ಬಾದಿಲ್ಲಾ. ಸದಸ್ಯರಿಗೇನೇ ಆ ವಿಚಾರ ಗೊತ್ತಿಲ್ಲದೇ ಹೋದರೆ ಇನ್ನಾರಿಗೆ ಗೊತ್ತಾಗಬೇಕು. ಆದುದರಿಂದ ನಾನು ಮೊದಲು ಹೇಳಿದ ಹಾಗೆ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮತ್ತು ಸಾಧ್ಯವಾದರೆ ತಾಲ್ಲೂಕಾ ಮಟ್ಟದಲ್ಲಿ ಒಂದೊಂದು ಪ್ಲಾನಿಂಗ್ ಬೋರ್ಡ್ ಮಾಡಿದರೆ ಅವುಗಳು ಅಲ್ಲಿರುವ ರಿಸೋರ್ಸಸ್ ಅನ್ನು ತಿಳಿದುಕೊಂಡು, ಮತ್ತು ಆ ರಾಜ್ಯದಲ್ಲಿರತಕ್ಕಂಥಾ ಅನುಕೂಲಗಳು, ಅನಾನುಕೂಲಗಳು ಅಲ್ಲಿರುವ ಕಷ್ಟ ಸುಖಗಳನ್ನು ತಿಳಿದುಕೊಂಡು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಇದನ್ನು ತಾಲ್ಲೂಕಾ ಮಟ್ಟದಲಿ ಹಾಗೂ ಜಿಲ್ಲಾಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಒಂದೊಂದು ಮಾಡಬೇಕು ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಜನಗಳಿಗೆ ಅನುಕೂಲವಾಗಬೇಕಾದರೆ ಈ ಬಗ್ಗೆ ನಿಮ್ಮ ಸರ್ಕಾರದ ನೀತಿ ಏನು ಇದೆ ಅದು ಬಡಜನಗಳ ಪರವಾಗಿ ಬದಲಾವಣೆಯಾಗಬೇಕು. ಅಲ್ಲದೆ ಬಡಜನಗಳು ಈ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸುವಂತಾಗಬೇಕು, ಅದನ್ನು ತಾವು ಮೊದಲು ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೪.೩೦ ಪಿ. ಎಂ.

† ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಸರ್ಕಾರದ ಹಣಕಾಸಿನ ಮಂತ್ರಿಗಳು ೧೯೭೮-೭೯ನೇ ಸಾಲಿನ ಆಯುವ್ಯಯ ಪತ್ರವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಈ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ರಾಜ್ಯದ ಒಟ್ಟು ಒಪ್ಪಿತ ವೆಚ್ಚ ೪೧೧ ಕೋಟಿ ರೂಪಾಯಿಗಳು ಇದರಲ್ಲಿ ಬಹುತೇಕ ವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗಾಗಿ ನಮ್ಮ ಸರ್ಕಾರದವರು ಖರ್ಚು ಮಾಡತಕ್ಕದ್ದು ಸುಮಾರು ೧೮೦ ಕೋಟಿ ರೂಪಾಯಿಗಳು. ಇದನ್ನು ನೋಡಿದರೆ ನಮ್ಮ ರಾಜ್ಯಸರ್ಕಾರದವರು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತದೆ. ಈ ಮಧ್ಯ ಒಂದು ಮಾತನ್ನು ನಾನು ಹೇಳಬೇಕಾಗು ತ್ತದೆ ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ಸರ್ಕಾರದ ಬಹುತೇಕ ಕಾರ್ಯಕ್ರಮಗಳನ್ನು ಟೀಕೆ ಮಾಡಿದ್ದಾರೆ. ಟೀಕೆ ಮಾಡುವುದು ಅವರ ಕರ್ತವ್ಯಗಳಲ್ಲಿ ಒಂದಾಗಿರಬಹುದು. ಆದರೆ ಸರ್ಕಾರ ದವರು ಮಾಡತಕ್ಕ ಒಳ್ಳೆಯ ಕೆಲಸಗಳನ್ನು ಕಾರ್ಯಕ್ರಮಗಳನ್ನು ಅವರು ಎತ್ತಿ ತೋರಿಸತಕ್ಕ ಸೌಜನ್ಯ ವನ್ನು ಹೊಂದಿರಬೇಕು ಎಂದು ನನಗನ್ನಿಸುತ್ತದೆ. ನಮ್ಮ ಸರ್ಕಾರದವರು ೩೦ ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿದ್ದಾರೆ. ಕೆಲವು ಸದಸ್ಯರುಗಳು ಮಾತನಾಡುವಾಗ ಈ ವಿಷಯದಲ್ಲಿ ರಾಜ್ಯಸರ್ಕಾರ ಕೇಂದ್ರ ಸರ್ಕಾರಕ್ಕೆ ಕಂಪೀಟ್ ಮಾಡುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ವಿಧಿಸಿರುವ ತೆರಿಗೆಯನ್ನು ಬೇರೆ ರಾಜ್ಯಗಳಿಗೆ ಹೋಲಿಸಿದಾಗ, ನಮ್ಮದು ಬಹಳ ಕಡಿಮೆ ಎಂದು ಕಾಣುತ್ತದೆ. ಇಂಡಿಯಾದೇಶದಲ್ಲಿ ನಮ್ಮ ರಾಜ್ಯ ಮೊದಲನೆಯದಾಗಿ ಆಕ್ಟ್ರಾಯ್‌ನ್ನು ರದ್ದು ಮಾಡಿದೆ. ಇಷ್ಟೆಲ್ಲಾ ಕೆಲಸಗಳನ್ನು ಮಾಡಿ ಕೇವಲ ಮೂವತ್ತು ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿರುವುದು ಹೆಚ್ಚೇನೂ ಅಲ್ಲ. ಜನತಾ ಪಕ್ಷದ ಸರ್ಕಾರಗಳು ಎಲ್ಲೆಲ್ಲಿ ಇವೆಯೋ ಅಲ್ಲೂ ಸಹ ಜಾಸ್ತಿ ತೆರಿಗೆಗಳನ್ನು ಹಾಕಿದ್ದಾರೆ. ರಾಜಸ್ಥಾನದಲ್ಲಿ, ಓರಿಸ್ಸಾ ಮಹಾರಾಷ್ಟ್ರ, ತಮಿಳುನಾಡು, ವೆಸ್ಟ್ ಬೆಂಗಾಲ್, ಅಸ್ಸಾಂನಲ್ಲಿ ಜಾಸ್ತಿ ತೆರಿಗೆಯನ್ನು ಹಾಕಿದ್ದಾರೆ. ನಮ್ಮ ರಾಜ್ಯದಲ್ಲಿ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿ, ಕೆಲವಾರು ಕೆಲಸಗಳಲ್ಲಿ ಬೇರೆ ರಾಜ್ಯಗಳಿಗಿಂತ ಹಿಂದೆ ಇರಬಹುದು. ಆದರೆ ಹಲ ವಾರು ಕೆಲಸಗಳಲ್ಲಿ ನಮ್ಮ ರಾಜ್ಯ ಮುಂದೆ ಇದ್ದು, ಭರತಖಂಡಕ್ಕೆ ಮಾದರಿ ರಾಜ್ಯವಾಗಿದೆ ಎಂದರೆ ಅದು ತಪ್ಪಾಗಲಾರದು. ನಮ್ಮ ರಾಜ್ಯವನ್ನು ಬೇರೆ ರಾಜ್ಯಗಳು ಅನುಕರಣೆ ಮಾಡತಕ್ಕ ಮಾದರಿಯಲ್ಲಿ ಅನೇಕ ಕೆಲಸಗಳನ್ನು ನಾವು ಮಾಡಿದ್ದೇವೆ. ತಮ್ಮ ಆತ್ಮಕ್ಕೆ ಇದು ಒಪ್ಪಿಗೆಯಾಗುತ್ತದೆ ಎನ್ನುವ ನಂಬಿಕೆ ನನ ಗಿದೆ. ನಮ್ಮ ರಾಜ್ಯಸರ್ಕಾರ ಅನೇಕ ಮಹತ್ತರವಾದ ಕಾರ್ಯಗಳನ್ನು ಮಾಡಿದೆ. ಉದಾಹರಣೆಗೆ ಭೂಸುಧಾರಣೆ ರಾಷ್ಟ್ರದ ಎಲ್ಲಾ ರಾಜ್ಯಗಳಿಗಿಂತ ಚೆನ್ನಾಗಿ ನಮ್ಮರಾಜ್ಯದಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಕೊಡಲಾಗಿದೆ. ಸುಮಾರು ೭.೮೦ ಲಕ್ಷ ಅರ್ಜಿಗಳಲ್ಲಿ ೪ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾ ಗಿದೆ. ೧೦.೭ ಲಕ್ಷ ಎಕರೆ ಭೂಮಿಯನ್ನು ಐದು ಲಕ್ಷ ಕುಟುಂಬಗಳಿಗೆ ಹಂಚಲಾಗಿದೆ, ಇದು ಸಣ್ಣ ವಿಚಾರವೇ ? ಆದರೂ ಸಹ ಇದರ ವೇಗವನ್ನು ಕಡಿಮೆ ಎಂದು ಹೇಳಬಹುದು. ಸಂಬಂಧಪಟ್ಟ ಮಂತ್ರಿ ಗಳು ಇದರ ಕಾರ್ಯಕ್ರಮವನ್ನು ವೇಗದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸೂಕ್ತ ಕ್ರಮಗಳನ್ನು ಹಾಕಿಕೊಂಡಿದ್ದಾರೆ, ಇದನ್ನು ನಾವು ಕಾದು ನೋಡಬೇಕಾಗಿದೆ. ಭೂಮಿ ಪಡೆದವರಿಗೆ ವೇಗದಲ್ಲಿ ಖಾತೆ ಗಳನ್ನು ಕೊಡಬೇಕು ಎಂದು ಅಗಲೇ ಹೇಳಿದ್ದಾರೆ.

ಅಧ್ಯಕ್ಷರೇ, ನಮ್ಮ ಜಿಲ್ಲೆಯ ಸದಸ್ಯರಾದ ಮಾನ್ಯ ಜೆ. ಎಚ್. ಪಟೇಲರು ಹಲವಾರು ಕಡೆಗಳಲ್ಲಿ ತಮ್ಮ ನಾಯಕತ್ವದಲ್ಲಿ ಒಂದು ಚಳುವಳಿಯನ್ನು ನಡೆಸಿದ್ದಾರೆ. ಚಳುವಳಿಯನ್ನು ಮಾಡುವಂಥ ಮುಖ್ಯ ಉದ್ದೇಶವಾದರೂ ಏನೆಂದರೆ. ಸರ್ಕಾರದವರಿಗೆ ಯಾರೂ ಕಂದಾಯವನ್ನು ಕೊಡಬಾರದು, ಸರ್ಕಾರಕ್ಕೆ ವಾಪಸ್ ಕೊಡಬೇಕಾದ ಹಣವನ್ನು ಯಾರೂ ಕಟ್ಟಬಾರದು, ಪರಿಹಾರ ಪಡೆಯಬೇಕಾದ ಮಾಲೀಕರು ಪರಿಹಾರ ದೊರಕದಿದ್ದರೆ ತಮ್ಮ ಭೂಮಿಯನ್ನು ತಾವೇ ವಾಪಸ್ ತೆಗೆದುಕೊಳ್ಳಬೇಕು, ಇವು ಕೆಲವು ಅವರ ಬೇಡಿಕೆಗಳು. ಮಾನ್ಯ ಪಟೇಲರು ಅವರ ಅನುಯಾಯಿಗಳಿಗೆ ತಿಳಿಸಬೇಕು. ನೋಟ್‌ಪ್ರಿಂಟ್ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರೋದು ಎಂದು. ಮಾನ್ಯ ಪಟೇಲರು ದೊಡ್ಡ ಮನಸ್ಸು ಮಾಡಿ ನೋಟ್ ಪ್ರಿಂಟ್ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಕೊಡಿಸಿದರೆ, ಅವರ ಬೇಡಿಕೆ ಗಳನ್ನು ಆಗ ಈಡೇರಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಜವಾಬ್ದಾರಿ ಸ್ಥಾನದಲ್ಲಿರತಕ್ಕವರು, ಇವರು, ಇವರದೇ ಸರ್ಕಾರ ಕೇಂದ್ರದಲ್ಲಿದೆ. ಕೇಂದ್ರಕ್ಕೆ ಏಕೆ ಹಣ ಕೊಡಲು ತಿಳಿಸಬಾರದು ? ಭೂ ಸುಧಾರಣಾ ಕಾನೂನನ್ನು ಜಾರಿಗೆ ಕೊಡದೆ ಇರುವಂಥ ರಾಜ್ಯಗಳು ಅನೇಕ ಇವೆ. ನಮ್ಮ ರಾಜ್ಯ

ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತಂದು, ಒಳ್ಳೆಯ ಕೆಲಸವನ್ನು ಮಾಡಿರುವಾಗ ಜನರನ್ನು ಈ ರೀತಿಯಾಗಿ ತಪ್ಪುದಾರಿಗೆ ಎಳೆಯುವುದು ಜನರಿಗೆ ಅಪಪ್ರಚಾರ ಮಾಡುವುದು ದೇಶದ್ರೋಹ ಎಂದು ನಾನು ಭಾವಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಜನರನ್ನು ತಪ್ಪುದಾರಿಗೆ ಎಳೆದು, ತಪ್ಪು ಚಳುವಳಿ ಮಾಡುತ್ತಿದ್ದೇನೆಂದು, ಇಂಥಿಂಥ ಬೇಡಿಕೆಗಳನ್ನು ನಾವು ಇಟ್ಟಿದ್ದೇವೆಂದು ಅವರು ಹೇಳಿದ್ದಾರೆ. ನಮ್ಮ ಬೇಡಿಕೆಗಳೂ ತತ್ವವನ್ನು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. ದುಡ್ಡು ಇಲ್ಲ, ನಮಗೆ ದುಡ್ಡು ಕೊಡಿಸಿ ಎಂದು ಕೇಳುತ್ತಾರೆ, ಇವರಿಗೆಲ್ಲಾದರೂ ನಾವು ದುಡ್ಡು ಮಾಡುವಂಥ ಅಧಿಕಾರ ಕೊಡಿಸಿದರೆ ಏನೇನು ಗತಿಯಾಗುತದೆಯೋ ದುಡ್ಡು ಇಲ್ಲ ಎಂದು ಹೇದ್ದಾರೆ, ದುಡ್ಡು ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಬೇಕು ಎಂದು ಕೇಳಿದ್ದೇವೆ, ಇದು ತಪ್ಪುದಾರಿಗೆ ಎಳೆಯುವುದಿಲ್ಲ. ನಾವು ಭೂಸುಧಾರಣಾ ಕಾನೂನನ್ನು ಸ್ವಾಗತಿಸುತ್ತೇವೆ, ಮತ್ತು ಅದು ಆದಷ್ಟು ತ್ವರಿತವಾಗಿ ಜಾರಿಗೆ ಬೇಕು, ಪರಿಣಾಮಕಾರಿಯಾಗಿ ಇದರ ಕೆಲಸ ನಡೆಯಬೇ ಎಂದು ಹೇಳುವುದಕ್ಕೋಸ್ಕರವೇ ಮತ್ತು ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೋಸರವೇ ನಾವು ಚಳುವಳಿ ಮಾಡುತ್ತಿರುವುದು. ಸರ್ಕಾರದವರು ಬಾಯಲ್ಲಿ ಮಾತ್ರ ಬಡವರ ಮತ್ತು ಸಣ್ಣ ರೈತರ ಹಿತವನ್ನು ರಕ್ಷಣೆ ಮಾಡುತ್ತೇವೆಂದು ಹೇಳುತ್ತಾರೆ ಆದರೆ ವಾಸ್ತವಿಕವಾಗಿ ನೋಡಿದಾಗ ಸಣ್ಣ ರೈತರ ಹಿತರಕ್ಷಣೆಯಾಗುತ್ತಿಲ್ಲವೆಂದೇ ನಾವು ಚಳುವಳಿ ಮಾಡುತ್ತಿರುವುದು. ಇದರ ಬಗ್ಗೆ ಸಾವಿರಾರು ಜನ ಜೈಲಿಗೆ ಹೋಗಿದ್ದಾರೆ. ಇದರ ಪ್ರಿನ್ಸಿಪಲ್‌ನ್ನು ತಾವೂ ಸಹ ಒಪ್ಪಿಕೊಂಡಿದ್ದೀರಿ. ಆದ್ದರಿಂದ ಜನರನ್ನು ತಪ್ಪು ದಾರಿಗೆ ಎಳೆಯುತ್ತೇವೆನ್ನುವ ಮಾತನ್ನು ತಾವು ಹೇಳಬಾರದು.

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.—ಕೇಂದ್ರದಿಂದ ಹಣವನ್ನು ಒದಗಿಸಿದರೆ ಪರಿಹಾರವನ್ನು ಕೊಡುತ್ತೇವೆ. ಈ ಚಾಲೆಂಜನ್ನು ತಾವು ಅಕ್ಸೆಪ್ಟ್ ಮಾಡಿ ಕೊಳ್ಳುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ಅದಕ್ಕೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದಿದ್ದೇವೆ. ನೀವು ತರಬೇಕು ಎಂದು ಹೇಳುತ್ತೇವೆ. ಈಗಾಗಲೇ, ಕೇಂದ್ರಸರ್ಕಾರದವರು ಸ್ವಲ್ಪ ಹಣವನ್ನು ಇದಕ್ಕಾಗಿ ನಮ್ಮ ರಾಜ್ಯಸರ್ಕಾರಕ್ಕೆ ಕೊಟ್ಟಿದ್ದಾರೆಂದು ನಾನು ತಿಳಿದಿದ್ದೇನೆ.

ಶ್ರೀ ಕಡಿದಾಳ್ ದಿವಾಕರ್.—ಉತ್ತರ ಪ್ರದೇಶದಲ್ಲಿ ಸಾಮಾನ್ಯ ಜನರಿಗೆ, ಹರಿಜನರಿಗೆ ಭೂಮಿಯನ್ನು ಕೊಡದಿದ್ದಾಗ ಅಲ್ಲಿ ಚಳುವಳಿ ಮಾಡಬೇಕೆನ್ನುವುದು ತಮ್ಮ ಪಕ್ಷಕ್ಕೆ ಗೊತ್ತಾಗಲಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ಉತ್ತರ ಪ್ರದೇಶದ ಹಾಗೂ ಬಿಹಾರದ ಸಮಸ್ಯೆಯೇ ಬೇರೆ. ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಕೊಟ್ಟಿದ್ದಾರೆಯೇ ? ಆ ವಿಷಯ ಬೇಡ. ತಾವು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು. ಕರ್ನಾಟಕದಲ್ಲಿ ಭೂಸುಧಾರಣಾ ಕಾನೂನು ಜಾರಿಗೆ ಬರಬೇಕೆನ್ನುವುದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಭೂಸುಧಾರಣೆಯ ಕಾನೂನನ್ನು ಜಾರಿಗೆ ತರತಕ್ಕಂಥ ಕಾಲದಲ್ಲಿ ಪರಿಹಾರವನ್ನು ಕೊಡಬೇಕೆನ್ನುವ ಪ್ರಶ್ನೆ ಇದೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಿಂದ ನಮಗೆ ಹಣ 'ಬಂದಿಲ್ಲವೆಂದು ಹೇಳುತ್ತಿದ್ದಾರೆ'. ಇದೇ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ, ನಮ್ಮ ಸರ್ಕಾರವೇ ಇದ್ದಾಗ ೪೩ ಕೋಟಿ ರೂಪಾಯಿಗಳನ್ನು ಸಣ್ಣ ಹಿಡುವಳಿದಾರರಿಗೆ, ವಿಧವೆಯರಿಗೆ, ಅಂಗವಿಕಲರಿಗೆ ಒಂದೇ ಗಂಟಿನಲ್ಲಿ ಪರಿಹಾರ ಕೊಡಬೇಕೆಂದು ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ, ಕೇಳಿದಾಗ ಶ್ರೀಮತಿ ಗಾಂಧಿಯವರು ಏನು ಹೇಳಿದರು ? ನಾವು ಹಣವನ್ನು ಕೊಡಲಿಕ್ಕಾಗುವುದಿಲ್ಲ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಸ್ಟೇಟ್ ಲುಕ್ ಔಟ್ ಎಂದು ಖಡಾಖಂಡಿತವಾಗಿ ಹೇಳಿದ್ದಾರೆ. ಅದೇ ರೀತಿಯಲ್ಲಿಯೇ ನಮ್ಮ ಪಕ್ಷದವರು ಇದರ ಬಗ್ಗೆ ಹಣ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಇದು ಇರುವ ಸ್ಥಿತಿ.

ಶ್ರೀ ಕಡಿದಾಳ್ ದಿವಾಕರ್.—ಅದು ಏನೇ ಇರಲಿ, ಆದರೆ ಕಂದಾಯ ಕೊಡಬೇಡಿ, ತೆಗೆದುಕೊಂಡಿರುವ ಸಾಲ ವಾಪಸ್ ಕೊಡಬೇಡಿ ಎಂಬುದು ಇವರ ಬೇಡಿಕೆಗಳಲ್ಲಿ ಸೇರಿದೆ. ಇವು ಹುಚ್ಚು ಬೇಡಿಕೆಗಳಾಗಿವೆ. ಈ ರೀತಿಯಿಂದ ಜನರನ್ನು ಪ್ರಚೋದನೆ ಮಾಡುವುದು ದೇಶದ್ರೋಹವಾಗುತ್ತದೆಂದು ನಾನು ಈಗಾಗಲೇ ಹೇಳಿದೆ. ಅಲ್ಲದೆ ಜವಾಬ್ದಾರಿ ಸ್ಥಾನದಲ್ಲಿರುವವರು ಜನರನ್ನು ತಪ್ಪು ದಾರಿಗೆಳೆಯುವುದು ಸರಿಯಲ್ಲ. ಬೇಕಾದರೆ ಜನತಾ ಸರ್ಕಾರ ಅಧಿಕಾರದಲ್ಲಿರುವಂತಹ ಯಾವುದಾದರು ಒಂದು ರಾಜ್ಯದಲ್ಲಿ ಈ ರೀತಿ ಮಾಡಿ ಅದನ್ನು ಮೊದಲು ಒಂದು ಮಾದರಿ ರಾಜ್ಯವನ್ನಾಗಿ ಮಾಡಿ ನಂತರ ಇಲ್ಲಿ ಚಳುವಳಿ ಮಾಡಲಿ. ಅಲ್ಲಿಯವರೆಗೆ ಈ ತರಹದ ಚಳುವಳಿ ಮಾಡದೆ, ಅದನ್ನು ಪುನರ್ವಿಮರ್ಷೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಭೂಸುಧಾರಣೆಯು ಯೋಜನೆ ಇಡೀ ದೇಶಕ್ಕೇ ಒಂದು ಮಾದರಿ ಯೋಜನೆಯಾಗಿದೆ. ನಮ್ಮ ಸರ್ಕಾರ ಅನೇಕ ಉತ್ತಮ ಕೆಲಸಗಳನ್ನು ಮಾಡಿದೆ. ವಿಲೇಜ್ ಅಕೌಂಟೆಂಟ್‌ಗಳಿಗೆ ಅವರು ಕೆಲಸ ಮಾಡುವ ಕಡೆಗಳಲ್ಲಿಯೇ ಮನೆಗಳನ್ನು ಕಟ್ಟಿಸಿಕೊಡಲು ನಮ್ಮ ಸರ್ಕಾರ ಒಂದು ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ಜನತಾ ಮನೆಗಳನ್ನು ಬಡವರಿಗಾಗಿ ಕಟ್ಟಿಸಿಕೊಡಲು ೨೦ ಕೋಟಿ ರೂ.ಗಳನ್ನು ಬಡ್ಜೆಟಿನಲ್ಲಿ ತೆಗೆದಿರಿಸಿದೆ. ಮಾನ್ಯ ರಾಜಶೇಖರ್ ಅವರು ಬೆಂಗಳೂರು ನಗರದಲ್ಲಿಯೇ ಮನೆಗಳಾಗುತ್ತಿವೆ, ಬೇರೆ ಕಡೆಗಳಲ್ಲಿ ಆಗುತ್ತಿಲ್ಲವೆಂದು ಹೇಳಿದರು. ಅವರು ನನ್ನ ಕ್ಷೇತ್ರಕ್ಕೆ, ಇಲ್ಲವೇ ಶ್ರೀ ಚಂದ್ರಶೇಖರ್ ಅವರ ಕ್ಷೇತ್ರಕ್ಕೆ ಇಲ್ಲವೇ ಶೃಂಗೇರಿ ಕ್ಷೇತ್ರಕ್ಕೆ ಬಂದು ನೋಡಲಿ, ಅಲ್ಲಿ ಎಲ್ಲ ಕಡೆಗಳಲ್ಲಿಯೂ ಜನತಾ ಮನೆಗಳನ್ನು ನೋಡಬಹುದು. ಶೃಂಗೇರಿಯಲ್ಲಿ ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡಲಾಗಿದೆ. ಕೆಲವು ಕಡೆಗಳಲ್ಲಿ ಎಲ್ಲರಿಗೂ ಕಟ್ಟಿಸಿಕೊಡದಿರಬಹುದು, ಅದಕ್ಕೆ ಯಾರು ಕಾರಣವೋ ಗೊತ್ತಿಲ್ಲ.

ಇನ್ನು ಹರಿಜನರ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವುದಿಲ್ಲವೆಂದು ಹೇಳಿದರು. ಇಲ್ಲಿ ಈ ಮಾತನ್ನು ಯಾರು ಹೇಳುತ್ತಾರೋ. ಅವರೇ ಹರಿಜನರ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಹೋಗಲು ಬಿಡದೇ ತೊಂದರೆ ಮಾಡುತ್ತಾರೆ. ಇಲ್ಲದಿದ್ದರೆ ಅವರೂ ಸಹ ವಿದ್ಯಾಭ್ಯಾಸ ಮಾಡಿ ಮುಂದೆ ಬರಲು ಅವಕಾಶವಾಗುತ್ತದೆ. ಹರಿಜನರು ಮತ್ತು ಹಿಂದುಳಿದ ವರ್ಗದವರ ಮಕ್ಕಳು ಮುಂದೆ ಬರಬೇಕೆಂಬ ಉದ್ದೇಶದಿಂದಲೇ ಸರ್ಕಾರದವರು ಪ್ರತಿ ಹಳ್ಳಿಗಳಲ್ಲಿಯೂ ಹಾಸ್ಟಲ್‌ಗಳನ್ನು ತೆರೆದಿದ್ದಾರೆ. ಹಾಸ್ಟಲ್‌ನಲ್ಲಿ ಓದಲುಬರತಕ್ಕಂಥವರಿಗೆ ಸ್ಲೇಟು, ಪುಸ್ತಕ, ಚಪ್ಪಲಿ, ಸೋಪು, ಎಣ್ಣೆ ಬಟ್ಟೆ, ಊಟ ಮೊದಲುಗೊಂಡು ಎಲ್ಲ ಅನುಕೂಲಗಳನ್ನು ಸರ್ಕಾರ ಮಾಡಿಕೊಟ್ಟಿದೆ. ಇಡೀ ಬಡ್ಜೆಟ್ ಹಣವನ್ನೇ ಇವರ ವಿದ್ಯಾಭ್ಯಾಸಕ್ಕಾಗಿ ಮೀಸಲಿಡಿ ಎಂದು ಹೇಳಿದರು. ಆದರೆ ಈಗ ತೆರೆದಿರುವ ಹಾಸ್ಟಲಿಗಳಿಗೇ ಹುಡುಗರು ಸರಿಯಾಗಿ ಬರುತ್ತಿಲ್ಲ. ಈ ಹಾಸ್ಟಲುಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನಂತರ ಉಳಿದವರಿಗೂ ಈ ಎಲ್ಲ ಅನುಕೂಲಗಳನ್ನು ಕೊಡಲು ಸಾಧ್ಯವಾಗುತ್ತದೆ.

ಇನ್ನು ಭಾಗ್ಯಜ್ಯೋತಿ ಯೋಜನೆಯು ಮೂಲಕ ಬಡವರ ಮನೆಗಳಿಗೆ ಒಂದು ಬಲ್ಬಿನ ದೀಪ ಸೌಲಭ್ಯ ಒದಗಿಸುವುದಕ್ಕೆ ಏರ್ಪಾಡು ಮಾಡಿರುವುದು ಹೆಮ್ಮೆಯ ವಿಷಯ. ಈಗ ನಮ್ಮ ಕರ್ನಾಟಕ ರಾಜ್ಯ ಮಾಡಿರುವುದನ್ನು ಮುಂದೆ ಇಡೀ ದೇಶವೇ ಪಾಲನೆ ಮಾಡಬೇಕಾಗುತ್ತದೆ ನನ್ನ ಕ್ಷೇತ್ರದಲ್ಲಿರುವ ೨೫೦ ಹಳ್ಳಿಗಳ ಪೈಕಿ ೧೮೬ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಸೌಲಭ್ಯವಿದ್ದರೂ ಸಹ ಎಲ್ಲರ ಮನೆಗಳಲ್ಲಿಯೂ ಇಲ್ಲ. ಶ್ರೀಮಂತರ ಮನೆಗಳಲ್ಲಿ ಮಾತ್ರವಿದೆ. ಅದೇ ಅವರ ಮನೆಗೆ ೫೦ ಅಡಿ ದೂರದಲ್ಲಿರುವ ಬಡವರ ಮನೆಯಲ್ಲಿ ಸೀಮೆಎಣ್ಣೆ ಇಲ್ಲವೇ ಎಣ್ಣೆಯ ದೀಪಗಳನ್ನು ಬಳಸುತ್ತಿದ್ದಾರೆ. ಇಂತಹ ಮನೆಗಳಿಗೆ ಒಂದೊಂದು ವಿದ್ಯುಚ್ಛಕ್ತಿ ದೀಪದಂತೆ ಒಟ್ಟು ೫೦ ಸಾವಿರ ಲೈಟ್‌ಗಳನ್ನು ಒದಗಿಸಲು ನಮ್ಮ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದು ಒಳ್ಳೆಯ ಕಾರ್ಯಕ್ರಮವಲ್ಲವೇ ? ಬಡವರಿಗಾಗಿ ತೆಗೆದುಕೊಂಡ ಕಾರ್ಯಕ್ರಮವಲ್ಲವೇ ಎಂದು ಕೇಳಬೇಕಾಗುತ್ತದೆ ?

ಇನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ನಡೆಸುತ್ತಿದ್ದ ಆಸ್ಪತ್ರೆಗಳನ್ನು ಸರ್ಕಾರವೇ ವಹಿಸಿಕೊಂಡಿರುವುದೂ ಸಹ ಒಳ್ಳೆಯ ಕಾರ್ಯಕ್ರಮವಾಗಿದೆ. ಇಲ್ಲಿಯವರೆಗೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಗೆ ಬರುತಿದ್ದ ವರಮಾನವೆಲ್ಲಾ ಈ ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡುವುದಕ್ಕೇ ಖರ್ಚಾಗುತ್ತಿತ್ತು. ಇನ್ನು ಮುಂದೆ ಈ ಮಂಡಲಿಗಳು ಈ ಒಂದು ಖರ್ಚಿನ ಹೊರೆ ಇಲ್ಲದೆ ಬೇರೆ ಅಭಿವೃದ್ಧಿ ಕೆಲಸಗಳನ್ನು ಕೈಕೊಳ್ಳಲು ಸಾಧ್ಯವಾಗುತ್ತದೆ.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಅನೇಕ ಸಮಸ್ಯೆಗಳನ್ನು ನಾವು ಈ ಸಭೆಯಲ್ಲಿ ಪದೇ ಪದೇ ಕೇಳುತ್ತಿದ್ದೇವೆ. ಸರ್ಕಾರಕ್ಕೆ ಶೇಕಡಾ ೫೦ರಷ್ಟು ಕಳಂಕವಿರುವುದು ಈ ಕೊಳವೆ ಬಾವಿಗಳಿಂದ. ಈ ಬಾವಿಗಳಿಗೆ ಸರ್ಕಾರ ಖರ್ಚು ಮಾಡುತ್ತಿರುವ ಹಣ ವ್ಯರ್ಥವಾಗತ್ತಿದೆ. ಈ ಬಾವಿಗಳನ್ನು ತೆಗೆದ ೩ ತಿಂಗಳುಗಳಲ್ಲಿಯೇ ಕೆಟ್ಟುಹೋಗುತ್ತವೆ. ಒಂದು ಸಲ ಮುಖ್ಯಮಂತ್ರಿಗಳು ನಮ್ಮ ಭಾಗಕ್ಕೆ ಪ್ರವಾಸ ಬಂದಾಗ ಇಂತಹ ಒಂದು ಬಾವಿಯನ್ನು ತೆಗೆಯಲು ಸ್ಥಳದಲ್ಲಿಯೇ ಸೂಚನೆ ಕೊಟ್ಟರು. ಅದರಂತೆ ತೆಗೆದ ಬಾವಿ ಒಂದು ವಾರದಲ್ಲಿಯೇ ಕೆಟ್ಟು ಹೋಯಿತು. ಒಟ್ಟಿನಲ್ಲಿ ಒಳ್ಳೆಯ ಗುಣ ಮಟ್ಟದಿಂದ ಕೂಡಿಲ್ಲ. ಇದರಲ್ಲಿ ಏನೋ ಲೋಪವಿದೆ. ಇದನ್ನು ಕೂಡಲೇ ಸರಿಪಡಿಸಬೇಕು. ಇಲ್ಲದಿದ್ದರೆ ನಾವು ಖರ್ಚು ಮಾಡಿದ ಹಣವೆಲ್ಲಾ ವ್ಯರ್ಥವಾಗುತ್ತದೆ. ಮುಂದೆ ಜನರು ನಮ್ಮನ್ನು ಬೈಯುತ್ತಾರೆ. ಇದರ ಬದಲು ನಮ್ಮ ಭಾಗದಲ್ಲಿ ಓಪನ್ ವೆಲ್‌ಗಳನ್ನು ತೆಗೆಸುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿರುವ ಕಾಗದದ ಕೊರತೆಯನ್ನು ನೀಗಿಸುವುದಕ್ಕಾಗಿ ನಮ್ಮ ಸರ್ಕಾರ ಭದ್ರಾವತಿಯಲ್ಲಿರುವ ಮೈಸೂರು ಕಾಗದದ ಕಾರ್ಖಾನೆಯನ್ನು ವಿಸ್ತರಿಸಲು ಒಂದು ಬೃಹತ್ ಕಾರ್ಯ ಕ್ರಮವನ್ನು ಹಾಕಿಕೊಂಡಿದೆ. ಇದು ಕಾರ್ಯಗತವಾದಾಗ ಈ ಕಾರ್ಖಾನೆ ಇಡೀ ದೇಶದಲ್ಲಿರುವ ದೊಡ್ಡ ಕಾರ್ಖಾನೆಗಳ ಪೈಕಿ ಒಂದಾಗುತ್ತದೆ. ಈ ಕಾಗದದ ಕಾರ್ಖಾನೆಗೆ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿ ಕೊಳ್ಳುವುದರಿಂದ ರೈತರಿಗೂ ಅನುಕೂಲವಾಗುತ್ತದೆ. ಈಗ ಕುದುರೆಮುಖ ಯೋಜನೆಯಲ್ಲಿ ಸ್ಥಳೀಯ ರಿಗೇ ಹೆಚ್ಚಿನ ಉದ್ಯೋಗವನ್ನು ಕೊಡುತ್ತಿರುವಂತೆ, ಈ ಭದ್ರಾವತಿಯಲ್ಲಿರುವ ಕಾಗದದ ಕಾರ್ಖಾನೆ ಯನ್ನು ವಿಸ್ತರಣೆ ಮಾಡುವಾಗ ಅದಕ್ಕೆ ಬೇಕಾದ ರಾ–ಮೆಟೀರಿಯಲ್ಸ್‌ನ್ನು ಯಾರು ಒದಗಿಸುತ್ತಾರೋ ಅಂತಹವರ ಮಕ್ಕಳಿಗೇ ಅಲ್ಲಿ ಕೆಲಸವನ್ನು ಒದಗಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಸರ್ಕಾರ ವಿವಿಧ ರಂಗಗಳಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದರೂ ಸಹ ನಮ್ಮ ಮಲೆ ನಾಡಿನ ಅಭಿವೃದ್ಧಿಯ ಬಗ್ಗೆ ಈ ಬಡ್ಜೆಟ್‌ನಲ್ಲಿ ಯಾವ ಮಾತನ್ನೂ ಹೇಳಿಲ್ಲ. ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ನಮ್ಮ ಎಲ್ಲ ಯೋಜನೆಗಳು ಕಾರ್ಯ ಗತವಾಗುವುದು ಮಲೆನಾಡಿನ ಪ್ರಕೃತಿಯ ಮೇಲೆ ಅವಲಂಬಿಸಿದೆ. ಹೇಗೆಂದರೆ, ನಮ್ಮ ಮಲೆನಾಡಿನಲ್ಲಿ ಚೆನ್ನಾಗಿ ಮಳೆಯಾದರೇ ಎಲ್ಲ ಅಣೆಕಟ್ಟುಗಳಿಗೂ ನೀರು ಬರುವುದು, ಅಲ್ಲಿ ಮಳೆ ಸರಿಯಾಗಿ ಆಗದಿದ್ದರೆ ರಿಜರ್‌ವಾಯರ್‌ಗಳು ಭರ್ತಿಯಾಗುವುದಿಲ್ಲ. ಆಗ ನಾವು ವಿದ್ಯುಚ್ಛಕ್ತಿಯ ಅಭಾವವನ್ನು ಎದುರಿಸಬೇಕಾಗು ತ್ತದೆ. ಮಲೆನಾಡಿನಲ್ಲಿ ಒಳ್ಳೆಯ ಮಳೆಯಾದರೆ ಅಲ್ಲಿ ವಾಸ ಮಾಡುವ ಜನರು ತಮಗಾಗುವ ಕಷ್ಟವನ್ನು ಅನುಭವಿಸಿ ಹೊರಗಿನ ಜನರಿಗೆ ಸುಖ ಕೊಡುತ್ತಾರೆ. ವಿದ್ಯುಚ್ಛಕ್ತಿ ಸರಬರಾಜು ಸಮರ್ಪಕವಾಗಿದ್ದರೆ ಇಡೀ ದೇಶಕ್ಕೇ ಅನುಕೂಲವಾಗುತ್ತದೆ. ಮಲೆನಾಡಿನಲ್ಲಿ ಮಳೆ ಜಾಸ್ತಿಯಾದರೆ ಜನರು ತಮ್ಮ ಹುಟ್ಟಿದ ಊರನ್ನೇ ಬಿಟ್ಟು ಬೇರೆ ಕಡೆಗೆ ಹೋಗಬೇಕಾಗುತ್ತದೆ. ಅಂತಹ ಕಷ್ಟ ಅಲ್ಲಿದೆ. ಶರಾವತಿ ಯೋಜನೆ ಯಿಂದ ಜಾಗಗಳನ್ನು ಕಳೆದುಕೊಂಡ ಜನರಿಗೆ ಇನ್ನೂ ಪುನರ್ವಸತಿಯಾಗಿಲ್ಲ. ಆ ಭಾಗದಲ್ಲಿ ಯಾವ ಒಂದು ಕೈಗಾರಿಕೆಯೂ ಬಂದಿಲ್ಲ. ಸರ್ಕಾರದವರು ಯಾವ ಒಂದು ವಿಶೇಷವಾದಂತ ಯೋಜನೆಯನ್ನು ಕೈ ಕೊಂಡಿಲ್ಲ.

ವೆಸ್ಟ್ರನ್ ಘಾಟ್ ಡೆವಲಪ್‌ಮೆಂಟ್ ಸ್ಕೀಮು ಇದೆ ಎಂದು ಕೇಳಿದ್ದೇನೆ. ಆದರೆ ಅದರಿಂದ ನಮ್ಮ ಜನರಿಗೆ ಯಾವ ಅನುಕೂಲವೂ ಆಗಿಲ್ಲ. ಆಂಧ್ರದಲ್ಲಿರುವ ತೆಲಂಗಾಣ ಪ್ರದೇಶವನ್ನು ಅಭಿವೃದ್ಧಿ ಮಾಡುವ ಸಲುವಾಗಿ ಅಲ್ಲಿ ತೆಲಂಗಾಣ ಅಭಿವೃದ್ಧಿ ಮಂಡಲಿಯನ್ನು ಯಾವ ರೀತಿ ಮಾಡಿದ್ದಾರೋ, ಅದರಂತೆ ಇಲ್ಲಿಯೂ ಮಲೆನಾಡು ಅಭಿವೃದ್ಧಿ ಮಂಡಲಿ ಎಂದು ರಚನೆ ಮಾಡಬೇಕು. ಇದರಲ್ಲಿ ಅರೆ–ಮಲೆನಾಡು ಭಾಗಗಳನ್ನು ಸೇರಿಸಬಾರದೆಂದು ಹೇಳುತ್ತೇನೆ. ಏಕೆಂದರೆ, ವೆಸ್ಟ್ರನ್ ಘಾಟ್ ಡೆವಲಪ್ ಮೆಂಟ್ ಸ್ಕೀಮಿನಲ್ಲಿ ಅರೆ–ಮಲೆನಾಡಿನ ತಾಲ್ಲೂಕುಗಳನ್ನು ಸೇರಿಸಿದಾಗ, ಎಲ್ಲ ಅನುಕೂಲಗಳನ್ನೂ ಆ ತಾಲ್ಲೂಕ್‌ಗಳವರೇ ಪಡೆದುಕೊಂಡರು. ಆದರೆ ನಮ್ಮ ಮಲೆನಾಡಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಒಂದು ಮಲೆನಾಡು ಇಂಪ್ರೂವ್‌ಮೆಂಟ್ ಬೋರ್ಡನ್ನು ಸರ್ಕಾರ ರಚನೆ ಮಾಡಿದರೆ ಅಲ್ಲಿರುವ ಸಮಸ್ಯೆ ಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇಂದಿಗೂ ಆ ಭಾಗದಲ್ಲಿರುವ ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿಲ್ಲ, ಒಳ್ಳೆಯ ರಸ್ತೆಗಳಿಲ್ಲ, ಒಳ್ಳೆ ಸೇತುವೆಗಳಿಲ್ಲ, ಹತ್ತು ಸೇತುವೆಗಳಾಗ ಬೇಕೆಂದರೆ ಒಂದನ್ನು ಮಾಡಿಸುತ್ತಾರೆ. ಅಲ್ಲಿ ಮಳೆಗಾಲದಲ್ಲಿ ಜನರು ೬ ತಿಂಗಳ ಕಾಲ ದ್ವೀಪವಾಸಿ ಗಳಾಗುತ್ತಾರೆ. ಈ ಎಲ್ಲ ಕಷ್ಟಗಳನ್ನು ತಪ್ಪಿಸಲು ಮಲೆನಾಡು ಭಾಗಕ್ಕೇ ಒಂದು ಪ್ರತ್ಯೇಕವಾದಂಥ ಇಂಪ್ರೂವ್‌ಮೆಂಟ್ ಬೋರ್ಡನ್ನು ರಚನೆ ಮಾಡದಿದ್ದರೆ ಮಲೆನಾಡಿನ ಅಭಿವೃದ್ಧಿಯಾಗುವುದಿಲ್ಲ. ಆದ ಕಾರಣ ಕೂಡಲೇ ಈ ಕಲಸ ಮಾಡಬೇಕೆಂಮ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ನಮ್ಮ ಮಲೆ ನಾಡು ಭಾಗದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಕೈಕೊಳ್ಳಲು ಹೆಚ್ಚಿನ ಅವಕಾಶವಿರುವುದರಿಂದ ಇದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ನಮ್ಮ ಮಲೆನಾಡಿನ ಭಾಗದಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಕೊಳ್ಳಬೇಕೆಂದು ಮತ್ತೊಮ್ಮೆ ಕೇಳಿ ಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಅಧ್ಯಕ್ಷರೆ, ಈ ವರ್ಷದ ಆಯವ್ಯಯ ಪತ್ರದಲ್ಲಿ ಮೊದಲನೆಯದಾಗಿ ಮಾನ್ಯ ಆರ್ಥಿಕ ಮಂತ್ರಿಗಳು ಏಳನೇ ಆರ್ಥಿಕ ಆಯೋಗದಿಂದ ಏನು ಶಿಫಾರಸ್ಸು ಮಾಡಿದ್ದಾರೆ ಇದರಿಂದಾಗಿ ನಮ್ಮ ರಾಜ್ಯಕ್ಕೆ ಹೆಚ್ಚಿನ ಲಾಭವಾಗಿದೆಯೆಂದು ಹೇಳಿಕೊಂಡು ಕೇಂದ್ರದಿಂದ

ಈ ಶಿಫಾರಸ್ಸಿನಿಂದ ನಮಗೆ ಹಣ ಸಹಾಯ ಬರುವುದರಲ್ಲಿದೆ. ಹೀಗಿರುವಾಗ ಒಂದು ಕಡೆ ಇವರು ಹೇಳು ತ್ತಿದ್ದಾರೆ ಕೇಂದ್ರ ಸರ್ಕಾರದ ಸಹಾಯ ಹೆಚ್ಚಾಗುತ್ತದೆಂದು. ಮತ್ತೊಂದು ಕಡೆ ಪಾನನಿರೋಧದ ಬಗ್ಗೆ ಆಕ್ಟ್ರಾಯ್ ರದ್ದಿಯಾತಿಯ ಬಗ್ಗೆ ಬೇರೆ ರೀತಿ ಹೇಳುತ್ತಿದ್ದಾರೆ. ಪಾನನಿರೋಧವನ್ನು ರದ್ದು ಮಾಡಿದರೆ ಆಗುವಂತಹ ನಷ್ಟವನ್ನು ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಕೊಡುತ್ತಾರೆಯೇ ಎನ್ನತಕ್ಕ ಯೋಚನೆಯನ್ನು ಮಾಡಬೇಕೆಂದು ಹೇಳುತ್ತಾರೆ. ಆಕ್ಟ್ರಾಯನಿಂದ ಆಗತಕ್ಕ ನಷ್ಟವನ್ನು ಭರಿಸಲು ಕೇಂದ್ರ ಸರ್ಕಾರದವರು ಅರ್ಧ ನೇರವನ್ನು ನೀಡಬೇಕೆಂದು ಹೇಳುತ್ತಿದ್ದಾರೆ, ಆದರೆ ಈಗಿನ ಕೇಂದ್ರ ಸರ್ಕಾರದವರ ನೀತಿಯೇ ಬೇರೆಯಾಗಿದೆ. ಅದೇನೆಂದರೆ ಅವರು ಸಾಧ್ಯವಾದಷ್ಟು ರಾಜ್ಯ ಸರ್ಕಾರಗಳ ಹೊರೆಯನ್ನು ಕಡಿಮೆ ಮಾಡಿ, ಆದಷ್ಟು ಸಹಾಯ ಮಾಡಿರುವ ಒಂದು ನೀತಿಯನ್ನು ಅನುಸರಿಸಬೇಕೆಂದು ಅದು ಜನತಾ ಸರ್ಕಾರವೇ ಆಗಿರಲಿ, ಅಥವಾ ಕಾಂಗ್ರೆಸ್ (ಐ) ಸರ್ಕಾರವೇ ಆಗಿರಲಿ ಅವರು ಒಂದು ನೀತಿ ನಿರೂಪಣೆ ಮಾಡಿಕೊಂಡು ಸಾಧ್ಯವಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ರಾಜ್ಯ ಸರ್ಕಾರಗಳ ಸಹಕಾರದಿಂದ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆಂದು ತೀರ್ಮಾನಿಸುತ್ತಾರೆ. ಆದರೆ ಇವತ್ತು ನಮ್ಮ ರಾಜ್ಯದಲ್ಲಿ ಏನಾಗುತ್ತಿದೆಯೆಂದರೆ ಒಂದು ದ್ವಿಮುಖ ನೀತಿ ನಿರ್ಮಾಣವಾಗುತ್ತಿದೆ. ಪಾನ ನಿರೋಧವನ್ನು ಇವತ್ತು ತಮಿಳುನಾಡು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಪಾನನಿರೋಧದಿಂದ ಆಗುವ ಬೊಕ್ಕಸದ ನಷ್ಟಕ್ಕೆ ತಮಿಳುನಾಡು ಸರ್ಕಾರದವರು ಕೇಂದ್ರ ಸರ್ಕಾರದವರಿಂದ ಕಿಂಚಿತ್ತು ಸಹಾಯವನ್ನು ಕೇಳಿಲ್ಲ. ಆ ರೀತಿಯ ನಿಲುವನ್ನು ಆ ರಾಜ್ಯ ಸರ್ಕಾರ ತೆಗೆದುಕೊಂಡಿರುವಾಗ ನಮ್ಮ ಸರ್ಕಾರದವರು ೫೦ ಪರ್ಸೆಂಟ್ ನಷ್ಟವನ್ನು ಭರಿಸಿದರೆ ಪಾನ ನಿರೋಧವನ್ನು ತೆಗೆದುಕೊಳ್ಳಲು ಆಗುವು ದಿಲ್ಲವೆಂದು ಹೇಳುತ್ತಿದ್ದಾರೆ.

ಇನ್ನೂ ಗೋಹತ್ಯಯ ನಿಷೇಧದ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರದವರು ಇದರ ಬಗ್ಗೆ ತಮ್ಮ ಕಳಕಳಿಯನ್ನು ತೋರಿಸುತ್ತಿದ್ದಾರೆ. ವಿನೋಬಾ ಭಾವೆಯವರು ಗೋಹತ್ಯೆಯ ವಿರುದ್ಧವಾಗಿ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿರುವುದನ್ನು ನೋಡಿ ಮಾನ್ಯ ಮುಖ್ಯ ಮಂತ್ರಿಗಳು ಹೋಗಿ ಅಲ್ಲಿನ ಜನತಾಪಾರ್ಟಿಯ ಅಧ್ಯಕ್ಷರನ್ನು ಮತ್ತು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಗೋಹತ್ಯಯ ನಿಷೇದದ ಬಗ್ಗೆ ತಮ್ಮ ಒಂದು ಕಳಕಳಿಯನ್ನು ಮುಖ್ಯ ಮಂತ್ರಿಗಳು ತೋರಿಸಿದ್ದಾರೆ. ಇವರಿಗೆ ಗೋಹತ್ಯೆಯ ಮೇಲೆ ಇರುವ ಕಳಕಳಿಯನ್ನು ಪಾನನಿರೋಧದ ಬಗ್ಗೆಯೂ ತೋರಿಸಲಿ. ಇದರಿಂದ ವಿನೋಭಾಬಾವೆಯವರ ಒಂದು ನಿಲುವನ್ನು ಎತ್ತಿ ಹಿಡಿದಂತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ದೇಶದಲ್ಲಿ ಆಹಾರಾಭಾವ ಕಡಿಮೆಯಾಗಬೇಕಾದರೆ ದನದ ಮಾಂಸವನ್ನು ತಿನ್ನಿ ಎಂದು ಹೇಳಿದ್ದಾರೆ ಸ್ವಾಮಿ.

ಶ್ರೀ ಎಂ. ಚಂದ್ರಶೇಖರ್.—ಅದು ಗೊತ್ತಿದೆ ಸ್ವಾಮಿ, ಇದೇ ಒಂದು ನಿಲುವನ್ನು ಇವರು ಪಾನನಿರೋಧದ ಬಗ್ಗೆ ತೋರಿಸಲಿ ಸ್ವಾಮಿ. ಇವರು ಪಾನನಿರೋಧವನ್ನು ತಂದು ಇದರಿಂದಾಗುವ ನಷ್ಟಕ್ಕೆ ಇವರು ಕೇಂದ್ರದವರಿಂದ ೫೦ ಪರ್ಸೆಂಟ್ ಅಲ್ಲ ಪೂರ್ಣ ಹಣವನ್ನು ಕೇಳಲಿ, ಅದು ಬಿಟ್ಟು ಇವರು ಮೊದಲೇ ಎಲ್ಲದ್ದಕ್ಕೂ ಕೇಂದ್ರದವರ ಸಹಾಯವನ್ನು ಕೇಳುವುದು ಸರಿಯಲ್ಲವೆಂದು ನನ್ನ ಭಾವನೆ. ಈ ಮುಂಗಡ ಪತ್ರದಲ್ಲಿ ಕೇಂದ್ರ ಸರ್ಕಾರದವರ ಮೇಲೆ ಒಂದು ಹೊರೆ ಹಾಕಿ ಅವರನ್ನು ದೂರುವುದು ಸರಿಯಾದ ಒಂದು ಪದ್ಧತಿಯಲ್ಲ ಎಂದು ನನ್ನ ಭಾವನೆ. ಆಕ್ಟ್ರಾಯ್ ರದ್ದಿಯಾತಿಯಿಂದ ೨೦ ಕೋಟಿ ರೂಪಾಯಿ ನಷ್ಟವಾಗುತ್ತದೆಂದು ಹೇಳಿದ್ದಾರೆ. ಈ ವಿಷಯ ನಮಗೆ ಗೊತ್ತಿದೆ, ಆಕ್ಟ್ರಾಯನಿಂದ ನೂರು ರೂಪಾಯಿ ಬೊಕ್ಕಸಕ್ಕೆ ಬರಬೇಕಾಗಿದ್ದ ಕಡೆಗಳಲ್ಲಿ ಅದನ್ನು ವಸೂಲಿ ಮಾಡುವಾಗ ಅಲ್ಲಿನ ಸಿಬ್ಬಂಧಿ ಯವರ ವ್ಯವಹಾರದಿಂದಾಗಿ ಹತ್ತು ರೂಪಾಯಿ ಬರುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಇವತ್ತು ಆಕ್ಟ್ರಾಯ್ ರದ್ದಿಯಾತಿಯಿಂದ ಸರ್‌ಚಾರ್ಜ್ ಹಾಕಿದ್ದ, ಆದರಿಂದ ಹಾಗೂ ಎಂಟ್ರೆನ್ಸ್ ಟ್ಯಾಕ್ಸಿನಿಂದಾಗಿ ಪ್ರತಿಯೊಂದು ಕಾಸೂ ಲೆಕ್ಕಕ್ಕೆ ಸಿಕ್ಕುತ್ತಿದೆ. ಈಗ ಇವರು ಹೇಳಿದ್ದಾರೆ ಆಕ್ಟ್ರಾಯ್ ರದ್ದಿಯಾತಿಯಿಂದ ೨೦ ಕೋಟಿ ಹೋಗುತ್ತಿದೆಯೆಂದು. ಆದರೆ ಮುಂದಿನ ಬಡ್ಜೆಟ್ ಮಂಡನೆಯ ಕಾಲದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಹೇಳುತ್ತಾರೆ ಆಕ್ಟ್ರಾಯ್ ರದ್ದಿಯಾತಿಯಿಂದ ಸರ್‌ಚಾರ್ಜ್ ಹಾಗೂ ಎಂಟ್ರಿ ಟ್ಯಾಕ್ಸ್ ಹಾಕಿದ್ದುದರಿಂದ ಆಕ್ಟ್ರಾಯ್ ರದ್ದಿನಿಂದಾದ ನಷ್ಟದ ಮೊಬಲಗಿಗಿಂತ ಎರಡು ಪಟ್ಟು ಮೂರು ಪಟ್ಟು ಜಾಸ್ತಿ ಆದಾಯ ಬರುವ ಸೂಚನೆ ಇದೆ ಎಂದು. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಿಂದ ೧೦ ಕೋಟಿ ರೂಪಾಯಿಯನ್ನು ಇವರು ಕೇಳಬೇಕಾಗಿಲ್ಲ. ರಾಜ್ಯದಲ್ಲಿ ಈ ಬಾಬತ್ತಿನಿಂದ ಉತ್ಪಾದನೆ ಬರುತ್ತದೆ. ಕೇಂದ್ರದಿಂದ ಹತ್ತುಕೋಟಿ ರೂಪಾಯಿ ಬರಲಿ, ಆದರೆ

ಯಾವುದಾದರೂ ಒಂದು ರೀತಿಯಿಂದ ಕೇಂದ್ರ ಸರ್ಕಾರವನ್ನು ಅಲ್ಲಗಳೆಯುವಂತಹ ಒಂದು ನೀತಿಯು ಪಾಲನೆ ಮಾಡುವುದು ಸರಿಯಲ್ಲ. ಇಂತಹ ಒಂದು ಕಾರಣಗಳಿಂದ ಕೇಂದ್ರ ಸರ್ಕಾರವನ್ನು ದೂರುವುದು ಸರಿಯಲ್ಲ.

ಇನ್ನು ಎರಡನೆಯದಾಗಿ ಭೂಸುಧಾರಣೆಯ ವಿಚಾರವಾಗಿ ಮಾನ್ಯ ಶ್ರೀ ಜಿ. ಎಚ್. ಪಾಟೀಲ್ ಹಾಗೂ ಕಡಿದಾಳ್ ದಿವಾಕರ್ ಮಾತನಾಡಿದ್ದಾರೆ, ಈಗ ಭೂಸುಧಾರಣೆಯು ನಮ್ಮ ರಾಜ್ಯದಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿರುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಭೂಸುಧಾರಣೆಯ ಕಾನೂನಿನಿಂದಾಗಿ, ಸಣ್ಣ ಹಿಡುವಳಿದಾರರು, ದುರ್ಬಲವರ್ಗದವರು, ಯಾರು ಭೂಮಿಯನ್ನು ಕಳೆದು ಕೊಂಡಿದ್ದಾರೆ ಅಂಥಹವರಿಗೆ ಕೂಡಲೆ ಹಣದ ಪರಿಹಾರವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು ಇದೇ ರೀತಿ ಅತಿ ಸಣ್ಣ ಹಿಡುವಳಿಯ ಗೇಣೀದಾರರೇನಿದ್ದಾರೆ ಎಂದರೆ ಐದು ಎಕರೆಯಷ್ಟು ಒಳಗೆ ಭೂಮಿಯನ್ನು ಯಾರು ಹೊಂದಿದ್ದಾರೆ ಅವರನ್ನು ಕೂಡಲೇ ಜಮೀನಿನ ಒಡೆಯರನ್ನಾಗಿ ಮಾಡಿದ ಪಕ್ಷದಲ್ಲಿ ಅವರು ಬ್ಯಾಂಕಿನಲ್ಲಿ ಸಾಲ ಸೋಲವಮಾಡಿ ಅದರ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಾಗುತ್ತದೆ, ಆದುದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ, ಬಡವರಾದ ಗೇಣೀದಾರರ ಹಿತದೃಷ್ಟಿಯಿಂದ ಈ ಒಂದು ಕಾಯಕ್ರಮವನ್ನು ಹಾಕಿ ಕೊಳ್ಳುವುದು ಉತ್ತಮ. ಮತ್ತೊಂದು ವಿಚಾರ ಹೇಳಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಶೇಕಡ ಒಂದು ಪ್ರಮಾಣದ ಪ್ರಕಾರ ಡಿ.ಐ.ಆರ್. ಲೋನ್‌ಗಳನ್ನು ರೈತರಿಗೆ ಕೊಡಬೇಕೆಂದು ಹೇಳಿದ್ದಾರೆ. ಇವತ್ತಿನ ದಿವಸ ಒಬ್ಬ ಸಣ್ಣ ರೈತ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಸಾಲವನ್ನು ತೆಗೆದುಕೊಂಡಿರುವವನಿಗೆ ಅವನಿಗೆ ಬಡ್ಡಿಗೆ ಚಕ್ರಬಡ್ಡಿ ಸೇರಿಸಿ ಸಾಲದ ಮೊತ್ತವನ್ನು ಹೆಚ್ಚಿಸಿರುವುದರಿಂದ ಇವತ್ತು ರೈತನು ಇದರಿಂದಾಗಿ ತನ್ನ ಜಮೀನನ್ನೇ ಈ ಸಾಲದಿಂದಾಗಿ ಕಳೆದುಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಈ ರೀತಿಯಾದ ಶೋಷಣೆ ನಡೆಯುತ್ತಿರುವುದ ರಿಂದ, ಸಣ್ಣ ಹಿಡುವಳಿದಾರರ ಹಾಗೂ ಬಡ ಗೇಣೀದಾರರ ಹಿತದೃಷ್ಟಿಯಿಂದ ಡಿ.ಪಿ.ಆರ್. ಮುಖಾಂತರ ಪಿಎಲ್‌ಡಿ ಬ್ಯಾಂಕುಗಳು ಕಡಿಮೆ ಬಡ್ಡಿದರದಲ್ಲಿ ಸಾಲ ಸಿಕ್ಕುವಂತೆ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಉತ್ತಮವೆಂದು ಕಾಣುತ್ತದೆ. ಸಣ್ಣ ಹಿಡುವಳಿ ರೈತರಿಗೂ ಸಹ ಇದರ ಸಹಾಯ ಸಿಕ್ಕುವಂತೆ ಮಾಡು ವುದು ಒಳ್ಳೆಯದೆಂದು ಕಾಣುತ್ತದೆ. ಆದರೆ ಇವತ್ತಿನ ದಿವಸ ನಮ್ಮ ರಾಜ್ಯ ಸರ್ಕಾರ ಸಂಬಂಧಪಟ್ಟ ಯಾವುದೇ ಹಣದ ವ್ಯವಸ್ಥೆಯನ್ನು ಯಾವುದೇ ಬ್ಯಾಂಕ್ ಮುಖಾಂತರವಾಗಲಿ, ಅಥವಾ ಫೈನಾನ್ಸ್ ಯಲ್ ಕಾರ್ಪೊರೇಷನ್‌ಗಳ ಮುಖಾಂತರವಾಗಿ ಸಮರ್ಪಕವಾಗಿ ಬಡಜನರ ಹಿತಕ್ಕಾಗಿ ನಿರ್ವಹಿಸುವತ್ತಿಲ್ಲ ವೆಂದು ಹೇಳಬೇಕಾಗುತ್ತದೆ. ಕಡಿಮೆ ಬಡ್ಡಿದರದಲ್ಲಿ ಇನ್ನೂ ಹೆಚ್ಚಿನ ಜನರಿಗೆ ಡಿ.ಐ.ಆರ್. ಲೋನ್ ಮುಖಾಂತರ ರಾಜ್ಯಾದಂತ ಕೊಡುವಂತೆ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ನಗರಗಳಲ್ಲಿ ಕೊಳಚೆ ನಿರ್ಮೂಲನದ ಬಗ್ಗೆ ಮಾತನಾಡುತ್ತೇನೆ. ಇಂದು ನಗರ ಪ್ರದೇಶ ದಲ್ಲಿ ಮಾತ್ರ ಕೊಳಚೆ ಪ್ರದೇಶವಿಲ್ಲ. ಅದು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿಲ್ಲ. ದೊಡ್ಡ ದೊಡ್ಡ ಮಹಾ ನಗರಗಳಲ್ಲಿ ಕೊಳಚೆ ಪ್ರದೇಶಗಳು ಬೇಕಾದಷ್ಟು ಇವೆ. ಅವುಗಳನ್ನು ನಿರ್ಮೂಲನೆ ಮಾಡುವುದಕ್ಕೆ ಇವತ್ತು ಕೇಂದ್ರ ಸರ್ಕಾರದವರು ಹುಡ್ಕೋ ಸ್ಕೀಂಗಳನ್ನು ಹಾಕಿ ಅವುಗಳ ಮುಖಾಂತರ, ಕೊಳಚೆ ನಿರ್ಮೂಲನ ಮಾಡಿ ಅಲ್ಲಿ ಮನೆಗಳನ್ನು ಕಟ್ಟಿ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಲು ಸಹಾಯ ಮಾಡುತ್ತಿದ್ದಾರೆ. ಈಗ ರಾಜ್ಯ ಸರ್ಕಾರದವರು ಇದರ ಬಗ್ಗೆ ಮಾಡುತ್ತಿರುವ ಸ್ಕೀಂಗಳನ್ನು ಬರೀ ಸ್ಕೀಂಗಳೆಂದು ಹೇಳಬೇಕಷ್ಟೆ ; ಕೇಂದ್ರ ಸರ್ಕಾರದವರ ಸಹಾಯದಿಂದ ಅನೇಕ ಕಡೆಗಳಲ್ಲಿ ಹೌಸಿಂಗ್ ಸ್ಕೀಂಗಳು ನಡೆಯುತ್ತಿವೆ. ಇವತ್ತು ಬೆಂಗಳೂರನ್ನು ತೆಗೆದುಕೊಂಡರೆ ಇವತ್ತು ಇಲ್ಲಿ ಕೊಳಚೆ ನಿರ್ಮೂಲನ ಕಾರ್ಯ ಏನೂ ಸಮರ್ಪಕವಾಗಿ ನಡೆಯುತ್ತಿಲ್ಲ. ಇವತ್ತು ಕೆಲವು ಕಡೆ ಕೊಳಚೆ ನಿರ್ಮೂಲನ ಮಾಡುವ ಉದ್ದೇಶದಿಂದ ಉದಾಹರಣೆಗೆ ಹೇಳಬೇಕೆಂದರೆ ಕೇಂದ್ರ ಸರ್ಕಾರ ಕೆಲವು ಯೋಜನೆ ಗಳನ್ನು ಮಂಜೂರು ಮಾಡಿ ಕಳುಹಿಸಿದ್ದಾರೆಂದು ಕಾಣುತ್ತಿದೆ. ನನ್ನ ಕ್ಷೇತ್ರದಲ್ಲಿ ಸುಮಾರು ೧,೨೦೦ ಮನೆ ಗಳು ಇರುವಂತಹ ಒಂದು ಪ್ರದೇಶದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷದ ಒಂದು ದೊಡ್ಡ ಪ್ರಮಾಣದ ಸ್ಕೀಮನ್ನು ಹಾಕಿ ಕೊಂಡಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಸ್ಕೀಮುಗಳನ್ನು ಜಾರಿಗೆ ತರಬೇಕಾದಾಗ ಅದಕ್ಕೆ ತಕ್ಕಂಥ ವ್ಯವಸ್ಥೆ ರಾಜ್ಯದ ಕೊಳಚೆ ನಿರ್ಮೂಲನ ಬೋರ್ಡಿನಲ್ಲಿರಬೇಕು. ಇವತ್ತಿನದಿವಸ ಆ ಬೋರ್ಡಿನಲ್ಲಿ ತಾಂತ್ರಿಕಮಟ್ಟದ ಅಧಿಕಾರಿಗಳಾಗಲೀ ಅಥವಾ ಅದನ್ನು ನಡುಸುವಂಥ ಅಧಿಕಾರಿಗಳಾಗಲೀ

ಯಾರೂ ಕಾಣುವುದಿಲ್ಲ. ಇದನ್ನು ಸರಿಯಾಗಿ ಬಲಪಡಿಸದ ಹೊರತಾಗಿ ಎಷ್ಟು ಹಣ ತೆಗೆದುಕೊಂಡು ಬಂದರೂ ಕೂಡ ಸರಿಯಾಗಿ ವ್ಯಯವಾಗದ ಹೊರತು ಏನೂ ಪ್ರಯೋಜನವಾಗುವುದಿಲ್ಲ. ಕೊಳಚೆ ನಿರ್ಮೂಲ ಮಂಡಲಿಯನ್ನು ಏನ್ನು ರಚನೆ ಮಾಡಿದ್ದೀರಿ ಅದು ಸರಿಯಾಗಿ ಕೆಲಸ ಮಾಡಬೇಕಾದರೆ ಅದಕ್ಕೆ ಈಗಿರುವ ಮಟ್ಟಕಿಂತ ಸ್ವಲ್ಪ ಹೆಚ್ಚಿಗೆ ಅಧಿಕಾರ ಕೊಡುವ ವ್ಯವಸ್ಥೆ ಮಾಡದೆ ಹೊರತಾಗಿ ಏನೂ ಪ್ರಯೋಜನ ವಾಗುವುದಿಲ್ಲ,

೫–೦೦ ಪಿ.ಎಂ.

ಮತ್ತೊಂದು ವಿಚಾರವೇನೆಂದರೆ, ನಮ್ಮ ಆರ್ಥಿಕ ಮಂತ್ರಿಗಳು ಹಳ್ಳಿಯಲ್ಲಿರತಕ್ಕ ಕೆಲವು ಬಡವರ ಮನೆಗಳಿಗೆ ಒಂದು ವಿದ್ಯುಚ್ಛಕ್ತಿ ದೀಪವನ್ನು ಕೊಡುವುದಕ್ಕೆ ''ಭಾಗ್ಯ ಜ್ಯೋತಿ'' ಎಂಬ ಒಂದು ಹೊಸ ಯೋಜನೆಯನ್ನು ಹಾಕಿದ್ದಾರೆ. ಅದರ ಹೆಸರು ಚೆನ್ನಾಗಿದೆ ಯೋಜನೆ ಚೆನ್ನಾಗಿದೆ, ಈಗ ಕೆಲಸ ಮಾಡಬೇಕಾಗಿದೆ. ಇದು ಮುಖ್ಯವಾಗಿ ಹಳ್ಳಿಗಾಡಿಗೆ ಸಂಬಂಧಪಟ್ಟ ವಿಚಾರ. ಇವತ್ತಿನದಿವಸ ಬೆಳಗ್ಗೆ ನಮ್ಮ ವಿದ್ಯುಚ್ಛಕ್ತಿ ಮಂತ್ರಿಗಳು ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಇವತ್ತು ವಿದ್ಯುಚ್ಛಕ್ತಿಗೆ ಎಷ್ಟು ತೊಂದರೆಯಾಗಿದೆ ಎನ್ನುವುದನ್ನು ಹೇಳಿದರು. ಕಳೆದ ಜನವರಿ ತಿಂಗಳ ಕೊನೆಯಲ್ಲಿ ಈ ವರ್ಷದಲ್ಲಿ ನಮಗೆ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಏನೂ ತೊಂದರೆಯಿಲ್ಲ ಎಂದು ಹೇಳಿದ್ದರು. ಈಗಾಗಲೇ ವಿದ್ಯುಚ್ಛಕ್ತಿ ಸರಬರಾಜಿಗೆ ಎಷ್ಟು ತೊಂದರೆಯಾಗಿದೆ ಎನ್ನುವುದು ಇವತ್ತಿನ ಹೇಳಿಕೆಯಲ್ಲಿ ಗೊತ್ತಾಯಿತು. ಈ ರೀತಿ ಯಾವುದೇ ಒಂದು ದೃಢ ನಿಲುವು ಇಲ್ಲದೇ ಇರತಕ್ಕ ಕಾಲದಲ್ಲಿ. ''ಗರೀಬಿ ಹಠಾವೊ'' ಘೋಷಣೆ ಮಾಡಿದ ಹಾಗೆ ''ಭಾಗ್ಯಜ್ಯೋತಿ'' ಯೋಜನೆಯನ್ನು ಮಾಡಿ ಪ್ರತಿಯೊಂದು ಮನೆಗೂ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದರೆ ಒಂದೊಂದು ಮನೆಗೆ ಕನೆಕ್ಷನ್ ಕೊಡಬೇಕಾದಾಗ ಡಿಪಾರ್ಟ್‌ಮೆಂಟಿಗೆ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ಯೋಚನೆಮಾಡಬೇಕು. ೨೫ ಲಕ್ಷ ರೂಪಾಯಿಗಳನ್ನು ಕೆ. ಇ ಬಿ. ಗೆ ಕೊಟ್ಟಿದ್ದಾರೆ. ಎಷ್ಟು ಮನೆ ಗಳಿಗೆ ವಿದ್ಯುಚ್ಛಕ್ತಿಯನ್ನು ಹಾಕಬಹುದು ಎನುವುದನ್ನು ಯೋಚನೆ ಮಾಡಬೇಕು. ವಿದ್ಯುಚ್ಛಕ್ತಿ ನಮಗೆ ಸಾಕಷ್ಟು ಸಿಕ್ಕದೇ ಇರುವಂಥ ಸಮಯದಲ್ಲಿ ಗುಡಿ ಕೈಗಾರಿಕೆ ಅಥವಾ ಸಣ್ಣ ಕೈಗಾರಿಕೆ ಮತ್ತು ಪಂಪು ಸೆಟ್ಟುಗಳಿಗೆ ಅಂದರೆ ಯಾವುದು ಉತ್ಪತ್ತಿ ಮಾಡುತ್ತದೆ ಅಂಥಾದ್ದಕ್ಕೆ ಇರುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬೇಕು. ಅದರ ಬದಲು ಗೋಬರ್ ಗ್ಯಾಸ್ ಅನಿಲದ ಕೇಂದ್ರಗಳನ್ನು ಪ್ರತಿಯೊಂದು ಹಳ್ಳಿಯಲ್ಲೂ ನಾವೇನಾದರೂ ದೊಡ್ಡ ಪ್ರಮಾಣದಲ್ಲಿ ಮಾಡಿದೆವು ಅಂದರೆ. ಹಳ್ಳಿಯಲ್ಲಿ ಮನೆಗೆ ದೀಪವೂ ಬರುತ್ತದೆ, ಅದೇ ರೀತಿ ಅಡಿಗೆ ಮಾಡುವುದಕ್ಕೆ ಅನಿಲವೂ ಬರುತ್ತದೆ. ಎರಡು ಕಡೆ ಅದಾಯ ವಾಗುತ್ತದೆ. ನಮ್ಮ ದೇಶದಲ್ಲಿ ಇವತ್ತು ಸಗಣಿಯನ್ನು ಗೊಬ್ಬರವನ್ನಾಗಿ ಉಪಯೋಗಿಸುವುದು ಬಿಟ್ಟು ಅಡಿಗೆಗೆ ಉರಿಸುವುದಕ್ಕೆ ಉಪಯೋಗ ಮಾಡತಕ್ಕಂಥಾದ್ದಾಗಿದೆ. ನಮ್ಮ ದೇಶದಲ್ಲಿರತಕ್ಕ ಕಾಡುಗಳಲ್ಲಿ ಈಗಾ ಗಲೇ ಮರಗಳು ಕಡಿಮೆಯಾಗುತ್ತಿವೆ. ನಷ್ಟವಾಗುತ್ತಿವೆ ಅದನ್ನು ಕಾಪಾಡುವುದಕ್ಕೋಸ್ಕರ ಗೋಬರ್ ಗ್ಯಾಸ್ ಅನಿಲದ ಕೇಂದ್ರಗಳನ್ನು ಪಂಚಾಯಿತಿ ಮಟ್ಟದಲ್ಲಿ ಸಾಮುದಾಯಕವಾಗಿ ಪ್ರಾರಂಭ ಮಾಡಿ ಒಂದು ಗ್ರಾಮಕ್ಕೆ ಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಹಳ್ಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಎಂದು ಹೇಗೆ ಯೋಚನೆ ಮಾಡುತ್ತೇವೋ ಅದೇ ರೀತಿ ಹಳ್ಳಿಯಲ್ಲಿ ಸಾಮುದಾಯಕವಾಗಿ ಗೋಬರ್ ಗ್ಯಾಸ್ ಅನಿಲದ ಕೇಂದ್ರಗಳನ್ನು ಮಾಡಿದಾಗ ಅವರ ಮನೆಗೆ ದೀಪವನ್ನೂ ಕೊಡಬಹುದು, ಅಡಿಗೆಗೆ ಅನಿಲವನ್ನೂ ಕೊಡಬಹುದು, ಆಗ ಆತನಿಗೆ ಅನುಕೂಲವಾಗುತ್ತದೆ, ದೇಶಕ್ಕೂ ಒಳ್ಳೆಯದಾಗು ತ್ತದೆ. ಇದರ ಬಗ್ಗೆ ದೊಡ್ಡ ರೀತಿಯಲ್ಲಿ ಯೋಜನೆ ಮಾಡಿ ೨೫ ಲಕ್ಷ ಅಲ್ಲ ೨೫ ಕೋಟಿ, ೫೦ ಕೋಟಿ ರೂಪಾಯಿ ಹಾಕಿದರೂ ಇವತ್ತಲ್ಲ ನಾಳೆ ಅದರಿಂದ ಅನುಕೂಲವಾಗುತ್ತದೆ. ಕೇವಲ ಘೋಷಣೆಗೋಸ್ಕರ, ಪ್ರಚಾರಕ್ಕೋಸ್ಕರ ದೀಪ ಕೊಡುತ್ತೇವೆ, ಇದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ ಎನ್ನುವುದು ಸರಿ ಯಲ್ಲ. ಈಗ ಹಳ್ಳಿಗಾಡಿನಲ್ಲಿ ದೀಪಗಳನ್ನು ಕೊಡುವುದಕ್ಕೋಸ್ಕರವಾಗಿ ಈ ಒಂದು ಕಾರ್ಯಕ್ರಮ ವನ್ನು ಏನು ಹಾಕಿಕೊಂಡಿದ್ದಾರೆ, ಇದರಿಂದ ಎಷ್ಟು ಅನುಕೂಲವಾಗುತ್ತದೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಇವತ್ತು ನಿಜವಾದ ಭಾಗ್ಯಜ್ಯೋತಿ ಆಗಬೇಕು ಎಂದರೆ ಗೋಬರ್ ಗ್ಯಾಸ್ ಅನಿಲವನ್ನು ಬಳಸಿ ಕಾಡನ್ನು ಕಾಪಾಡುವುದರಿಂದ ಭಾಗ್ಯವೂ ಇದೆ, ಜ್ಯೋತಿಯೂ ಇದೆ, ಈ ಕಡೆ ಸರ್ಕಾರ ಯೋಚನೆ ಮಾಡಬೇಕು, ಕೇವಲ ಒಂದು ಬಲ್ಬ್ ಉರಿಸಿದರೆ ಭಾಗ್ಯ ಬರುವುದಿಲ್ಲ.

ಇನ್ನು ನೀರಾವರಿ ವಿಚಾರದಲ್ಲಿ ಹೇಳಬೇಕು ಎಂದರೆ, ನಾಲಾ ನೀರಾವರಿ ಇರುವ ಕಡೆ ಇವತ್ತು ನಮ್ಮ ದೇಶದಲ್ಲಿ ಶೇಕಡ ೨೫ರ ಜಮೀನಿಗೆ ಪ್ರಯೋಜನವಾಗುತ್ತದೆ ಅಂದರೆ ಹೆಚ್ಚು. ಅದು ಬಹಳ ಪ್ರಯಾಸದ ಕೆಲಸ. ಎಲ್ಲೆಲ್ಲಿ ದೊಡ್ಡ ಜಲಾಶಯಗಳಿವೆ, ಎಲ್ಲೆಲ್ಲಿ ನದಿಗಳು ಹರಿಯುತ್ತವೆ. ಅವುಗಳ ಅಚ್ಚುಕಟ್ಟಿನಲ್ಲಿರುವ ಜನರಿಗೆ ಅನುಕೂಲವಾಗುತ್ತದೆ. ವಿಶ್ವೇಶ್ವರಯ್ಯ ಕಾಲುವೆಯಿಂದ ಮಂಡ್ಯ ಜಿಲ್ಲೆಗೆ ಅನುಕೂಲವಾಗುತ್ತದೆ, ಈಗ ವರುಣಾ ನಾಲೆಯಿಂದ ಮೈಸೂರು ಜಿಲ್ಲೆಗೆ ಅನುಕೂಲವಾಗುತ್ತದೆ. ಅದೇ ರೀತಿ ತುಂಗಭದ್ರ, ಕೃಷ್ಣ ಇವೆಲ್ಲಾ ಇವೆ. ಇದು ಯಾವುದೇ ಅನುಕೂಲ ಇಲ್ಲದೇ ಇರುವಂಥ ಪ್ರದೇಶಗಳು ಅಂದರೆ, ಕೋಲಾರ, ತುಮಕೂರು ಜಿಲ್ಲೆ ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳೇ ಏನಿವೆ, ಜಲಾಶಯದ ಮುಖಾಂತರ, ನಾಲಾ ಮುಖಾಂತರ ನಾವು ನೀರಾವರಿ ಮಾಡುವುದಕ್ಕೆ ಆಗದೇ ಇದ್ದಾಗ ಅಂತಹ ಪ್ರದೇಶಗಳಲ್ಲಿ ಸಾಮುದಾಯಿಕ ಭಾವಿಗಳನ್ನು ನಾವು ತೋಡಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಇದುವರೆಗೆ ಇದನ್ನು ಕಾರ್ಯರೂಪಕ್ಕೆ ತಂದಿರುವುದು ಕಾಣುವುದಿಲ್ಲ. ಜಲಾಶಯಗಳ ಅನುಕೂಲ ಇಲ್ಲದೇ ಇರುವಂಥ ಪ್ರದೇಶಗಳಲ್ಲಿ ಕೊಳವೆ ಭಾವಿಗಳನ್ನಾಗಲೀ, ಓಪನ್ ವೆಲ್ಸ್‌ನ್ನಾಗಲಿ ಸಾಮುದಾಯಿಕವಾಗಿ ತೆಗೆಯತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಸಾಮುದಾಯಿಕವಾದ ರೀತಿಯಲ್ಲಿ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅದು ಹೆಚ್ಚು ಫಲ ಕೊಡುತ್ತದೆ. ಆ ಕಡೆ ಸರ್ಕಾರದವರು ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಈಗಾಗಲೇ ೪ ರೆವಿನ್ಯೂ ಡಿವಿಜನ್‌ಗಳಲ್ಲಿ ಕೂಡ ೪ ಕಾರ್ಪೊರೇಷನ್‌ಗಳನ್ನು ಮಾಡಬೇಕು ಎಂದು ಇದ್ದು, ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ ಆ ರೀತಿ ಕೊಳವೆ ಬಾವಿಗಳನ್ನು ಮಾಡಿ ಸರ್ಕಾರವೇ ನೀರಿನ ಅನುಕೂಲತೆ ಇಲ್ಲದೇ ಇರತಕ್ಕ ಪ್ರದೇಶಗಳಲ್ಲಿ, ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶಗಳಲ್ಲಿ ನೀರನ್ನು ಒದಗಿಸತಕ್ಕದ್ದು, ಬೆಟರ್ ಮೆಂಟ್ ಲೆವಿ ವಸೂಲುಮಾಡುವ ಹಾಗೆ ಇದಕ್ಕೂ ವಸೂಲು ಮಾಡತಕ್ಕಂಥಾದ್ದು, ತನ್ಮೂಲಕ. ರೈತ ಐ.ಪಿ. ಸೆಟ್ ತೆಗೆದುಕೊಳ್ಳುವುದಕ್ಕೆ ಪಿ.ಎಲ್.ಡಿ. ಬ್ಯಾಂಕ್ ಮುಖಾಂತರ ಸಾಲ ತೆಗೆದುಕೊಂಡು ಸಾಲಗಾರನಾಗುವುದನ್ನು ತಪ್ಪಿಸಬೇಕು ಎಂದು ಸರ್ಕಾರ ವಿಚಾರಮಾಡುತ್ತಿದೆ. ಅಷ್ಟೇ ಅಲ್ಲ ಇದು ಆದಷ್ಟು ಶೀಘ್ರವಾಗಿ ಅಂದರೆ ೨-೩ ತಿಂಗಳಲ್ಲಿ ಕಾರ್ಯಗತವಾಗುವಷ್ಟು ತೀವ್ರ ಪರಿಸ್ಥಿತಿಯಲ್ಲಿದೆ. ಮಾನ್ಯ ಸದಸ್ಯರ ತೀವ್ರತೆಯನ್ನು ಈಗಾಗಲೇ ಸರ್ಕಾರ ಅರಿತಿದೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕಮ್ಯೂನಿಟಿ ಇರಿಗೇಷನ್ ವೆಲ್, ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಕಾರ್ಯಗತ ಮಾಡುವುದಾದರೆ ಹೆಚ್ಚು ಹಣವನ್ನು ತುಂಬುತ್ತೇವೆ ಎಂದು ಕೇಂದ್ರ ಸರ್ಕಾರದವರು ಈಗಾಗಲೇ ಹೇಳಿದ್ದಾರೆ, ನೀವು ಕಾರ್ಪೊರೇಷನ್‌ಗಳನ್ನು ಮಾಡುವುದಕ್ಕೆ ೩ ತಿಂಗಳು ಬೇಕಾಗಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಇದಕ್ಕೆ ಕೆಲವು ತೊಂದರೆಗಳಿವೆ, ಇದನ್ನು ಹೇಗೆ ಮಾಡಬೇಕು ಎನ್ನುವುದು ಇದೆ. ಕೇಂದ್ರ ಸರ್ಕಾರದಿಂದ ಸಬ್ಸಿಡಿ ಬರತಕ್ಕ ಬಗ್ಗೆ ಸರ್ಕಾರ ವಿಚಾರಮಾಡಿದೆ, ಮಾಡಿಲ್ಲ ಎಂದು ಅಲ್ಲ, ಅದರ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸರ್ಕಾರ ಈಗಾಗಲೇ ವಿಚಾರ ಮಾಡಿದೆ. ಅದನ್ನು ಒಂದು ವರ್ಷದಿಂದ ಯೋಚನೆ ಮಾಡುತ್ತಿದೆ. ಬಾವಿ ಹೇಗೆ ತೆಗೆಯಬೇಕು ಇದೆಲ್ಲಾ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ದೇವೇಗೌಡರಿಗೆ ಗೊತ್ತಿದೆ, ಹಿಂದೆ ಕಮ್ಯೂನಿಟಿ ವೆಲ್ಸನ್ನು ತೆಗೆದಾಗ ಒಬ್ಬನೇ ಅದನ್ನು ಬಳಸಿಕೊಂಡದ್ದು ಕೂಡ ಉಂಟು. ಅದು ಆಗದೇ ಇರತಕ್ಕ ರೀತಿಯಲ್ಲಿ ಕಾಂಟೂರ್ ಯಾವುಯಾವುದೊ ಜಿಯಾಲಜಿಕಲ್ ಸರ್ವೆ ಈಗಾಗಲೇ ಆಗಿದೆ, ಬಾವಿ ತೆಗೆಯುವುದಕ್ಕೆ ಸಾಧ್ಯ, ಓಪನ್ ವೆಲ್ಸ್ ತೆಗೆಯುವುದಕ್ಕೆ ಸಾಧ್ಯ, ಎಷ್ಟು ಪ್ರದೇಶ ನೀರಾವರಿಗೆ ಬರುತ್ತದೆ ಎನ್ನತಕ್ಕ ಅಂಕಿಅಂಶಗಳನ್ನು ಸರ್ಕಾರ ಸಂಗ್ರಹಣೆಮಾಡಿದೆ, ಕೇವಲ ಒಂದೆರಡು ತಿಂಗಳಲ್ಲಿ ಆ ಕಾರ್ಯ ಪ್ರಾರಂಭವಾಗುತ್ತದೆ. ಮತ್ತೆ ಕೇಂದ್ರ ಸರ್ಕಾರ ಕೊಡತಕ್ಕ ನೆರವನ್ನು ನಾವು ಉಪಯೋಗ ಮಾಡಿಕೊಳ್ಳಬೇಕು ಎಂದು ಇದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ. ೧೯೭೨ ರಲ್ಲಿ ನ್ಯಾಷನಲ್ ಹೈವೇ, ರೂರಲ್ ವಾಟರ್ ಸಪ್ಲೈ ಸ್ಕೀಮಿಗೆ ಕೇಂದ್ರದ ನೆರವನ್ನು ಉಪಯೋಗ ಮಾಡಿಕೊಳ್ಳದೇ ಇದ್ದುದರಿಂದ ತೊಂದರೆಗೆ ಈಡಾಗಿದ್ದೇವೆ. ಆದುದರಿಂದ ಈಗ ಕೇಂದ್ರ ಸರ್ಕಾರ ಕೊಡತಕ್ಕ ನೆರವನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮ ಸರ್ಕಾರ ತೆಗೆದುಕೊಳ್ಳತಕ್ಕಂಥಾಗಿದೆ.

ಇದು ಒಂದು ಸಂತೋಷ ವಿಚಾರ. ಬರುವ ವರ್ಷದಷ್ಟು ಹೊತ್ತಿಗೆ ರಾಜ್ಯದಲ್ಲಿ ಎಷ್ಟು ಪ್ರಗತಿಯನ್ನು ಕಾಣುತ್ತೇವೆಯೋ ನೋಡೋಣ. ಇನ್ನು ನಮ್ಮ ಬೆಂಗಳೂರು ನಗರಕ್ಕೆ ಕಾವೇರಿ ಎರಡನೇ ಹಂತದ ಕಾಮಗಾರಿಯನ್ನು ಈ ವರ್ಷ ಪ್ರಾರಂಭ ಮಾಡುತ್ತೇವೆಂಬುದಾಗಿ ಹೇಳಿದ್ದೀರಿ. ಅದಕ್ಕೆ ಸುಮಾರು ೫೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಯೋಜನೆ ಕೂಡ ಪ್ರಾರಂಭ ಮಾಡಲಾಗಿದೆ. ಆದನ್ನು ತೀವ್ರವಾಗಿ ಅಂದರೂ ಈ ವರ್ಷವೇ ತಾವು ಪ್ರಾರಂಭ ಮಾಡಿದರೂ ಕೂಡ ಸುಮಾರು ೩–೪ ವರ್ಷಗಳಾದರೂ ಬೇಕೇ ಬೇಕಾಗುತ್ತದೆ. ಮೊದಲನೆಯ ಹಂತದ ಯೋಜನೆಯಿಂದ ನಮ್ಮ ಈಗಿನ ನಗರ ಪ್ರದೇಶಕ್ಕೆ ಬರುವ ನೀರು ಸಾಕಾಗುವುದಿಲ್ಲವೆಂದು ತಿಳಿದಿದ್ದರೂ ಕೂಡ ಕಾರ್ಪೊರೇಷನ್ನಿನವರು ೧೧೦ ಹಳ್ಳಿಗಳನ್ನು ಇವತ್ತು ಹೊಸದಾಗಿ ಸೇರಿಸಿಕೊಂಡಿದ್ದಾರೆ. ೧೯೬೫ ನೇ ಇಸ್ವಿಯಲ್ಲಿಯೇ ಸೇರಿಸಿಕೊಂಡಿದ್ದಂಥ ೩೪ ಹಳ್ಳಿಗಳಿಗೇ ಇನ್ನು ಇವತ್ತಿಗೂ ನೀರನ್ನು ಕೊಡುವ ವ್ಯವಸ್ಥೆ ಸಮರ್ಪಕವಾಗಿಲ್ಲ. ಅಂಥಾದರಲ್ಲಿ ಇವತ್ತು ಆ ಪ್ರದೇಶದಲ್ಲಿ ಹಳ್ಳಿಗಲ್ಲಿರುವ ಹಾಗೆ ಕೊಳವೆ ಭಾವಿಗಳನ್ನು. ಭಾವಿಗಳನ್ನೋ ತೋಡಿಕೊಂಡು ನೀರನ್ನು ಸೇದಿಕೊಂಡು ಉಪಯೋಗ ಮಾಡುತ್ತಿದ್ದಾರೆಯೋ ಹೊರತು ಅವರುಗಳಿಗೂ ಇನ್ನೂ ಪ್ರೊಟೆಕ್ಟೆಡ್ ವಾಟರ್ ಸಪ್ಲೈ ಆಗಿಲ್ಲ. ೧೯೬೫ನೇ ಇಸ್ವಿಯಲ್ಲಿಯೇ ಸೇರಿದಂಥ ಹಳ್ಳಿಗಳೇನಿವೆ ಅವುಗಳಿಗೇ ಸರಿಯಾದ ನೀರಿನ ವ್ಯವಸ್ಥೆ ಇಲ್ಲದಾಗ ಅಂಥಾದ್ದರಲ್ಲಿ ಈಗ ಹೊಸದಾಗಿ ೧೧೦ ಹಳ್ಳಿಗಳನ್ನು ಏನು ಸೇರಿಸಿಕೊಂಡಿದ್ದಾರೆ, ಅವರುಗಳೆಲ್ಲಾ ಒಂದು ಆಶೆ ಇಟ್ಟುಕೊಂಡಿದ್ದಾರೆ ಕಾವೇರಿ ನೀರು ನಮಗೆ ಬರುತ್ತದೆ. ನಾವು ಭಾವಿಗಳಲ್ಲಿ ೧೧೦, ೧೫೦ ಅಡಿಗಳಿಂದ ನೀರನ್ನು ಎತ್ತಬೇಕಾಗಿಲ್ಲ, ನಲ್ಲಿ ತಿರುಗಿಸಿದರೆ ಸಾಕು ನೀರು ಬಂದು ಬಿಡುತ್ತದೆ ಎನ್ನುವ ಆಶೆಯನ್ನು ಅವರುಗಳು ಇಟ್ಟುಕೊಂಡಿದ್ದಾರೆ. ಆದರೆ ಇನ್ನು ೩–೪ ವರ್ಷಗಳಾದರೂ ಕೂಡ ಈಗಿನ ಯೋಜನೆಯಂತೆ ಒದಗಿಸಲು ಆಗುವುದಿಲ್ಲವಾದುದರಿಂದ ಇದರ ಬಗ್ಗೆ ಇನ್ನು ತ್ವರಿತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಕಾವೇರಿ ಎರಡನೆಯ ಹಂತದ ಕಾರ್ಯಕ್ರಮವನ್ನು ನೀವು ಎತ್ತಿಕೊಂಡು ಮಾಡದಿದ್ದರೆ ಈ ೧೧೦ ಹಳ್ಳಿಗಳಿಗೆ ಇನ್ನು ೧೦, ೨೦ ವರ್ಷಗಳಾದರೂ ನೀರು ಸಪ್ಲೈ ಮಾಡಲು ಆಗುವುದಿಲ್ಲ.

ಇವತ್ತು ಹೇಗೋ ಆ ೧೧೦ಹಳ್ಳಿಗಳನ್ನು ಸೇರಿಸಿಕೊಂಡಿದ್ದು ಆಗಿದೆ ಈಗಿನ ಬೆಂಗಳೂರು ಪಟ್ಟಣಕ್ಕೂ ಮತ್ತು ಈಗ ಸೇರಿಸಿ ಕೊಂಡಿರತಕ್ಕ ಹಳ್ಳಿಗಳ ಮಧ್ಯೆ ವ್ಯವಸಾಯದ ಜಮಿನುಗಳು ಇವೆ. ಇವತ್ತು ಅಲ್ಲಿ ಉತ್ಪತ್ತಿ ಕೂಡ ನಿಂತು ಹೋಗಿದೆ. ಅವುಗಳನ್ನು ರೆವಿನ್ಯೂ ಸೈಟ್‌ಗಳನ್ನಾಗಿ ಮಾರ್ಪಾಡು ಮಾಡಿ ಸಣ್ಣ ಸಣ್ಣ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿ ಬಿಡುತ್ತಾರೆ. ಅದಕ್ಕೆ ಆದನ್ನು ಬಿ.ಡಿ.ಎ. ನವರು ಈ ಕೂಡಲೇ ಕ್ರಮ ತೆಗೆದುಕೊಂಡರೆ ಸರಿಹೋಯಿತು ಇಲ್ಲದೇ ಹೋದರೆ ಅಲ್ಲೆಲ್ಲಾ ತಮ್ಮ ಇಷ್ಟ ಬಂದ ರೀತಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಯಥಾ ಪ್ರಕಾರ ಈಗ ಬೆಂಗಳೂರು ನಗರದಲ್ಲಿ ಏನು ಕೊಳಚೆ ಪ್ರದೇಶಗಳೇ ನಾಗಿವೆಅವು ಖಾಲಿ ಪ್ರದೇಶದಲ್ಲೆಲ್ಲಾ ಬರುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಸರ್ಕಾರದವರು ಎಚ್ಚರ ವಹಿಸಿ ತಡೆಗಟ್ಟಬೇಕು. ಈ ಕಾವೇರಿ ಎರಡನೆಯ ಹಂತದ ಕಾರ್ಯಕ್ರಮವನ್ನು ತ್ವರಿತವಾಗಿ ತೆಗೆದು ಕೊಂಡು ಬೆಂಗಳೂರು ನಾಗರೀಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಈಗ ಏನು ಹೊಸದಾಗಿ ೧೧೦ ಹಳ್ಳಿಗಳನ್ನು ಸೇರಿಸಿಕೊಂಡಿದ್ದೀರಿ ಅವುಗಳಿಗೆ ಕೊಳವೆ ಭಾವಿಗಳ ಮುಖಾಂತರವೋ ಇಲ್ಲ ಓಪನ್ ವೆಲ್ ಮುಖಾಂತರವೋ ಶುದ್ಧವಾದ ನೀರು ಸರಬರಾಜು ಮಾಡಬೇಕು. ಇನ್ನು ಎರಡನೆಯದಾಗಿ ಈಗಾಗಲೇ ಬೆಂಗಳೂರು ನಗರದಲ್ಲಿ ನೀರಿನ ಕ್ಷಾಮ ಪ್ರಾರಂಭವಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ಅನೇಕ ಹಳೇ ಕಾಲದ ಕೆರೆಗಳು ಇವೆ. ಆ ಕೆರೆಗಿಂತ ಕೆಳಮಟ್ಟದಲ್ಲಿರುವ ಪ್ರದೇಶಗಳಲ್ಲಿ ಭಾವಿ ತೋಡಿದರೆ ಒಳ್ಳೆಯ ನೀರು ಸಿಗುತ್ತದೆ ಅದಕ್ಕೆ ಇವತ್ತು ಕಾರ್ಪೊರೇಷನ್ನಿನವರ ವತಿಯಿಂದಲೋ ಅಥವಾ ಬಿ.ಡಿ.ಎ. ನವರ ವತಿಯಿಂದಲೋ ಆ ಪ್ರದೇಶಗಳಲ್ಲಿ ಭಾವಿಗಳನ್ನು ತೋಡಿಸಬೇಕು. ಆ ನೀರು ಕುಡಿಯಲು ಯೊಗ್ಯವಾಗಿಲ್ಲದಿದ್ದರೂ ಮನೆಗಳನ್ನು ಕಟ್ಟುವುದಕ್ಕಾದರೂ ಉಪಯೋಗವಾಗುವ ಹಾಗೆ ವ್ಯವಸ್ಥೆ ಮಾಡುವುದು ಉತ್ತಮ. ಏಕೆಂದರೆ ಇವತ್ತು ಕಾವೇರಿ ನೀರನ್ನು ಮನೆಗಳನ್ನು ಕಟ್ಟಿಸುವುದಕ್ಕೆ ಉಪಯೋಗಿಸುತ್ತಿದ್ದಾರೆ, ಮನೆಗಳನ್ನು ಕಟ್ಟಿಸುವುದೇ ನಿಲ್ಲಿಸಬೇಕೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಯಾವ ಯಾವ ಪ್ರದೇಶಗಳಲ್ಲಿ, ಯಾವ ಯಾವ ಸ್ಥಳಗಳಲ್ಲಿ ನೀರು ಸಿಗುವುದಕ್ಕೆ ಅವಕಾಶವಿದೆ ಅಲ್ಲೆಲ್ಲ ಕೊಳವೆ ಭಾವಿಗಳನ್ನೋ ಅಥವಾ ಓಪನ್ ವೆಲ್ ತೆಗೆಸಿ ಅಲ್ಲಿಯವರೆಗೆ ಅನುಕೂಲ ಮಾಡಿಕೊಡಿ ಎಂದು ಕೇಳಿ ಕೊಳ್ಳುತ್ತೇನೆ.

ಇನ್ನು ಈ ವರ್ಷ ಅಂತರರಾಷ್ಟ್ರೀಯ ಮಕ್ಕಳ ವರ್ಷ ಅಂತ ಹೆಸರಾಗಿದೆ. ಬೆಂಗಳೂರು ನಗರದಲ್ಲಿ ಅನೇಕ ರಿಸರ್ಚ್ ಇನ್ಸ್‌ಸ್ಟಿಟೂಟ್‌ಗಳಿವೆ. ಮೆಂಟಲ್ ರಿಸರ್ಚ್ ಇನ್ಸ್‌ಸ್ಟಿಟ್ಯೂಟ್, ಕ್ಯಾನ್ಸರ್ ರೀಸರ್ಚ್

ಇನ್ಸ್ಟಿಟ್ಯೂಟ್ ಅದೇ ರೀತಿ ನ್ಯಾಶನಲ್ ಏರೋ ನ್ಯಾಟಿಕಲ್ ಇನ್ಸ್ಟಿಟ್ಯೂಟ್ ಇರುವ ಹಾಗೆ ಮಕ್ಕಳ ಖಾಯಿಲೆಗೆ ಸಂಬಂಧಪಟ್ಟ ಒಂದು ರೀಸರ್ಚ್ ಇನ್ಸ್ಟಿಟ್ಯೂನ್ನು ಪ್ರಾರಂಭ ಮಾಡುವ ಬಗ್ಗೆ ಮೊನ್ನೆ ಕೇಂದ್ರ ಸರ್ಕಾರದ ಮಂತ್ರಿಗಳವರು ಬಂದಾಗ್ಗೆ ಕೂಡ ಪ್ರಸ್ತಾಪ ಮಾಡಿ ತಿಳಿಸಲಾಗಿದೆ. ಇದರ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ಹಾಕಿ ಮಕ್ಕಳ ಖಾಯಿಲೆ ರಿಸರ್ಚ್ ಇನ್ಸ್ಟಿಟ್ಯೂಟ್ ಪ್ರಾರಂಭವಾಗುವ ಹಾಗೆ ಮಾಡಬೇಕಾಗಿದೆ. ಮತ್ತು ನಮ್ಮ ಪಕ್ಷದ ಅಧ್ಯಕ್ಷರು ಮತ್ತು ವಿರೋಧ ಪಕ್ಷದ ನಾಯಕರು ಕೂಡ ಈ ವಿಷಯದ ಬಗ್ಗೆ ಕೇಂದ್ರದವರಲ್ಲಿ ಒತ್ತಾಯ ತರುತ್ತಾರೆಂಬ ವಿಶ್ವಾಸವಿದೆ.

ಮಾನ್ಯ ಆರ್ಥಿಕ ಮಂತ್ರಿಗಳವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳುತ್ತಾ ಒಂದು ಮಾತನ್ನು ಹೇಳಿದ್ದಾರೆ, ೧೯೭೮-೭೯ ರ ಸಾಲಿನಲ್ಲಿ ಈ ರಾಜ್ಯದಲ್ಲಿ ಯಾವುದೇ ಒಂದು ರೀತಿಯಾದ ಅನಾಹುತ, ಲಾ ಅಂಡ್ ಆರ್ಡರ್ ಕೆಟ್ಟಿರಲಿಲ್ಲ ಸರಿಯಾಗಿತ್ತು, ತೃಪ್ತಿಕರವಾಗಿತ್ತು ಅಂತ ಹೇಳಿದ್ದಾರೆ. ಆದರೆ ತಮಗೆಲ್ಲಾ ಗೊತ್ತಿದೇ ಈ ಸದನದಲ್ಲಿ ಕೂಡ ಈ ವಿಚಾರದ ಬಗ್ಗೆ ಹೋರಾಟವಾಗಿ ನಮ್ಮನ್ನು ಇಲ್ಲಿಂದ ಹೊರಕ್ಕೆ ಹಾಕಿಸಿ ಒಂದು ದಿವಸ ಜೈಲಿಗೆ ನಾವು ಹೋಗಿ ಬರಬೇಕದಂಥ ಪ್ರಮೇಯ ಬಂದಿತ್ತು. ಡಿಸೆಂಬರ್ ೧೯, ೨೦, ೨೧, ೧೯೭೮ ರಂದು ರಾಜ್ಯದಲ್ಲಿ ನಡೆದಂಥ ಘಟನೆಗಳ ಬಗ್ಗೆ ನಮ್ಮ ಆಯವ್ಯಯ ಪತ್ರದಲ್ಲಿ ಆ ವಿಷಯದ ಬಗ್ಗೆ ಸರಿಯಾದ ರೂಪದಲ್ಲಿ ಬರಲೇ ಇಲ್ಲ ಸರ್ಕಾರ ಕೂಡ ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದೆ ಮಾನ್ಯ ಮುಖ್ಯ ಮಂತ್ರಿಗಳವರು ಕೂಡ ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸುತ್ತೇವೆಂಬುದಾಗಿ ಒಪ್ಪಿ ಕೊಂಡಿದ್ದಾರೆ. ಆ ವಿಚಾರದ ಬಗ್ಗೆಯಾದರೂ ಭಾಷಣದಲ್ಲಿ ಬರಬಹುದಾಗಿತ್ತು. ಆದರೆ ಆ ವಿಷಯ ವನ್ನು ಸಹ ತಿಳಿಸಿಲ್ಲ. ಆದುದರಿಂದ ಲಾ ಅಂಡ್ ಆರ್ಡರ್ ಸಮರ್ಪಕವಾಗಿತ್ತು ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಬಯಸುತ್ತೇನೆ. ಇನ್ನು ಕೊನೆಯದಾಗಿ ನಮ್ಮ ಸರ್ಕಾರದ ಆಡಳಿತ ಯಂತ್ರದ ಬಗ್ಗೆ ಒಂದು ಮಾತನ್ನು ಹೇಳುವುದಾದರೆ. ಒಂದೇ ಒಂದು ಸೂಕ್ಷ್ಮವಾದ ವಿಚಾರ ಹೇಳುತ್ತೇನೆ ಅದು ಎಲ್ಲಾ ಪತ್ರಿಕೆಗಳಲ್ಲಾ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳವರ ಕ್ಷೇತ್ರವಾದ ಹುಣಸೂರಿನಲ್ಲಿ ಒಬ್ಬ ತಹಶೀಲ್ದಾರ್ ರವರೇ ೪ ಹುದ್ದೆಗಳ ಕೆಲಸ ಮಾಡುತ್ತಿದ್ದಾರೇ ಅದಕ್ಕೆ ಏನು ಕಾರಣವೋ ಗೊತ್ತಾಗಲಿಲ್ಲ. ಅವರೇ ಮುನಿಸಿಪಲ್ ಅಡ್ಮಿನಿಸ್ಟ್ರೇಟರ್, ಅವರೇ ಬಿ.ಡಿ.ಒ, ಅವರೇ ಅಸಿಸ್ಟೆಂಟ್ ಕಮಿಷನರ್ ಆ ಮೇಲೆ ಅವರೇ ತಹಶೀಲ್ದಾರ್ ಹೀಗೆ ಅವರೇ ೪ ಹುದ್ದೆಗಳನ್ನು ಬ್ಬ ಅಧಿಕಾರಿಯೇ ನೋಡಿಕೊಳ್ಳುತ್ತಿದ್ದಾರೆ. ಹೀಗಾದರೆ ಇನ್ನು ಅವರು ಎಷ್ಟರಮಟ್ಟಿಗೆ ಕೆಲಸಕಾರ್ಯಗಳನ್ನು ನೋಡಿಕೊಂಡಾರು ಎಂಬುದು ಗೊತ್ತಾಗುತ್ತದೆ.

ಇದು ಮುಖ್ಯಮಂತ್ರಿಗಳವರ ಕ್ಷೇತ್ರದಲ್ಲಿಯೇ ಇಷ್ಟೊಂದು ಅವ್ಯವಸ್ಥೆ ಇದ್ದರೆ ಬೇರೆ ಕಡೆಯಲ್ಲಿ ಇನ್ನು ಹೇಗೆ ನಡೆಯುತ್ತಿರಬಹುದು ಎಂಬುದನ್ನು ನಾವು ಯೋಚಿಸಬೇಕಾಗಿದೆ. ಇದರ ಬಗ್ಗೆ ಶ್ರೀಲಕ್ಷ್ಮಣ ರವರು ಮತ್ತು ಶ್ರೀ ದೇವೇಗೌಡರವರು ಹೇಳಿದರು ಮುಖ್ಯಮಂತ್ರಿಗಳವರ ಕ್ಷೇತ್ರದಲ್ಲಿಯೇ ಇಂಥಾ ಒಂದು ಅವ್ಯವಸ್ಥೆ, ಅಧಕ್ಷತೆ ಇದ್ದಾಗ ಇನ್ನು ಬೇರೆ ಕಡೆಯಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ? ಎಂದು ಹೇಳುವ ಹಾಗೇ ಇಲ್ಲ. ಈ ವಿಚಾರದಲ್ಲಿ ನಮ್ಮ ನಗರಕ್ಕೆ ಸಂಬಂಧಪಟ್ಟಂತೆ ಅದರಲ್ಲೂ ರಾಜ ಕೀಯವಾದ ಒಂದು ವಿಚಾರಹೇಳಬೇಕಾಗಿ ಬರುತ್ತದೆ ಅದನ್ನು ಮುಂದೆ ನಮ್ಮ ಅಧ್ಯಕ್ಷರೋ ಅಥವಾ ವಿರೋಧ ಪಕ್ಷದ ನಾಯಕರೋ ಮುಂದುವರಿಸಿಕೊಂಡು ಹೋಗುತ್ತಾರೆಂದು ನಂಬಿಕೊಂಡಿದ್ದೇನೆ. ಅಧ್ಯಕ್ಷರೇ ನಮ್ಮ ಜನತಾ ಪಕ್ಷದ ಒಂದು ಕಛೇರಿ ಬೆಂಗಳೂರು ನಗರದಲ್ಲಿದೆ. ೧೯೪೯ ರಿಂದಲೂ ಅಲ್ಲಿ ಹಿಂದಿನ ಕಾಂಗ್ರೆಸ್ ಸಂಸ್ಥೆಯ ಆಶ್ರಯದಲ್ಲಿ ನಡೆದುಕೊಂಡು ಬರುತ್ತಿದೆ. ಅದು ದಾನದ ರೂಪದಲ್ಲಿ ಬಂದದ್ದು. ನಮ್ಮ ಕಛೇರಿಯ ಹಿಂದುಗಡೆಗೆ ಒಂದು ಖಾಲಿ ಜಾಗ ಇದೆ ಆ ಸ್ಥಳ ರೇಸ್ ಕೋರ್ಸ್ ರೋಡ್ ಪಕ್ಕದಲ್ಲಿಯೇ ಇರುವುದರಿಂದ ತಾವು ಅದನ್ನು ನೋಡಬಹುದು. ಅದು ೩೦ ವರ್ಷಗಳಿಂದಲೂ ಕೂಡ ಖಾಲಿಯಾಗಿದೆ ಮತ್ತು ಕಾರ್ಪೊರೇಷನ್ನಿಗೆ ನಾವು ವರ್ಷೇ ವರ್ಷೇ ಅದಕ್ಕೆ ಟ್ಯಾಕ್ಸನ್ನು ಕೂಡ ಕಟ್ಟಿ ಕೊಂಡು ಬರುತ್ತಿದ್ದೇವೆ. ಮತ್ತು ಅದಕ್ಕೆ ಒಂದು ಅನೆಕ್ಸರ್ ಬಿಲ್ಡಿಂಗ್ ಕಟ್ಟಲು ಪ್ಲಾನ್ ಕೂಡ ಎಲ್ಲಾ ತಯಾರಾಗಿದೆ.

ಎಲ್ಲಾ ದಾಖಲೆ ಪತ್ರಗಳು ಇವೆ. ಆದರೂ ಕೂಡ ಯಾವ ಕಾರಣದಿಂದಲೋ ಏನೋ ಮೊನ್ನೆ ದಿವಸ ನಮ್ಮ ವಾಚ್‌ಮ್ಯಾನ್ ಅಲ್ಲಿದ್ದಾಗ ಒಂದು ನೋಟೀಸ್ ಬಂತು. ಆ ಜಾಗವನ್ನು ಕೂಡಲೇ ಖಾಲಿ ಮಾಡಬೇಕು, ಅದು ಬೇರೆಯವರಿಗೆ ಅಲಾಟ್ ಆಗಿದೆ, ಅದು ಕಾರ್ಪೊರೇಷನ್ ಲ್ಯಾಂಡ್ ಎಂದು

ಕಾರ್ಪೊರೇಷನ್‌ನಿಂದ ಬಂದ ಆ ನೋಟೀಸ್‌ನಲ್ಲಿ ನಮೂದಾಗಿತ್ತು. ಆ ವಿಚಾರ ಎಷ್ಟು ಗಹನವಾಗಿದೆ ಎಂದರೆ, ಕಾರ್ಪೊರೇಷನ್ನಿಗೆ ಹೋಗಿ ಕಮೀಷನರನ್ನು ಭೇಟಿಯಾಗಿ ಕೇಳಿದಕ್ಕೆ ನಮ್ಮ ರೆಕಾರ್ಡ್‌ನಲ್ಲಿ ಆ ರೀತಿ ಇದೆ, ನಾವು ಏನು ಮಾಡುವುದಕ್ಕಾಗುತ್ತದೆಂದು ಉತ್ತರಿಸಿದರು. ಹಾಗಾದರೆ ಯಾರ್‍ಯಾರ ಆಸ್ತಿಗಳನ್ನಾದರೂ ಆ ರೀತಿ ಬರೆದು ಕೊಂಡಿದ್ದರೆ ಅವರಿಗೆಲ್ಲ ನೋಟೀಸ್ ಕೊಡಬಹುದು ದಾಖಲೆ ಇವೆ, ಅನುಭವ ಇದೆ, ಎಲ್ಲರ ಕಣ್ಣಿಗೆ ಕಾಣುವಂತಾದ್ದು, ಮೇಲಾಗಿ ಎಲ್ಲರಿಗೂ ಗೊತ್ತಿರುವ ವಿಷಯ : ಹೀಗಿದ್ದೂ ಕೂಡ, ಒಂದು ರಾಜಕೀಯ ಪಕ್ಷದ ಆಸ್ತಿಯನ್ನೇ ಸರ್ಕಾರದ ಕಡತದಲ್ಲಿ ಈ ರೀತಿಯಾದ ಅವ್ಯವಸ್ಥೆ ಮಾಡಿಟ್ಟಿದ್ದಾರೆಂದರೆ ಇನ್ನು ಬೇರೆಯವರ ಆಸ್ತಿಯ ಗತಿಯಾದರು ಏನು ? ಸರ್ಕಾರದ ಅನೇಕ ಜಮೀನುಗಳಿವೆ, ಖಾಸಗಿಯವರ ಜಮೀನುಗಳಿವೆ. ಈ ರೀತಿ ಸರ್ಕಾರದ ಜಮೀನು ಯಾವ್ಯಾವ ಖಾಸಗಿಯವರ ಹೆಸರಿನಲ್ಲಿದೆಯೋ, ಖಾಸಗಿಯವರ ಜಮೀನು ಸರ್ಕಾರದ ಹೆಸರಿನಲ್ಲಿದೆಯೋ ಗೊತ್ತಿಲ್ಲ. ಅಂಥ ಜಮೀನುಗಳಲ್ಲಿ ಮನೆ ಕಟ್ಟುವುದಕ್ಕೆ ಹೋದಾಗ ಇದು ನಿಮ್ಮದಲ್ಲ, ಕಾರ್ಪೊರೇಷನ್ನಿನದು, ಸರ್ಕಾರದ್ದು ಎಂದು ಹೇಳಬಹುದು. ಕಾರ್ಪೊರೇಷನ್ ಲ್ಯಾಂಡ್ ಇವತ್ತಿನ ದಿವಸ ಖಾಸಗಿಯವರ ವಶದಲ್ಲಿ ಇದೆ. ಈ ರೀತಿ ಕಾರ್ಪೊರೇಷನ್‌ನಲ್ಲಿ ರೆಕಾರ್ಡ್ ಮೆಯಿಂಟೇನ್ ಮಾಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಪೌರಾಡಳಿತ ಸಚಿವರು ಕೂಡಲೇ ತನಿಖೆ ಮಾಡಬೇಕಾಗಿ ಬರುತ್ತದೆ. ಒಂದು ರಾಜಕೀಯ ಪಕ್ಷದ ಆಸ್ತಿಯ ವಿಚಾರವೇ ಈ ರೀತಿ ಆಗಿರುವಾಗ ಸಾಮಾನ್ಯ ಪ್ರಜೆಗಳ ಆಸ್ತಿಪಾಸ್ತಿಗಳನ್ನು ಕಾರ್ಪೊರೇಷನ್ನಿನವರು ಯಾರ್‍ಯಾರಿಗೆ ಬರೆದುಕೊಟ್ಟಿದ್ದಾರೋ ಗೊತ್ತಿಲ್ಲ. ಇವತ್ತಿನ ಪರಿಸ್ಥಿತಿ ಈ ರೀತಿಯಾಗಿದೆ.

ಎರಡನೆಯದಾಗಿ, ಜಯನಗರದ ಏರಿಯಾದ ಎಡಿಯೂರಿನಲ್ಲಿ ೧೯೭೩ರಲ್ಲಿ ಕಾರ್ಪೊರೇಷನ್‌ನವರೇ ಒಂದು ರೆಸಲ್ಯೂಷನ್ ಮಾಡಿ ಒಂದು ಕಮ್ಯೂನಿಟಿ ಹಾಲ್‌ಗೆ ಮತ್ತು ಒಂದು ದೇವಸ್ಥಾನಕ್ಕೆಂದು ಸ್ವಲ್ಪ ಜಾಗವನು ರಿಸರ್ವ್ ಮಾಡಿದ್ದರು. ಈಗ ಆ ಪ್ರದೇಶದಲ್ಲಿ ಸುಮಾರು ೬೦ + ೮೦ ಅಡಿಯಷ್ಟು ಜಾಗವನ್ನು ಆಡಳಿತ ಪಕ್ಷದ ಒಬ್ಬ ಸರಿಯಾದ ನಾಯಕರ ಮಗನಿಗೆ ಅಲಾಟ್ ಮಾಡಲಾಗಿದೆಯೆಂದು ಕೇಳಿಬಂದಿದೆ ಆ ಬಗ್ಗೆ ದಾಖಲೆಗಳನ್ನು ತರಿಸಿ ತಮ್ಮ ಮುಂದೆ ಇಟ್ಟು ವಿಚಾರ ಮಾಡಬಯಸುತ್ತೇನೆ, ಈಗ ಸಂಬಂಧಪಟ್ಟ ಮಂತ್ರಿಗಳು ಬಂದಿದ್ದಾರೆ. ಎಡೆಯೂರು ಭಾಗದಲ್ಲಿ ಕೆರೆ ಎದುರಗಡೆ ಏನು ಕಮ್ಯೂನಿಟಿ ಹಾಲ್ ಮತ್ತು ದೇವಸ್ಥಾನ ಕೋಸ್ಕರವೆಂದು ೧೯೭೩ರಲ್ಲಿ ಕಾರ್ಪೊರೇಷನ್‌ನವರು ರೆಸಲ್ಯೂಷನ್ ಮಾಡಿ ಸ್ವಲ್ಪ ಜಾಗವನ್ನು ಮೀಸಲಾಗಿಟ್ಟಿದ್ದರು ಅದನ್ನು ಕಾರ್ಪೊರೇಷನ್ ಸೂಪರ್‌ಸೀಡ್ ಆದ ಮೇಲೆ ಒಬ್ಬ ಪ್ರತಿಷ್ಠಿತ ಆಡಳಿತ ಪಕ್ಷದ ವ್ಯಕ್ತಿಯ ಮಗನಿಗೆ ಕೊಡಲಾಗಿದೆ.

ಶ್ರೀ ಪಿ. ರಾಮದೇವ್— ಮಂತ್ರಿಯ ಮಗನಿಗೆ ಕೊಡಲಾಗಿದೆ ಎಂದು ಹೇಳಿ.

ಶ್ರೀ ಎಂ ಚಂದ್ರಶೇಖರ್—ಆ ರೀತಿ ಅಪಾದನೆ ಮಾಡುವುದಕ್ಕೆ ಇಚ್ಛೆಯಿಲ್ಲ. ಏಕೆಂದರೆ ಈಗ ದೂರು ಬಂದಿದೆ ; ಆದರೆ ನನ್ನ ಹತ್ತಿರ ಸಂಬಂಧಪಟ್ಟ ಎಲ್ಲ ದಾಖಲಾತಿಗಳು ಇಲ್ಲ. ದಾಖಲಾತಿಗಳು ಬಂದ ಮೇಲೆ ವಿವರವಾಗಿ ಪ್ರಸ್ತಾಪಿಸುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ—ಅದು ಯಾವ ವರ್ಷದಲ್ಲಿ ಆದದ್ದು ?

ಶ್ರೀ ಎಂ. ಚಂದ್ರಶೇಖರ್— ಕಾರ್ಪೊರೇಷನ್ ಸೂಪರಸೀಡ್. ಆದ ಮೇಲೆ ಅಂದರೆ ೧೯೭೩ ಕಳೆದ ಮೇಲೆ ಮೊನ್ನೆ ಯಥಾಪ್ರಕಾರ ರಸ್ತೆಯನ್ನು ಮಾಡಬೇಕೆಂದು ಹೋದಾಗ ಇಲ್ಲಿ ಸ್ಥಳ ಇಲ್ಲ, ಇದನ್ನು ಕಾರ್ಪೊರೇಷನ್‌ನವರು ಲೀಸ್ ಮೇಲೆ ಯಾರಿಗೋ ಅಲಾಟ್ ಮಾಡಿದ್ದಾರೆಂದು ತಿಳಿದ ಬಂತು. ಈ ರೀತಿ ಸರ್ಕಾರದ ಆಡಳಿತದಲ್ಲಿ ಏನು ಅವ್ಯವಹಾರ ನಡೆಯುತ್ತಿದೆ, ಇದನ್ನು ದಕ್ಷತೆ ಎನ್ನುತ್ತೀರಾ ? ಭ್ರಷ್ಟಾಚಾರದಿಂದ ಅದಕ್ಷತೆಯಿಂದ ಈ ರೀತಿ ಆಗುತ್ತಿದೆಯೆಂದು ಕಾಣುತ್ತದೆ. ಈ ಎಲ್ಲ ಪೂರ್ಣ ಜವಾಬ್ದಾರಿ ನಿಮ್ಮದಾಗಿರುತ್ತದೆ. ಆದ್ದರಿಂದ ಈ ಕಡೆ ಮಾನ್ಯ ಮಂತ್ರಿಗಳು ತೀವ್ರ ಗಮನ ಹರಿಸಬೇಕೆಂದು ಹೇಳುತ್ತೇನೆ. ನನ್ನ ಮಾತನ್ನು ಮುಗಿಸಲು ಸ್ವಲ್ಪ ವಿಳಂಬವಾದುದಕ್ಕೆ ಕ್ಷಮಿಸಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಜೂಗೌಡ(ಹಾಸನೂರು).— ಮಾನ್ಯ ಅಧ್ಯಕರೇ, ಮಾನ್ಯ ಅರ್ಥ ಸಚಿವರು ಈ ಸದನದ ಮುಂದೆ ಮಂಡಿಸಿರುವ ೧೯೭೯-೮೦ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸಮರ್ಥಿಸುತ್ತಾ, ಈ ದೇಶದ ಎಲ್ಲ ರಾಜ್ಯಗಳ ಆಯವ್ಯಯಗಳನ್ನು ತುಲನೆ ಮಾಡಿದಾಗ ಇದು ಒಂದು ಉತ್ತಮವಾದ ಆಯವ್ಯಯ ಎಂದು ಹೇಳುವುದಕ್ಕೆ ಅನೇಕ ಪ್ರಮುಖ ಅಂಶಗಳಿವೆ. ರಾಜ್ಯದ

ಪುರೋಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ಆಯವ್ಯಯವನ್ನು ತಯಾರಿಸಲಾಗಿದೆ. ಎಲ್ಲ ರಂಗದ ಎಲ್ಲ ವರ್ಗಗಳಿಗೂ ಸಮತೋಲನವಾಗಿರುತ್ತದೆ. ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಹೆಚ್ಚು ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಮೀಸಲಾಗಿಡಲಾಗಿದೆ. ದುರ್ಬಲ ವರ್ಗಗಳಿಗೆ ಕನಿಷ್ಠ ಮಟ್ಟದ ಜೀವನೋಪಾಯವನ್ನು ಒದಗಿಸಲು ಬಹಳ ಸಹಾಯಕವಾಗಿದೆ. ಶುದ್ಧ ಆರ್ಥಿಕ ದೃಷ್ಟಿಯಿಂದ ಈ ಮುಂಗಡ ಪತ್ರವನ್ನು ಪರಿಶೀಲಿಸಿದಾಗ ಬಹಳ ಪರಿಣಾಮಕಾರಿಯಾದ ರೀತಿಯಲ್ಲಿರುವುದು ಕಂಡು ಬರುತ್ತದೆ. ರಾಷ್ಟ್ರೀಯ ವರಮಾನದ ಶೇಕಡ ೧೮.೪ರಷ್ಟನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಗಳು ಈಗ ತೆರಿಗೆ ರೂಪದಲ್ಲಿ ಪಡೆದುಕೊಳ್ಳುತ್ತಿರುವುದರಿಂದ ಆ ಮಟ್ಟವನ್ನು ಮೀರಿ ತೆರಿಗೆ ಹಾಕದಿರುವುದರಿಂದ ಇದು ಉತ್ತಮವಾದ ಮುಂಗಡ ಪತ್ರವೆಂದು ಯಾರಾದರೂ ಹೇಳುವುದಕ್ಕೆ ಸಾಧ್ಯವಿದೆ. ೭ನೇ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ ನಮಗೆ ೧೦೦೬ ಕೋಟಿ ರೂಪಾಯಿ ಆರ್ಥಿಕ ಹಂಚಿಕೆ ದೊರೆಯುವುದು ಬಹಳ ಸಂತೋಷದಾಯಕವಾಗಿದೆ. ಮುಂದಿನ ವರ್ಷವಾದರೂ ರಾಜ್ಯ ಸರ್ಕಾರ, ಕಾರ್ಪೊರೇಷನ್ ತೆರಿಗೆ ಮತ್ತು ವರಮಾನ ತೆರಿಗೆ ಮೇಲಿನ ಸರಚಾರ್ಜನ್ನು ಕೈಬಿಡಲು ಕೇಂದ್ರ ಸರ್ಕಾರದ ಜೊತೆ ಶಕ್ತಿ ಮೀರಿ ಶ್ರಮಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈ ರಾಜ್ಯದ ಭೂ ಕಾಯಿದೆಯನ್ನು ಪೂರ್ಣ ಮಟ್ಟದಲ್ಲಿ ಜಾರಿಗೊಳಿಸ ದಿರುವುದರಿಂದ ರಾಜ್ಯದ ಮುಖ್ಯ ನ್ಯಾಯಾಲಯಕ್ಕೆ ಅಪೀಲು ಹೋಗಲು ಬಹಳ ತೊಡಕಾಗಿದೆ. ಇದನ್ನು ನಿವಾರಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಿ ಹೊಸ ಕಾಯಿದೆ ಯೊಂದನ್ನು ರೂಪಿಸಬೇಕಾಗಿದೆ. ಈಗ ರಾಜ್ಯ ಮುಖ್ಯ ನ್ಯಾಯಾಲಯದಲ್ಲಿ ೧೮ ಸಾವಿರ ಗೇಣಿಗೆ ಸಂಬಂಧಪಟ್ಟ ಮೊಕದ್ದಮೆಗಳು ಇರುವುದರಿಂದ ಅವುಗಳು ಪುನ: ಭೂನ್ಯಾಯ ಮಂಡಲಿಗಳ ಮುಂದೆ ಬರಬೇಕಾದರೆ ಇನ್ನೂ ಅನೇಕ ವರ್ಷಗಳು ಕಾಯಬೇಕಾಗುತ್ತದೆ. ಇದನ್ನು ತಡೆಗಟ್ಟತಕ್ಕ ಒಂದು ಶಾಸನವನ್ನು ಅತಿ ಜರೂರಾಗಿ ಮಾಡಬೇಕಾಗುತ್ತದೆ, ರಾಜ್ಯ ಸರ್ಕಾರವು ಇನ್ನೂ ಅನೇಕ ಕಡೆ ಜಹಗೀರ್ ಭೂಮಿಯನ್ನು ಅನೂರ್ಜಿತಗೊಳಿಸದೆ ಇರುವುದರಿಂದ ಮತ್ತು ಆ ಜಮೀನನ್ನೇ ಸಾವಿರಾರು ಕುಟುಂಬ ಗಳು ಕೃಷಿಗಾಗಿ ಅವಲಂಬಿಸಿರುವುದರಿಂದ ಅವರನ್ನು ತ್ವರಿತವಾಗಿ ಭೂ ಒಡೆಯರನ್ನಾಗಿ ಮಾಡುವ ಹೊಣೆಗಾರಿಕೆಯನ್ನು ಸರ್ಕಾರ ಮರೆಯಬಾರದೆಂದು ಹೇಳುತ್ತೇನೆ. ೪–೬ ವರ್ಷಗಳಿಂದ ಜಹಗೀರಿಗೆ ಸಂಬಂಧಪಟ್ಟ ಜಮೀನು ಇತ್ಯರ್ಥವಾಗದೆ ಇರುವುದರಿಂದ ಸಂಬಂಧಪಟ್ಟವರಿಗೆ ಬಹಳ ತೊಂದರೆ ಯಾಗಿದೆ. ಇನ್ನು ಕಂದಾಯ ಇಲಾಖೆಯ ಗ್ರಾಮಾಧಿಕಾರಿಗಳು ಆಯಾಯ ಗ್ರಾಮಗಳಲ್ಲಿ ವಾಸಿಸಲು ಅನುಕೂಲವಾಗುವಂತೆ ಮನೆ ಕಟ್ಟಿಕೊಳ್ಳಲು ಒಂದು ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಬಹಳ ಸಂತೋಷ. ಆದರೆ ತಾಲ್ಲೂಕು ಮಟ್ಟದಲ್ಲಿರತಕ್ಕ ಎಲ್ಲ ಇಲಾಖಾ ಅಧಿಕಾರಿಗಳಿಗೂ ಈ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಕಾರಣವೇನೆಂದರೆ, ತಾಲ್ಲೂಕು ಕೇಂದ್ರದಲ್ಲಿ ಇಲಾಖಾ ಅಧಿ ಕಾರಿಗಳಿಗೆ ವಾಸಿಸಲು ಮನೆಗಳಿಲ್ಲದೆ ಪ್ರತಿನಿತ್ಯ ಸುಮಾರು ೫೦–೬೦ ಮೈಲಿಗಳಷ್ಟು ಪ್ರಯಾಣ ಮಾಡಬೇಕಾಗುತ್ತದೆ. ಹೀಗಾಗಿ ನಾವು ಏನು ಅವರಿಂದ ಉತ್ತಮವಾದ ಕೆಲಸವನ್ನು ನಿರೀಕ್ಷಣೆ ಮಾಡುತ್ತೇವೆಯೋ ಆ ಕೆಲಸವನ್ನು ಪಡೆಯಲಿಕ್ಕೆ ಆಗುತ್ತಿಲ್ಲ. ಕೆಲವರಿಗೆ ಮನೆ ಸಿಕ್ಕಿದರೂ ಸಂಬಳದ ಅರ್ಧ ಭಾಗವನ್ನು ಬಾಡಿಗೆ ರೂಪದಲ್ಲಿ ಕೊಡಬೇಕಾದ್ದರಿಂದ ನಮ್ಮ ಸರ್ಕಾರ ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕ ಅಧಿಕಾರಿಗಳಿಗೆ ಕೊನೇ ಪಕ್ಷ ೧೦೦ ಮನೆಗಳನ್ನಾದರೂ ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ವಾಣಿಜ್ಯ ಬ್ಯಾಂಕುಗಳು ಬಟವಾಡೆ ಮಾಡತಕ್ಕ ಒಟ್ಟು ಮೊತ್ತದಲ್ಲಿ ಶೇಕಡ ೨ ರಷ್ಟನ್ನು ಕುಶಲ ಕರ್ಮಿಗಳಿಗೆ ಕೊಡಬೇಕೆಂದು ರಿಸರ್ವ್‌ಬ್ಯಾಂಕು ಆದೇಶ ಕೊಟ್ಟಿದ್ದರೂ ಸಹ ಶೇಕಡ ಅರ್ಧ ಬಾಗ ಕೂಡ ಕೊಟ್ಟಿಲ್ಲ. ರಾಜ್ಯ ಸರ್ಕಾರ ಮರುಪಾವತಿ ವಿಷಯದಲ್ಲಿ ಬರವಸೆ ಕೊಟ್ಟಿದ್ದಾ ಗ್ಯೂ ವಾಣಿಜ್ಯ ಬ್ಯಾಂಕುಗಳು ಬಡವರಿಂದ ದೂರ ಸರಿದು ಬಡ ಕುಶಲ ಕರ್ಮಿಗಳು ಅನುಚಿತವಾದ ಪರಿಸ್ಥಿತಿಗೆ ಈಡಾಗಿದ್ದಾರೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಮಾನ್ಯ ಅರ್ಥ ಮಂತ್ರಿಗಳಿಗೆ ಒಂದು ವಿಷಯವನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ವ್ಯವಸಾಯದ ವರಮಾನ ತೆರಿಗೆಯನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರೈತರ ಸಮಸ್ಯೆಗಳಲ್ಲಿ ಇದು ಒಂದು ಬಹಳ ಪ್ರಾಮುಖ್ಯವಾದುದು. ಇವತ್ತಿನ ದಿವಸ ರೈತ ತನ್ನ ಸತತ ದುಡಿಮೆಯಲ್ಲಿ ತೊಡಗಿ ವರ್ಷಕ್ಕೆ ಒಂದೆರಡು ಬೆಳೆಗಳನ್ನು ಬೆಳೆದರೂ ಕೂಡ ಅವನ ಜೀವನ ಮಟ್ಟ ಬಹಳ ಕಷ್ಟವಾಗಿದೆ.

ತಮಗೆ ಉದಾಹರಣೆಯ ಮೂಲಕ ನಿರೂಪಣೆ ಮಾಡಬೇಕೆಂದರೆ, ೧೦ ಎಕರೆ ಜಮೀನು ಇಟ್ಟು ಕೊಂಡಿರತಕ್ಕಂಥ ಒಬ್ಬ ರೈತ ಒಳ್ಳೆಯ ಬೆಳೆಯನ್ನು ತೆಗೆಯಬೇಕು ಎಂದರೆ ಸಾವಿರಾರು ರೂಪಾಯಿ

ಗಳ ಬಂಡವಾಳವನ್ನು ಹಾಕಬೇಕು. ಇದಕ್ಕಾಗಿ ಅವನು ಸಿನಿಮಾ ಮಂದಿರಗಳ ಮುಂದೆ, ರಸ್ತೆಗಳ ಬದಿಯಲ್ಲಿ ಪೆಟ್ಟಿ ಅಂಗಡಿಗಳನ್ನು ಇಟ್ಟುಕೊಂಡು ಅದರಿಂದ ಸಂಪಾದನೆ ಮಾಡಿ ಬರತಕ್ಕಂಥ ಹಣವನ್ನು ವ್ಯವಸಾಯಕ್ಕೆ ಉಪಯೋಗಿಸಿದರೂ ಒಳ್ಳೆಯ ಉತ್ಪತ್ತಿ ಬರುವುದಕ್ಕೂ ಸಾಧ್ಯವಾಗುತ್ತಿಲ್ಲ, ರೈತ ಬಹಳ ಕಷ್ಟದ ಸ್ಥಿತಿಯಲ್ಲಿ ಇದ್ದಾನೆ. ಹೀಗಿರಬೇಕಾದರೆ ತಾವು ಅವನ ಮೇಲೆ ಹಾಕಿಂತಕ್ಕಂಥ ವರಮಾನ ತೆರಿಗೆಯನ್ನು ತೆಗೆಯಬೇಕು ಎಂದು ನಾನು ತಮಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ.

೫-೩೦ ಪಿ. ಎಂ.

ಇನ್ನು ಆಡಳಿತದ ಬಗ್ಗೆ ಹೇಳಬೇಕು ಎಂದರೆ ಆಡಳಿತದ ದೃಷ್ಟಿಯಿಂದ ಕೆಲವು ತಾಲ್ಲೂಕುಗಳನ್ನು ಪುನರ್ ವಿಂಗಡಿಸಬೇಕೆಂದು ಸರ್ಕಾರ ಒಂದು ಏಕಸದಸ್ಯ ಆಯೋಗವನ್ನು ನೇಮಿಸಿತು. ಈ ಆಯೋಗ ತಮ್ಮ ವರದಿಯನ್ನು ಸರ್ಕಾರಕ್ಕೆ ಈಗಾಗಲೇ ತಲುಪಿಸಿದೆ. ಅದನ್ನು ತಾವು ಒಪ್ಪಿಕೊಂಡು, ಅದನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಮೈಸೂರು ಜಿಲ್ಲೆಗೆ ಸೇರಿದ ಕೊಳ್ಳೇಗಾಲ ತಾಲ್ಲೂಕು ಸುಮಾರು ೧೧೦೭ ಚದರಮೈಲಿಗಳಷ್ಟು ವಿಸ್ತಾರವಾಗಿದೆ ಅಂದರೆ ಇದು ಕೊಡಗು ಜಿಲ್ಲೆಯಷ್ಟೇ ವಿಸ್ತಾರವಾಗಿದೆ ಎಂದು ಹೇಳಬಹುದು. ಇದು ಬಹಳ ವಿಸ್ತಾರವಾಗಿ ರತಕ್ಕಂಥ ತಾಲ್ಲೂಕು ಆದ್ದರಿಂದ ಇಲ್ಲಿ ಆಡಳಿತ ಕುಸಿದು ಬಿದ್ದಿದೆ ಎಂದು ಹೇಳದೇ ವಿಧಿ ಇಲ್ಲ. ಇಲ್ಲಿ ತಾಲ್ಲೂಕು ಕೇಂದ್ರದಿಂದ ತಾಲ್ಲೂಕಿನ ಕೊನೇ ಗ್ರಾಮಕ್ಕೆ ೮೦ ಮೈಲಿ ದೂರ ಇರುವುದರಿಂದ ಅಲ್ಲಿಗೆ ತಹಶೀಲ್ದಾರರು ಹೋಗಿ ಬರುವುದಕ್ಕೆ ಒಂದು ದಿನ ಹಿಡಿಯುತ್ತದೆ. ತಹಶೀಲ್ದಾರರು ಅಲ್ಲಿಗೆ ಸರಿಯಾಗಿ ಬೇಟಿ ನೀಡುತ್ತಾ ಇಲ್ಲ. ಇದರಿಂದ ತಾಲ್ಲೂಕಿನ ಕೊನೇ ಗ್ರಾಮದವರಿಗೆ ಸರ್ಕಾರದವರು ಕೈಕೊಂಡಿರತಕ್ಕಂಥ ಅನೇಕ ಯೋಜನೆಗಳ ಸೌಲಭ್ಯಗಳು ಅವರಿಗೆ ದೊರೆಯತಕ್ಕಂಥಾದ್ದು ದುರ್ಲಭವಾಗಿದೆ. ಈ ನಮ್ಮ ಕೊಳ್ಳೇಗಾಲ ತಾಲ್ಲೂಕು ರಾಜ್ಯದ ಕೊನೇ ತಾಲ್ಲೂಕು ಆದುದರಿಂದ ಮತ್ತು ಈ ತಾಲ್ಲೂಕಿನ ಹೆಚ್ಚಿನ ಗ್ರಾಮಗಳು ಬೆಟ್ಟಗುಡ್ಡಗಳ ಮಧ್ಯೆ ಇರುವುದರಿಂದ ತಾಲ್ಲೂಕು ಕೇಂದ್ರಕ್ಕೆ ಹೋಗಿ ಬರಲು ಒಬ್ಬ ಸಾಮಾನ್ಯ ಮನುಷ್ಯನಿಗೂ ತೊಂದರೆಯಾಗಿದೆ. ಆದ್ದರಿಂದ ಈ ತಾಲ್ಲೂಕನ್ನು ವಿಭಜಿಸಿ ಕೊಳ್ಳೇಗಾಲ ವಿಧಾನ ಸಭಾಕ್ಷೇತ್ರ ಮತ್ತು ಹನಿಯೂರ ವಿಧಾನಸಭಾ ಕ್ಷೇತ್ರ ಎಂಬುದಾಗಿ ಮಾಡಬೇಕೆಂದು ಸರ್ಕಾರದವರಲ್ಲಿ ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಅಲ್ಲದೇ ನಮ್ಮ ಸರ್ಕಾರದವರು ಉದ್ಯೋಗ ದೃಢೀಕರಣ ಯೋಜನೆಯನ್ನು ಜಾರಿಗೆ ತಂದಿರತಕ್ಕಂಥಾದ್ದು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಅವಿದ್ಯಾವಂತ ನಿರುದ್ಯೋಗಿಗಳಿಗೆ ವರಪ್ರಧಾನವಾಗಿದೆ ಎಂದು ಹೇಳಬಹುದು. ಇವತ್ತಿನ ದಿವಸ ೪೫ ಬ್ಯಾಂಕುಗಳಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ ಮತ್ತು ೧೯೭೭-೭೮ಕ್ಕೆ ಇನ್ನೂ ೪೫ ಬ್ಯಾಂಕುಗಳಿಗೆ ಇದನ್ನು ವಿಸ್ತಾರ ಮಾಡುತ್ತೇವೆಂದು ಹೇಳಿದ್ದಾರೆ. ನಿಜವಾಗಿಯೂ ಕೂಡ ಈ ಯೋಜನೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಬೇಕಾಗಿದೆಯೋ ಅದನ್ನೆಲ್ಲಾ ಸಾಧಿಸುವುದಕ್ಕೆ ಅನುಕೂಲವಾಗಿದೆ. ನಮ್ಮ ಸರ್ಕಾರದವರು ಇಷ್ಟೆಲ್ಲಾ ಒಳ್ಳೆಯ ಅಭಿವೃದ್ಧಿ ಯೋಜನೆಗಳನು ಜಾರಿಗೆ ತಂದಿದ್ದರೂ ಕೂಡ ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಅವುಗಳ ಬಗ್ಗೆ ಒಂದು ಒಳ್ಳೆಯ ಮಾತನ್ನು ಆಡದೇ ಇರುವಂಥಾದ್ದು ತುಂಬಾ ಶೋಚನೀಯ. ನಮ್ಮ ಮಾನ್ಯ ಸ್ನೇಹಿತರಾದ ಚಂದ್ರಶೇಖರ್‌ರವರು ಮಾತನಾಡತಕ್ಕಂಥ ಕಾಲದಲ್ಲಿ 'ಭಾಗ್ಯಜ್ಯೋತಿ.' ಹೊಸಯೋಜನೆಯ ಬಗ್ಗೆ ಹೇಳಿದರು. ತತ್ಕಾಲಿಕವಾಗಿ ಶರಾವತಿಯಲ್ಲಿರತಕ್ಕಂಥ ಮಿಷಿನರಿ ಕಟ್ಟಿರುವುದರಿಂದ ನಾವು ಕೇರಳದಿಂದ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿದ್ದೇವೆ. ಅಲ್ಲಿಯೂ ದೋಷ ಇರುವುದರಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ವಿದ್ಯುಚ್ಛಕ್ತಿ ಇಲ್ಲದೇ ತೊಂದರೆಯಾಗಿದೆ. ಇದರಿಂದ ಬೆಂಗಳೂರು ನಗರದಲ್ಲಿ ೧ ಗಂಟೆ ಮಾತ್ರ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗುತ್ತದೆ ಎಂದು ಮಾನ್ಯ ಸಂಬಂಧಪಟ್ಟ ಮಂತ್ರಿಯವರು ಹೇಳಿದ್ದಾರೆ. ಹೀಗೆ ಹೇಳತಕ್ಕಂಥ ಸಂದರ್ಭದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಒಬ್ಬೊಬ್ಬ ಹರಿಜನರ ಮನೆಯಲ್ಲಿ ಸಾಯಂಕಾಲದ ಹೊತ್ತಾದರೂ ಒಂದು ವಿದ್ಯುತ್ ಬಲ್ಬ ಉರಿಸುವಂತಾಗಲೂ ಈ ಭಾಗ್ಯಜ್ಯೋತಿ ಕಾರ್ಯಕ್ರಮವನ್ನು ಜಾಗ್ರತೆ ಕಾರ್ಯ ರೂಪಕ್ಕೆ ತರಬೇಕೆಂದು ಹೇಳಬಯಸುತ್ತೇನೆ. ಈ ಭಾಗ್ಯಜ್ಯೋತಿ ಯೋಜನೆ ಒಂದು ಒಳ್ಳೆಯ ಯೋಜನೆಯಾಗಿದೆ. ಈ ಒಂದು ಉನ್ನತ ಯೋಜಗೆ ಎಲ್ಲರೂ ಹೆಚ್ಚಿನ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು ನಮ್ಮ ರಾಷ್ಟ್ರದ ಪ್ರಧಾನಮಂತ್ರಿಯವರು ಮತ್ತು ಜನತಾಪಕ್ಷದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್‌ರವರ ಜೊತೆಯಲ್ಲಿ ಮಾತನಾಡಿ ಈ ರಾಜ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಗೋಹತ್ಯೆ ನಿಷೇಧವನ್ನು ಜಾರಿಗೆ ತರಬೇಕು, ಇದಕ್ಕೆ ಎಲ್ಲರೂ ಬೆಂಬಲವನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ ಮಾನ್ಯ ದೇವೇಗೌಡರವರು ಮಾತನಾಡತಕ್ಕಂಥ ಸಂದರ್ಭದಲ್ಲಿ 'ಹಿಂದೆ ಒಂದಾನೊಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಯವರು, ಆಹಾರದ ಅಭಾವ ಇದೆ. ಗೋಹತ್ಯೆ ಮಾಡುವುದು ಸರಿ ಎಂದು ಹೇಳಿದ್ದಾರೆ. ಎಂಬುದಾಗಿ ಹೇಳಿದರು. ಇವತ್ತಿನದಿವಸ ಗೋವುಗಳಿಂದ ನಮ್ಮ ರಾಜ್ಯಕ್ಕೆ ಯಥೇಚ್ಛವಾಗಿ ಹಾಲು ದೊರಕುತ್ತಾ ಇದೆ ಮತ್ತು ಹಾಲನ್ನು ಮತ್ತೊಂದು ರಾಜ್ಯಕ್ಕೆ ಸರಬರಾಜು ಮಾಡುವಂಥಾ ಸ್ಥಿತಿಯಲ್ಲಿ ನಾವಿದ್ದೇವೆ. ಇಂತಹ ಸನಿವೇಶದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಆ ಮಾತನ್ನು ಆಡಿದ್ದಾರೆ ಎಂದರೆ ನಮಗಾದರೂ ಕೂಡ ಆಶ್ಚರ್ಯವಾಗುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಆ ವಿಚಾರ ಪೇಪರ್‌ನಲ್ಲಿ ಬಂದಿತ್ತು. ಅದರಮೇಲೆ ಇಲ್ಲಿ ಬಹಳ ವಾದವಿವಾದಗಳು ಆಯಿತು.

ಶ್ರೀ ಜಿ. ರಾಜೂಗೌಡ.—ಪೇಪರಿನಲ್ಲಿ ಬಂದಥ ವಿಚಾರದ ಬಗ್ಗೆ ತಿಳಿದುಕೊಂಡು ಈ ರೀತಿ ಅಪಪ್ರಚಾರ ಮಾಡಬಾರದು. ಇನ್ನು ನಮ್ಮ ಮಾನ್ಯ ಚಂದ್ರಶೇಖರ್‌ರವರು ಮಾತನಾಡುತ್ತಾ ಸಾಮದಾಯಿಕ ಭಾವಿಗಳನ್ನು ತೆರೆಯುವುದರ ಬಗ್ಗೆ ಹೇಳಿದರು. ಅದಕ್ಕೆ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಯವರು ತಕ್ಕ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಯವರು ಹುಣಸೂರು ಕ್ಷೇತ್ರದಲ್ಲಿ ಹೆಚ್ಚಿನ ಕೆಲಸ ಕಾರ್ಯಗಳು ಆಗತ್ತಿವೆ ಎಂದು ಹೇಳಿದರು. ನಾನು ಹೇಳುವುದೇನೆಂದರೆ ಮಾನ್ಯ ಮುಖ್ಯಮಂತ್ರಿಯವರು ಹುಣಸೂರು ಕ್ಷೇತ್ರದಿಂದ ಚುನಾಯಿತರಾಗಿ ಬಂದಿದ್ದರೂ ಕೂಡ ಇಡೀ ಕರ್ನಾಟಕ ರಾಜ್ಯವೇ ತಮ್ಮ ಕ್ಷೇತ್ರವೆಂದು ತಿಳಿದುಕೊಂಡು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಇದನ್ನು ತಾವು ಮೆಚ್ಚಬೇಕು. ಇಡೀ ರಾಜ್ಯದಲ್ಲಿ ಕೆಲಸಕಾರ್ಯಗಳು ಸುವ್ಯವಸ್ಥಿತವಾಗಿ ನಡೆಯತಕ್ಕಂಥ ದಿಶೆಯಲ್ಲಿ ಕೆಲವು ಕಡೆ ನ್ಯೂನತೆಗಳು ಬರಬಹುದು. ಅಧಿಕಾರಿಗಳನ್ನು ವರ್ಗಾವರ್ಗಿ ಮಾಡುವಾಗ, ಒಬ್ಬ ಅಧಿಕಾರಿಯ ಜಾಗಕ್ಕೆ ಮತ್ತೊಬ್ಬ ಅಧಿಕಾರಿ ಬರುವಾಗ ವಿಳಂಬವಾಗಿರಬಹುದು. ಹಾಗೆಯೇ ಆಗತಕ್ಕಂಥ ಕೆಲಸಕಾರ್ಯಗಳಲ್ಲಿ ವಿಳಂಬವಾಗಿರಬಹುದು. ಇದನ್ನೇ ಒಂದು ದೊಡ್ಡ ದೋಷ ಎಂದು ಎತ್ತಿ ತೋರಿಸುವುದರಲ್ಲಿ ಅರ್ಥವಿಲ್ಲ. ಇವತ್ತಿನದಿವಸ ರಾಜ್ಯದಲ್ಲಿ ಎಲ್ಲಾ ಕಡೆ ಉತ್ತಮವಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಈ ಬಗ್ಗೆ ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಒಂದು ಮಾತನ್ನು ಆಡದೇ ಎಲ್ಲೋ ಒಂದು ನ್ಯೂನತೆ ಇದೆಯೋ ಅದನ್ನೇ ಎತ್ತಿ ತೋರಿಸತಕ್ಕಂಥಾದ್ದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ಸರ್ಕಾರದವರು ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡು ಆ ದಿಶೆಯಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸಮಾಡುವಾಗ, ಅವರಿಗೆ ಒಳ್ಳೆಯ ಸಲಹೆಗಳನ್ನು ಕೊಟ್ಟು ಅವರು ಮಾಡತಕ್ಕಂಥ ಕೆಲಸಗಳ ಬಗ್ಗೆ ಮೆಚ್ಚಿಗೆಯನ್ನು ಸೂಚಿಸುವುದು ಒಳ್ಳೆಯದು ಎಂದು ನಾನು ಅವರಿಗೆ ಹೇಳುತ್ತೇನೆ.

ಇನ್ನು ಜನತಾ ಗೃಹನಿರ್ಮಾಣ ಯೋಜನೆಯ ಬಗ್ಗೆ ಹೇಳಬೇಕೆಂದರೆ ನಮ್ಮ ಸರ್ಕಾರದವರು ಜನತಾ ಮನೆಗಳ ನಿರ್ಮಾಣಕ್ಕಾಗಿ ಕಳೆದವರ್ಷ ೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ೭೫ ಸಾವಿರ ಮನೆಗಳನ್ನು ಕಟ್ಟಬೇಕೆಂದು ಹೇಳಿದ್ದಾರೆ. ಇದರಲ್ಲಿ ಇರತಕ್ಕಂಥ ಲೋಪದೋಷಗಳ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ ಜಿಲ್ಲಾಮಟ್ಟದಲ್ಲಿ ಈ ಜನತಾ ಮನೆಗಳನ್ನು ಕಟ್ಟಲು ಬೇಕಾದ ಉಪಕರಣಗಳ ಸರಬರಾಜಿಗಾಗಿ ಈ ಕೆಲಸವನ್ನು ತಾವು ಕಂಟ್ರಾಕ್ಟರ್‌ಗಳಿಗೆ ಕೊಟ್ಟಿದ್ದೀರಿ. ಅವರು ಸಕಾಲದಲ್ಲಿ ಆ ಸಾಮಗ್ರಿಗಳನ್ನು ಸರಬರಾಜು ಮಾಡಿಲ್ಲ. ಬಡವರು ತಮ್ಮ ನಿವೇಶನಗಳಲ್ಲಿ ಅರ್ಧಂಬರ್ಧ ಗೋಡೆಗಳನ್ನು ಹಾಕಿ ಈ ಸಾಮಗ್ರಿಗಳು ಬರುತ್ತವೆ ಎಂದು ಕಾಯ್ದು ಕುಳಿತಿದ್ದರೂ ಅವರಿಗೆ ಅವು ಇನ್ನು ಮುಟ್ಟಿಲ್ಲ. ೧೯೭೮-೭೯ನೇ ಸಾಲಿಗೆ ಜನತಾ ಮನೆಗಳನ್ನು ಕಟ್ಟಲು ಬೇಕಾದ ಸಾಮಗ್ರಿಗಳು ಸರಬರಾಜು ಆಗಿಲ್ಲ. ಅಲ್ಲಿ ಮಳೆ ಬಂದು ಕಟ್ಟಿದಂಥ ಗೋಡೆಗಳು ಸಹ ಕುಸಿದು ಬಿದ್ದು ಹೋಗಿದೆ. ಈ ರೀತಿಯ ಪರಿಸ್ಥಿತಿಯಿಂದಾಗಿ ಬಡ ಜನರು ಈ ಯೋಜನೆಯ ಬಗ್ಗೆ ಬೇಜಾರು ಪಟ್ಟುಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಈ ಕಡೆಗೆ ಗಮನಹರಿಸಿ ಕಂಟ್ರಾಕ್ಟರುಗಳು ಸಕಾಲದಲ್ಲಿ ಮನೆ ಕಟ್ಟಲು ಬೇಕಾಗಿರತಕ್ಕಂಥ ಸಾಮಗ್ರಿಗಳನ್ನು ಒದಗಿಸುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಆಗ

ಮಾತ್ರ ಬಡ ರೈತರು ತಮ್ಮ ನಿವೇಶನದಲ್ಲಿ ಮನೆ ಕಟ್ಟಿಕೊಂಡು ನೆಮ್ಮದಿಯಿಂದ ಜೀವನ ಮಾಡುತ್ತಾನೆ. ತಾವು ಈ ೧೯೭೭ನೇ ಸಾಲಿಗೆ ೨೦ ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಕೊಟ್ಟಿದ್ದೀರಿ. ಇದರಲ್ಲಿ ತಾವು ಅನುಸರಿಸತಕ್ಕಂಥ ನೀತಿಯಲ್ಲಿ ಅಂದರೆ ತಾಲ್ಲೂಕು ಮಟ್ಟದಲ್ಲಿ ಈ ಕೆಲಸ ಮಾಡಿಸಲು ಜಿಲ್ಲಾ ಮಟ್ಟದಲ್ಲಿರತಕ್ಕಂಥ ಕಂಟ್ರಾಕ್ಟರುಗಳಿಗೆ ಈ ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ಇದರಿಂದ ಕೆಲಸಗಳು ನಿಧಾನವಾಗಿ ನಡೆಯುತ್ತಿವೆ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಟೆಂಡರುಗಳನ್ನು ಕರೆದು ಅಲ್ಲಿರತಕ್ಕಂಥ ವರಿಗೆ ಈ ಜವಾಬ್ದಾರಿಯನ್ನು ಕೊಟ್ಟು, ಮನೆಗಳಿಗೆ ಬೇಕಾದ ಮರಮುಟ್ಟುಗಳು, ಹೆಂಚುಗಳನ್ನು ಸಕಾಲದಲ್ಲಿ ಆ ಬಡ ಜನರಿಗೆ ತಲುಪುವ ರೀತಿಯಲ್ಲಿ ತಾವು ವ್ಯವಸ್ಥೆ ಮಾಡಬೇಕು. ಇದರಿಂದ ತಾವು ಇನ್ನು ಹೆಚ್ಚಿನ ಜನಪ್ರಿಯತೆಯನ್ನು ಗಳಿಸಬಹುದು ಎಂದು ಹೇಳುತ್ತೇನೆ. ಇನ್ನು ತಾವು ಕೈಕೊಂಡಿರತಕ್ಕಂಥ ಅನೇಕ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆ ನನ್ನ ಮಾನ್ಯ ಸ್ನೇಹಿತರುಗಳು ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಇಚ್ಛೆಪಡದೇ ತಾವು ಮುಂದಿನಸಾರಿಗೆ ಇನ್ನೂ ಅತ್ಯುತ್ತಮವಾದ ಬಜೆಟನ್ನು ತಯಾರು ಮಾಡಿ, ಕೃಷಿ, ಕೈಗಾರಿಕೆ, ಮತ್ತು ಸಾಗಾಣಿಕೆ ಹಾಗೂ ಸಂಪರ್ಕ ಮಾಧ್ಯಮಗಳ ಪ್ರಗತಿಯನ್ನು ಹೆಚ್ಚಿನ ಮಟ್ಟದಲ್ಲಿ ಮಾಡುತ್ತೀರಿ, ಈ ರಾಜ್ಯವನ್ನು ಇನ್ನೂ ಹೆಚ್ಚಿನ ಪ್ರಗತಿಪಥದಲ್ಲಿ ಕೊಂಡೊಯ್ಯುತ್ತೀರಿ ಎಂದು ತಿಳಿದುಕೊಂಡು, ಈ ಕೆಲಸವನ್ನು ಮಾಡಲು ತಮಗೆ ದೇವರು ಹೆಚ್ಚಿನ ಬುದ್ಧಿಶಕ್ತಿಯನ್ನು ಕೊಡಲಿ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) :—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಕೊರತೆ ಆಯವ್ಯಯವನ್ನು ವಿರೋಧ ಮಾಡುತ್ತಾ ಕೃಷಿ ಪ್ರಧಾನವಾದ ನಮ್ಮ ರಾಜ್ಯದಲ್ಲಿ ಕೃಷಿಗೆ ಮತ್ತು ಕೃಷಿಕರಿಗೆ ಸಾಕಷ್ಟು ಪ್ರೋತ್ಸಾಹ–ಪರಿಹಾರ ಸಿಗುತ್ತಿಲ್ಲ ಎಂದು ಹೇಳಬೇಕಾಗಿದೆ. ನಮ್ಮ ರಾಜ್ಯದ ಕೃಷಿಕರಿಗೆ ಸಂಘದ ಸಾಲ, ಬಾವಿ ಸಾಲ, ಭೂ ಅಭಿವೃದ್ಧಿ ಸಾಲ ಮುಂತಾಗಿ ಇನ್ನೂ ಅನೇಕ ರೀತಿಯ ಸಾಲಗಳಿವೆ. ಈ ಸಾಲಗಳು ಸಾಲದೆಂಬಂತೆ ಕೃಷಿಕನ ಮೇಲೆ ನೀರಾವರಿ ತೆರಿಗೆಯನ್ನೂ ವಿಧಿಸಲಾಗಿದೆ. ಕೃಷಿ ಉತ್ಪನ್ನಗಳ ಬೆಲೆಗಳು ಬಹಳ ಕಡಿಮೆಯಾಗಿ, ರೈತನು ಬೆಳೆದ ಪದಾರ್ಥಗಳಿಗೆ ಸರಿಯಾದ ಲಾಭ ದೊರೆಯದೆ, ಅವನು ಖರ್ಚು ಮಾಡಿದ ಹಣ ವಾಪಸ್ಸು ಬರದೇ ಇರುವ ಕಾಲದಲ್ಲಿ ಈ ಎಲ್ಲಾ ಸಾಲದ ಮೊಬಲಗನ್ನು ಸರ್ಕಾರದವರು ವಸೂಲು ಮಾಡುತ್ತಿದ್ದಾರೆ. ಹೀಗಾಗಿ, ಇಂದಿನ ರೈತನ ಪರಿಸ್ಥಿತಿ ಒಂದಲ್ಲ ಒಂದು ಸಂಘದಲ್ಲಿ ಸಾಲಗಾರನಾಗಿರುವುದಾಗಿದೆ. ಸಾಲ ಮಾಡಿದ ಕಾರಣಕ್ಕಾಗಿ ರೈತನ ಮನೆ ಹದಿನೈದು ದಿವಸಕ್ಕೆ ಎರಡು–ಮೂರು ಸಲ ಜಪ್ತಿಯಾಗುತ್ತಿದೆ. ಇದರ ಜೊತೆಗೆ ಸುಮಾರು ಹತ್ತು ವರ್ಷ ಹಿಂದಿನ ನೀರಾವರಿ ತೆರಿಗೆಯನ್ನು ವಸೂಲು ಮಾಡಲಾಗುತ್ತಿದೆ. ನಾನೇನು ನೀರಿನ ತೆರಿಗೆಯನ್ನು ವಸೂಲು ಮಾಡಬಾರದೆಂದು ಹೇಳುವುದಿಲ್ಲ. ಆದರೆ, ನೀರಿನ ತೆರಿಗೆ ವಸೂಲು ಮಾಡುವಾಗ, ಹೇಗೆ ಮಾಡಬೇಕು ಮತ್ತು ಯಾವುದಕ್ಕೆ ಮಾಡಬೇಕೆಂದು ವಿಚಾರ ಮಾಡಿ, ಮಾಡಬೇಕಾಗುತ್ತದೆ. ನಮ್ಮ ಜಿಲ್ಲೆಯ ಅಂಕಿ–ಅಂಶವನ್ನು ತೆಗೆದುಕೊಳ್ಳುವುದಾದರೆ, ಸುಮಾರು ೭೮೦ ತಾಲ್ಲೂಕು ಬೋರ್ಡ್ ಕೆರೆಗಳೂ ಮತ್ತು ೧೬೦೦ ಲೋಕೋಪಯೋಗಿ ಇಲಾಖೆ ಕೆರೆಗಳು ನಮ್ಮಲ್ಲಿವೆ. ಈ ಕೆರೆಗಳಿಂದ ವರ್ಷದಲ್ಲಿ ಒಂದೆರಡು ತಿಂಗಳು ಮಾತ್ರ ನೀರಾವರಿಯಾಗುತ್ತದೆ. ಇಂತಹುದಕ್ಕೆಲ್ಲ ನೀರಿನ ತೆರಿಗೆ ಕೊಡಬೇಕೆಂದು ಸರ್ಕಾರದವರು ಹೇಳುತ್ತಿದ್ದಾರೆ. ಸಣ್ಣ–ಪುಟ್ಟ ಕೆರೆಯ ನೀರಿಗೆ ತೆರಿಗೆ ಹಾಕುವುದಿಲ್ಲವೆಂದು ಸರ್ಕಾರದವರು ಹೇಳುತ್ತಿದ್ದಾರೆ, ಮತ್ತು ಅಂತಹವರು ತಹಶೀಲ್ದಾರರಿಗೆ ಅರ್ಜಿ ಕೊಡಲೆಂದು ತಿಳಿಸಿದ್ದಾರೆ. ತಹಶೀಲ್ದಾರರಿಗೆ ಅರ್ಜಿ ಕೊಟ್ಟರೆ ಅವರು ಒಂದು ವರ್ಷದ ತೆರಿಗೆಯನ್ನು ವಜಾ ಮಾಡುತ್ತಾರೆಯೇ ವಿನಃ ಹಿಂದಿನ ಹತ್ತು ವರ್ಷಗಳ ಬಾಕಿ ನೀರಾವರಿ ತೆರಿಗೆಯನ್ನು ವಜಾ ಮಾಡುವುದಿಲ್ಲ ; ಅದು ಬಾಕಿಯಾಗಿಯೇ ಉಳಿಯುತ್ತದೆ. ಆ ಬಾಕಿಯನ್ನು ತೀರಿಸಲು ರೈತರು ತಮ್ಮ ಮನೆಗಳನ್ನು ಮಾರಿದರೂ ತೀರಿಸಲಾಗದಂಥ ಅತ್ಯಂತ ಕಷ್ಟದಲ್ಲಿದ್ದಾರೆ. ಒಂದು ಕಡೆ ಸಂಘದ ಸಾಲಕ್ಕಾಗಿ ರೈತನ ಮನೆ ಹರಾಜಾಗುತ್ತಿದರೆ ಇನ್ನೊಂದು ಕಡೆ ಭೂ ಅಭಿವೃದ್ಧಿ ಸಾಲಕ್ಕಾಗಿ ಹರಾಜಾಗಿರುತ್ತದೆ. ಇಂತಹ ಅನ್ಯಾಯಗಳು ರೈತನ ಮೇಲೆ ಆಗಬಾರದು. ಖಾಸಗಿ ಸಾಲದ ಮೇಲೆ ಅಪಾರ ಬಡ್ಡಿ ತೆತ್ತು ರೈತ ಶೋಷಣೆಗೊಳಗಾಗುತ್ತಿದ್ದಾನೆ, ಅವನ ಸಾಮೂಹಿಕ ಅಭಿವೃದ್ಧಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ ಆಗಿನ ಉದ್ದೇಶ ಈಗಿಲ್ಲ. ಇನ್ನು ಹದಿನೈದು ವರ್ಷಗಳಲ್ಲಿ ಯಾವ ರೈತನೂ ನಮಗೆ ಇನ್ನು ಸಹಕಾರ ಸಂಘಗಳ ಸಾಲ ಬೇಡ ಸ್ವಾಮಿ ಎನ್ನುವ ಕಾಲ ಬರುತ್ತದೆ. ಏಕೆಂದರೆ, ಸಂಘಗಳು ರೈತನಿಗೆ ಪೆಡಂಭೂತವಾಗಿವೆ ; ಈ ಪೆಡಂಭೂತಗಳು ಯಾವಾಗ ತೊಲಗುವವು ಎಂದು ಹೇಳುವ ಪರಿಸ್ಥಿತಿ ಬಂದಿದೆ. ರೈತನು ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆಯನ್ನು ಒದಗಿಸಿಕೊಟ್ಟರೆ ಅವನು ಸರ್ಕಾರಕ್ಕೆ ಕೊಡಬೇಕಾದ ಸಾಲವನ್ನು ವಾಪಸ್ಸು ಮಾಡುತ್ತಾನೆ.

ಅಲ್ಲದೆ, ನಮ್ಮಲ್ಲಿ ಸರಿಯಾದ ಮಳೆ ಬಂದರೆ ಬಂತು, ಇಲ್ಲದಿದ್ದರೆ ಇಲ್ಲ. ಎಲ್ಲಿ ಖಾಯಂ ನೀರಾವರಿ ವ್ಯವಸ್ಥೆ ಇದೆ ಅಲ್ಲಿ ನೀರಾವರಿ ತೆರಿಗೆ ಹಾಕಿ ; ಹಾಕುವುದೂ ಧರ್ಮ. ಆದರೆ, ನೀರೇ ಬರದಂಥ ಕಡೆ ಮತ್ತು ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದಿರುವ ಕಡೆಗಳಲ್ಲಿ ನೀರಾವರಿ ತೆರಿಗೆ ಹಾಕುವುದು ಧರ್ಮವಲ್ಲ. ಇದರಿಂದ ರೈತ ತನ್ನ ಆಸ್ತಿಪಾಸ್ತಿಯನ್ನೆಲ್ಲ ಮಾರಿಕೊಂಡು ಪಟ್ಟಣದ ಕಡೆಗೆ ದಾರಿ ಹುಡುಕಿಕೊಂಡು ಬರುವ ಹಾಗೆ ನೀವು ಮಾಡುತ್ತಿದ್ದೀರಿ ಎಂದು ಹೇಳುತ್ತೇನೆ.

ಈಗ ರೇವತಿ ಮಳೆ ಪ್ರಾರಂಭವಾಗಿದೆ. ನಮ್ಮ ರಾಜ್ಯದಲ್ಲಿ ಪ್ರಥಮ ಮಳೆ ಈಗ ಬರಬೇಕು. ೧೯೭೮-೭೯ನೇ ಸಾಲಿಗೆ ಕೊಡಬೇಕೆಂದು ನಿಗದಿ ಮಾಡಿರುವ ಜನತಾ ಮನೆಗಳು ಅರ್ಧಂಬರ್ಧ ಮುಗಿದಿದ್ದು ಗೋಡೆಗಳೆಲ್ಲ ಸಿದ್ಧವಾಗಿವೆ. ಆದರೆ ಮೇಲ್ಮುಚ್ಚುವುದಕ್ಕೆ ಮರವಿಲ್ಲ. ಹೆಂಚುಗಳೂ ಸಿದ್ಧವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ರೇವತಿ ಮಳೆ ಬಂದರೆ ಜನತಾ ಮನೆಗಳ ಗತಿ ಏನು ? ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಆಯವ್ಯಯ ಅಧಿವೇಶನದಲ್ಲಿ ಮಾತನಾಡುತ್ತಾ ಜನತಾ ಮನೆಗಳ ನಿರ್ಮಾಣ ಕೆಲಸವನ್ನು ಕಂಟ್ರಾಕ್ಟರಿಗೆ ವಹಿಸುವುದಿಲ್ಲ, ಅರಣ್ಯ ಇಲಾಖೆಯವರಿಂದ ಆ ಮನೆಗಳಿಗಾಗಿ ಬೇಕಾಗುವ ಮರ-ಮುಟ್ಟುಗಳನ್ನು ಒದಗಿಸಲಾಗುವುದೆಂದು ಹೇಳಿದರು. ಆದರೆ, ಈ ಸಲವೂ ಕಂಟ್ರಾಕ್ಟರುಗಳಿಗೆ ಜನತಾ ಮನೆಗಳ ನಿರ್ಮಾಣ ಕೆಲಸವನ್ನು ವಹಿಸಿದ್ದಾರೆ. ಈಗ ಕಂಟ್ರಾಕ್ಟುದಾರರು, ಸರ್ಕಾರ ಕೊಡುವ ಹಣ ನಮಗೆ ಸಾಲುವುದಿಲ್ಲವೆಂದು ಹೇಳಿ, ಮಾರ್ಚ್ ೩೧ ಕಳೆದ ಮೇಲೆ ಮನೆಗಳಿಗೆ ಮರಗಳನ್ನು ಒದಗಿಸಲಾಗುವುದೆಂದು ಹೇಳುತ್ತಿದ್ದಾರೆ. ಆಗ ಕಂಟ್ರಾಕ್ಟುದಾರರು ಆಲದ ಮರ ಕೊಟ್ಟರೂ ತೆಗೆದುಕೊಳ್ಳಬೇಕು, ಗೋಣಿ ಮರ ಕೊಟ್ಟರೂ ತೆಗೆದುಕೊಳ್ಳಬೇಕು. ಈಗ ಮರ ಒದಗಿಸುವುದರಿಂದ ಕಂಟ್ರಾಕ್ಟುದಾರರಿಗೆ ನಷ್ಟವಾಗುತ್ತದಂತೆ. ಇಂತಹ ಪರಿಸ್ಥಿತಿಯಲ್ಲಿ ನಾವು ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವ ಭರವಸೆಯನ್ನು ಕೊಡುತ್ತಿದ್ದೇವೆ. ಬಡವರಿಗಾಗಿ ಕಟ್ಟುತ್ತಿರುವ ಲಕ್ಷಾಂತರ ಮನೆಗಳ ಸ್ಥಿತಿ ಏನಾಗಿದೆ ಗೊತ್ತೆ ? ಆಲ ಮತ್ತು ಗೋಣಿ ಮರ ಹಾಕಿ ಮನೆ ಕಟ್ಟಿದರೆ, ಆ ಮನೆ ಎಷ್ಟು ವರ್ಷ ಉಳಿಯುತ್ತದೆ ? ಹೀಗೆ ಕಟ್ಟಲ್ಪಟ್ಟ ಮನೆಗಳು ಅನೇಕ ಕಡೆ ಬಿದ್ದು ಹೋಗಿರುವುದನ್ನು ನಾವು ಕಾಣುತ್ತಿದ್ದೇವೆ. ಗೃಹಪ್ರವೇಶವಾಗುವ ಮುನ್ನವೇ ಚಾವಣಿಯ ಮರಗಳು ಕುಟ್ಟು ಹಿಡಿದು ಅನೇಕ ಮನೆಗಳು ಬಿದ್ದು ಹೋಗುವ ಸ್ಥಿತಿಯಲ್ಲಿವೆ ಎಂದು ನಾನು ಕಳೆದ ಆಯವ್ಯಯ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೆನು. ರೈತನಿಗೇನು ಆ ಮನೆಯನ್ನು ಮುಫತ್ತಾಗಿ ಸರ್ಕಾರದವರು ಕೊಡುತ್ತಿಲ್ಲ. ಆ ಮನೆಗೆ ತಗಲುವ ವೆಚ್ಚದ ಅರ್ಧ ಭಾಗವನ್ನು ರೈತನು ಸಾಲದ ರೂಪದಲ್ಲಿ ಸರ್ಕಾರಕ್ಕೆ ತೀರಿಸಬೇಕಾಗಿದೆ ಇಂತಹ ಮನೆಗಳಿಗೆ ಅವನು ಎಲ್ಲಿಂದ ಹಣ ತಂದು ಕೊಡುತ್ತಾನೆ ? ಹೊಸದಾಗಿ ಕಟ್ಟಿದ ಮನೆಯಲ್ಲಿ ಕನಿಷ್ಠ ಇಪ್ಪತ್ತು ವರ್ಷಗಳಾದರೂ ವಾಸ ಮಾಡದೆ ಇದ್ದ ಮೇಲೆ, ರೈತನು ಅಂತಹ ಮನೆಗೆ ಏತಕ್ಕೆ ಅರ್ಧ ಹಣ ಕೊಡಬೇಕು ? ಗುಣಮಟ್ಟವಿಲ್ಲದ ಮನೆಗಳನ್ನು ಸರ್ಕಾರದವರು ಏತಕ್ಕೆ ಕಟ್ಟಿಸಿಕೊಡಬೇಕು ? ಈ ಮನೆಗಳಿಗಾಗುವ ಖರ್ಚು ಮಾಡುವ ಹಣ ಸರ್ಕಾರದ ಬೊಕ್ಕಸದ್ದು. ಇದನ್ನು ಖರ್ಚು ಮಾಡುವಾಗ ನಾವು ಯೋಚನೆ ಮಾಡಬೇಕಾಗುತ್ತದೆ.

ಸಮಾಜವಾದ ಜಾರಿಗೆ ತರುತ್ತಿದ್ದೇವೆಂದು ಹೇಳುವ ಸರ್ಕಾರದಲ್ಲಿ ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿ ಒಂದು ಬೆಲೆಬಾಳುವ ನಿವೇಶನ ಕೊಟ್ಟು, ರಾಜ್ಯದ ಐ.ಎ.ಎಸ್. ಅಧಿಕಾರಿಗಳು ಸಾಯಂಕಾಲದ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಲು ಸುಮಾರು ಹದಿನಾರು ಲಕ್ಷ ರೂಪಾಯಿನಲ್ಲಿ ಕಟ್ಟಡವನ್ನು ಕಟ್ಟಲು ಮಂಜೂರು ಮಾಡಲಾಗಿದೆ. ಇದು ಯಾರ ದುಡ್ಡು ? ಸರ್ಕಾರದಲ್ಲವೇ ? ೧೯೭೮-೭೯ನೇ ಸಾಲಿನಲ್ಲಿ ಸಣ್ಣ ನೀರಾವರಿಗಾಗಿ ಪ್ರತಿ ತಾಲ್ಲೂಕು ಬೋರ್ಡ್‌ಗಳಿಗೆ ಕೇವಲ ಮೂರು-ಮೂರು ಸಾವಿರ ರೂಪಾಯಿಗಳನ್ನು ನೀಡಿದ ಸರ್ಕಾರ, ಇಂದು ಹದಿನಾರು ಲಕ್ಷ ರೂಪಾಯಿಗಳನ್ನು ಐ.ಎ.ಎಸ್. ಅಧಿಕಾರಿಗಳು ಮಜಾ ಮಾಡಲಿಕ್ಕೆ ಕೊಟ್ಟಿದೆ. ಇಂತಹ ಉದಾಹರಣೆಗಳು ಈ ಸರ್ಕಾರದಲ್ಲಿ ಬಹಳಷ್ಟಿವೆ. ಐ.ಎ.ಎಸ್. ಅಧಿಕಾರಿಗಳಿಗೆ ಕೊಡಿ, ಆದರೆ, ಹದಿನಾರು ಲಕ್ಷ ರೂಪಾಯಿಗಳ ಭವ್ಯ ಬಂಗಲೆಯೇ ಅವರಿಗೆ ಬೇಕಾಗಿಲ್ಲ, ಇನ್ನೊಂದು ವಿಚಾರ ಏನೆಂದರೆ, ನಮ್ಮ ರಾಜ್ಯದ ಐ.ಜಿ.ಪಿ.ಯವರಿಗೆ ದೊಡ್ಡದೊಂದು ಕಾರು ಕೊಡಲಾಗಿದೆ. ಅವರಿಗೆ ವಿದೇಶಿ ಕಾರೇ ಬೇಕೆ ? ಮಂತ್ರಿಗಳು ಅಂಬಾಸಡರ್ ಕಾರುಗಳಲ್ಲಿ ಹೋಗುತ್ತಾರೆ ಅಧಿಕಾರಿಗಳು ವಿದೇಶಿ ಕಾರುಗಳಲ್ಲಿ ಹೋಗುತ್ತಾರೆ ಇದು ಪ್ರಜಾಪ್ರಭುತ್ವವೇ ? ಅಧಿಕಾರಿಗಳು ಅಂಬಾಸಿಡರ್ ಕಾರುಗಳಲ್ಲಿ ಪ್ರಯಾಣ ಮಾಡಿದರೆ ಮೈಗೆ ಸರಿಬರುವುದಿಲ್ಲವೇ ? ಬರೀ ದೊಡ್ಡ ದೊಡ್ಡ ಕಾರುಗಳೇ ಆಗಬೇಕೆ ಅವರಿಗೆ ? ಅದನ್ನು ಒಪ್ಪುವ ಸರ್ಕಾರಕ್ಕೆ ನಾವು ಸಮಾಜವಾದ ಸರ್ಕಾರವೆಂದು ಹೇಳಬೇಕೆ ?

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸ್ವಾಮಿ, ಮಾನ್ಯ ಸದಸ್ಯರು ಮಾತನಾಡುತ್ತಾ, ಹರಿಜನ ಗಿರಿಜನರಿಗಾಗಿ ಬೇಕಾದಷ್ಟು ವಿದ್ಯಾರ್ಥಿ ನಿಲಯಗಳನ್ನು ತೆರೆದಿದ್ದೇವೆ, ಆ ಒಂದು ಜನಾಂಗದ ಮಕ್ಕಳಿಗಾಗಿ ಅನೇಕ ಸೌಲಭ್ಯಗಳನ್ನು ಒದಗಿಸಿದ್ದೇವೆ ಎಂದು ಹೇಳಿದರು. ಮಾನ್ಯ ಸದಸ್ಯರು ಹರಿಜನ ಹಾಸ್ಟೆಲುಗಳಿಗೆ ಹೋಗಿದ್ದಾರೋ ಇಲ್ಲವೋ ಗೊತ್ತಿಲ್ಲ. ೪೦ ರೂಪಾಯಿಗಳನ್ನು ಒಬ್ಬ ವಿದ್ಯಾರ್ಥಿಗೆ ಕೊಡುತ್ತಾರೆ. ನಾವು ಕೆಲವು ಹಾಸ್ಟೆಲುಗಳಿಗೆ ಭೇಟಿ ಕೊಟ್ಟಿದ್ದೇವೆ ; ಮಕ್ಕಳಿಗೆ ಮಲಗುವುದಕ್ಕೆ ಚಾಪೆಗಳಿಲ್ಲ ; ಅರಕು ಮುರುಕಾಗಿರತಕ್ಕ ಅಲ್ಯೂಮಿನಿಯಂ ತಟ್ಟೆಗಳಲ್ಲಿ ಊಟ ಕೊಡುತ್ತಿದ್ದಾರೆ ; ಲೆಕ್ಕದಲ್ಲಿ ಮಾತ್ರ ಸ್ಟೇನ್‌ಲೆಸ್ ಸ್ಟೀಲ್ ತಟ್ಟೆಗಳನ್ನು ತೋರಿಸಿದ್ದಾರೆ. ಸ್ನಾನ ಮಾಡಿ ಎಷ್ಟು ದಿವಸ ಆಗಿದೆಯೋ, ತಲೆಗೆ ಎಣ್ಣೆ ಇಲ್ಲ ; ಬಟ್ಟೆಗೆ ಸೋಪು ಇಲ್ಲ. ಆಡಳಿತ ಪಕ್ಷದ ಸದಸ್ಯರುಗಳು ಎಲ್ಲಾ ಸೌಲಭ್ಯಗಳನ್ನು ಒದಗಿಸಿದ್ದೇವೆಂದು ಹೇಳುತ್ತಾರೆ. ಹಾಸ್ಟೆಲುಗಳನ್ನು ನಡೆಸುವ ವಿಚಾರದಲ್ಲಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇವೊತ್ತು ಹರಿಜನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸದ ಅವಕಾಶ ಇಲ್ಲ ; ಹಾಸ್ಟೆಲುಗಳಲ್ಲಿ ಸೂಪರಿಂಟ್ಂಡೆಂಟ್ ಆಗಿರತಕ್ಕವರೇ ಅರ್ಧ ಮೇಯುತ್ತಾರೆ. ಕೇರ್ ಫುಡ್ ಕೂಡ ಮಕ್ಕಳಿಗೆ ಸಿಗುತ್ತಿಲ್ಲ ; ಸರ್ಕಾರದವರು ಎಷ್ಟು ಹಾಸ್ಟೆಲುಗಳನ್ನು ಚೆಕ್ ಮಾಡಿದ್ಧಾರೆ ? ಎಷ್ಟು ಜನ ಸೂಪರಿಂಟೆಂಡೆಂಟ್‌ರವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟು ಜನ ಸಮಾಜಕಲ್ಯಾಣ ಅಧಿಕಾರಿಯವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ? ದಯಮಾಡಿಟ್ಟು ತಿಳಿಸುತ್ತೀರಾ ? ಹರಿಜನ ಹಾಸ್ಟೆಲುಗಳಲ್ಲಿ ವ್ಯಾಸಂಗ ಮಾಡತಕ್ಕ ಮಕ್ಕಳ ಫಲಿತಾಂಶ ಬಹಳ ಕೆಳಮಟ್ಟದಲ್ಲಿರುವುದಕ್ಕೆ ಕಾರಣ ಏನು ? ಇದಕ್ಕೆ ವಿದ್ಯಾರ್ಥಿಗಳು ಕಾರಣರೇ ? ಸರ್ಕಾರ ಕಾರಣವೆ ? ಖಾಸಗೀಯವರು ನಡೆಸತಕ್ಕ ವಿದ್ಯಾರ್ಥಿನಿಲಯಗಳಲ್ಲಿ ೮೦–೯೦ ಭಾಗ ಫಲಿತಾಂಶ ಬರುತ್ತದೆ. ಇಲ್ಲಿ ಮಾತ್ರ ಏನೂ ಇಲ್ಲ. ಇದು ಹರಿಜನರ ಉದ್ಧಾರ ಮಾಡುವ ಕೆಲಸವೆ ? ಹರಿಜನರು ಬಹಳ ದಡ್ಡರು ತಾವು ಏನು ಹೇಳಿದರೂ ಅವರು ಕೇಳುತ್ತಾರೆ ; ಅವರ ಅಭಿವೃದ್ಧಿಗೆ ನ್ಯಾಯವಾದ ರೀತಿಯಲ್ಲಿ ಉತ್ತಮ ಕೆಲಸ ಮಾಡಿ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಕಡಿದಾಳ್ ದಿವಾಕರ್ ;—ಹಾಸ್ಟೆಲುಗಳಿಗೆ ಸೂಪರೆಂಟೆಂಡೆಂಟ್‌ರವರು ನಿಮ್ಮವರೇ ಇದ್ದಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ :—ಮಾನ್ಯ ಅಧ್ಯಕ್ಷರೇ ಒಂದು ಮಾತನ್ನು ನಾನು ಇವತ್ತು ಘಂಟಾಘೋಷವಾಗಿ ಹೇಳುತ್ತೇನೆ. ಇವತ್ತು ಸರ್ಕಾರದವರು ಬೇರೆ ಜನಾಂಗಕ್ಕೆ ಉದ್ಯೋಗ ಕೊಡಲಿಕ್ಕಾಗಿ ಹರಿಜನ ಹಾಸ್ಟೆಲುಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ ; ಮಾನ್ಯ ಆಮ್ರುಗಂರವರು ಈ ಮಾತನ್ನು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಎಲ್ಲಾ ಜನಾಂಗಕ್ಕೂ ಹರಿಜನ ಹಾಸ್ಟೆಲುಗಳ ಹೆಸರಿನಲ್ಲಿ ಉದ್ಯೋಗಗಳನ್ನು ಕೊಟ್ಟಿದ್ದಾರೆ. ಮಾರುಕಟ್ಟೆ ಸಮಿತಿಗಳಲ್ಲಿ ಇದುವರೆವಿಗೂ ಕೂಡ ೧೮ ಪರ್ಸೆಂಟ್ ಉದ್ಯೋಗಗಳನ್ನು ಹರಿಜನರಿಗೆ ಕೊಟ್ಟಿಲ್ಲ. ಯಾವ ಮಾರುಕಟ್ಟೆ ಸಮಿತಿಗಳಲ್ಲಿಯೂ ಕೊಟ್ಟಿಲ್ಲ. ಸರ್ಕಾರದ ವತಿಯಿಂದ ನಡೆಯತಕ್ಕ ರೆಗ್ಯೂಲೇಟೆಡ್ ಮಾರುಕಟ್ಟೆಯಲ್ಲಿ ಒಬ್ಬ ಹರಿಜನ ಅಭ್ಯರ್ಥಿ ಅರ್ಜಿ ಹಾಕಿದರೆ ಅವನಿಗೆ ಇದುವರೆವಿಗೂ ಕೆಲಸ ಕೊಟ್ಟಿಲ್ಲ. ಉದಾಹರಣೆಗೆ ಬೆಂಗಳೂರು ಸಿಟಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲಿಕ್ಕಾಗಿ ಒಬ್ಬ ಹರಿಜನ ಮನುಷ್ಯ ಮಾರ್ಕೆಟ್ ಯಾರ್ಡ್‌ಗೆ ಅರ್ಜಿ ಹಾಕಿದರೆ ಅವನಿಗೆ ಇದುವರಿವಿಗೂ ಮಾರ್ಕೆಟ್‌ಯಾರ್ಡ್ ಕೊಟ್ಟಿಲ್ಲ ; ಮಾನ್ಯ ಮಂತ್ರಿಗಳು ಈ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಗದ ಕೂಡ ಬರೆದಿದ್ದೇನೆ.

೬–೦೦ ಪಿ.ಎಂ.

ಇನ್ನು ಹಾಸನದಲ್ಲಿ ಒಂದು ಸೊಸೈಟಿಗೆ ರೆಗ್ಯುಲೇಟೆಡ್ ಮಾರ್ಕೆಟ್ ಮಳಿಗೆ ಕೊಡಬೇಕೆಂದು ಕೇಳಿದ್ದಕ್ಕೆ ಕಳೆದ ಕ್ಯಾಬಿನೆಟ್‌ನಲ್ಲಿದ್ದಂತಹ ರೆಗ್ಯುಲೇಟೆಡ್ ಮಾರ್ಕೆಟ್ ಮಂತ್ರಿಗಳು, ಇದರ ಬಗ್ಗೆ ಕಮಿಟಿಗೆ ಬರೆದಿದ್ದೇವೆ ಕೊಡಿಸುತ್ತೇವೆಂದು ಉತ್ತರ ಬರೆದಿದ್ದರು. ಆದರೆ ಇದುವರೆವಿಗೂ ಮಳಿಗೆ ಕೊಟ್ಟಿಲ್ಲ, ರಾಜ್ಯದಲ್ಲಿ ಎಲ್ಲ ಕಡೆ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಇವೆ. ಇವೊತ್ತು ಅನೇಕ ಜನ ಹರಿಜನ ಗಿರಿಜನರು ವ್ಯಾಪಾರ ಮಾಡತಕ್ಕ ಅವಕಾಶವನ್ನು ಕಲ್ಪಿಸಿಕೊಂಡು ಮುಂದುವರೆಯಬೇಕು ಎಂದು ಇರುತ್ತಾರೆ. ಅವರಿಗೆ ಬೇರೆ ಬಜಾರುಗಳಲ್ಲಿ ಅಂಗಡಿ ಮಳಿಗೆಗಳು ಸಿಕ್ಕದೇ ಇರಬಹುದು. ಅದೇ ಸರ್ಕಾರದವರು ಕಟ್ಟಿಸಿದಂತಹ ಮಳಿಗೆಗಳು ಸಿಕ್ಕಲಿಲ್ಲ ಅಂದರೆ ಹರಿಜನರನ್ನು ಸರ್ಕಾರದವರೇ ಅಸ್ಪೃಶ್ಯರನ್ನಾಗಿ ನೋಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಇನ್ನು ನಮ್ಮಲ್ಲಿ ಅನೇಕ ಜನ ರಸ್ತೆ ಸಾರಿಗೆ ಇಲಾಖೆಯ ಬಸ್ಸುಗಳಲ್ಲಿ ಓಡಾಡುವುದನ್ನು ಕಾಣುತ್ತಿದ್ದೇವೆ. ಆ ಬಸ್ಸುಗಳು ಬಸ್‌ಸ್ಟ್ಯಾಂಡಿಗೆ ಬಂದ ತಕ್ಷಣ ಜನರು ರಿಸರ್ವೇಷನ್ ಮಾಡಿಸಿರಲಿ ಅಥವಾ

ಬಿಟ್ಟಿರಲಿ ಒಬ್ಬರ ಮೇಲೆ ಒಬ್ಬರು ನುಗ್ಗುತ್ತಾ ಇರುತ್ತಾರೆ. ಕೆಲವು ಸಾರಿ ರಿಸರ್ವೇಷನ್ ಮಾಡಿಸಿರತಕ್ಕವರಿಗೆ ಸೀಟುಗಳು ಸಿಕ್ಕದೇ ಗಲಾಟೆ ಆಗುವ ಪ್ರಸಂಗಗಳು ಇರುತ್ತವೆ. ಈ ತರಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ. ಇನ್ನು ಕೆಲವು ಬಸ್ಸುಗಳು ರಸ್ತೆಯಲ್ಲಿ ಹೋಗುತ್ತಿರುವಾಗಲೇ ಬ್ರೇಕ್ ಡೌನ್ ಆಗುತ್ತವೆ. ಇವೊತ್ತು ಬಸ್ಸುಗಳಲ್ಲಿ ಓಡಾಡತಕ್ಕವರಿಗೆ ಬಸ್ ರೇಟು ಜಾಸ್ತಿ ಮಾಡಬೇಕು ಎಂದು ಹೇಳುತ್ತಾರೆಯೇ ವಿನಹ ಅವರಿಗೆ ಸರಿಯಾದಂತಹ ರೀತಿಯಲ್ಲಿ ಅವಕಾಶ ಕಲ್ಪಿಸಿ ಕೊಡುವ ಕಡೆ ಗಮನ ಕೊಡುತ್ತಿಲ್ಲ. ಜನ ಸಂಖ್ಯೆ ಹೆಚ್ಚಿದಂತೆಲ್ಲಾ ಎಷ್ಟು ಬಸ್ಸುಗಳನ್ನು ಜಾಸ್ತಿ ಮಾಡಿದ್ದಾರೆ ಎಂದು ಕೇಳಬೇಕಾಗಿದೆ. ಯಾವ ಬಸ್ಸುಗಳಲ್ಲಿ ನೋಡಿದರೂ ಒಂದು ನೂರು ಜನರಿಗಿಂತಲೂ ಕಡಿಮೆ ಇರುವುದಿಲ್ಲ, ಅಷ್ಟೊಂದು ಜನ ಒಂದೊಂದು ಬಸ್ಸಿನಲ್ಲಿ ಇರುತ್ತಾರೆ. ಆದರೂ ಕೂಡ ಕೆ.ಎಸ್.ಆರ್.ಟಿ.ಸಿ.ಗೆ ಎರಡು ಲಕ್ಷ ರೂಪಾಯಿ ಲಾಸ್ ಎಂದು ಹೇಳುತ್ತಾರೆ. ಈ ತರಹ ಲಾಸ್ ಆಗುವುದಾದರೆ, ಇವರು ಗ್ರಾಮಾಂತರ ಪ್ರದೇಶಗಳ ಕಡೆ ಪ್ರೈವೇಟ್‌ನವರು ಬಸ್ಸುಗಳನ್ನು ಓಡಿಸಲಿಕ್ಕೆ ಅವಕಾಶ ಮಾಡಿಕೊಟ್ಟರೆ ಅವರಾದರೂ ಎಷ್ಟೋ ಚೆನ್ನಾಗಿ ನಡೆಸುತ್ತಾರೆ. ಇವೊತರ್ತ್ತು ಎಲ್ಲಾ ಕಡೆಗಳಲ್ಲೂ ಕೂಡ ರಾಷ್ಟ್ರೀಕರಣವಾಗಿಲ್ಲ. ಕೆಲವು ಭಾಗ ಪೂರ್ತಿಯಾಗಿದೆ, ಇನ್ನು ಕೆಲವು ಭಾಗಗಳಲ್ಲಿ ಪಾರ್ಟ್, ಪಾರ್ಟ್ ಆಗಿದೆ. ಇವೊತ್ತು ಕೆಲವು ಗ್ರಾಮಾಂತರ ಪ್ರದೇಶಗಳ ಕಡೆ ಖಾಸಗಿ ಬಸ್ಸುಗಳನ್ನು ಓಡಿಸಲಿಕ್ಕೆ ಏನು ಅವಕಾಶ ಮಾಡಿಕೊಟ್ಟಿದ್ದೀರೋ ಅದೇ ರೀತಿ ರಾಷ್ಟ್ರೀಕರಣವಾಗಿರುವ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಖಾಸಗಿ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಬೋರ್ಡ್‌ಗಳಿಗೆ, ಮುನಿಸಿಪಾಲಿಟಿಗಳಿಗೆ, ಬಡ್ಜೆಟ್ಟಿನಲ್ಲಿ ೧೮ ಪರ್‌ಸೆಂಟ್ ನಿಗದಿ ಮಾಡಬೇಕೆಂದು ಏನು ಸರ್ಕಾರದಿಂದ ಆದೇಶ ನೀಡಿದೆ, ಅದರ ಬಗ್ಗೆ ಸರ್ಕಾರ ಯಾವ ತಾಲ್ಲೂಕಿನಲ್ಲಿ ೧೮ ಪರ್‌ಸೆಂಟ್ ನಿಗದಿ ಮಾಡಿದ್ದಾರೆ, ಯಾವ ತಾಲ್ಲೂಕಿನಲ್ಲಿ ೧೮ ಪರ್‌ಸೆಂಟ್ ನಿಗದಿ ಮಾಡಿಲ್ಲ ಎನ್ನುವ ಕಡೆ ಏನಾದರೂ ವಿಚಾರ ಮಾಡಿದ್ದಾರೆಯೋ ? ಇವೊತ್ತು ಅನೇಕ ತಾಲ್ಲೂಕು ಬೋರ್ಡ್‌ಗಳಲ್ಲಿ ಅನೇಕ ಮುನಿಸಿಪಾಲಿಟಿಗಳಲ್ಲಿ ಹರಿಜನ ಗಿರಿಜನರಿಗೆ ೧೮ ಪರ್‌ಸೆಂಟ್ ತೆಗೆದಿಟ್ಟಿಲ್ಲ. ಇವೊತ್ತು ಇದರ ಬಗೆ ಸರ್ಕಾರದಿಂದ ಆದೇಶ ಹೋಗಿದೆ ಅವರು ಮಾಡುತ್ತಾರೆ ಎಂದು ಹೇಳುವುದೇ ಅಲ್ಲ. ಅವರು ೧೮ ಪರ್‌ಸೆಂಟ್ ಹಣವನ್ನು ಯಾವ ರೀತಿ ಖರ್ಚು ಮಾಡಿದ್ದಾರೆ, ಅದರಿಂದ ಆ ಜನಾಂಗಕ್ಕೆ ಅನುಕೂಲವಾಗಿದೆಯೋ ಎನ್ನತಕ್ಕಂತಹ ವಿಚಾರದಲ್ಲಿ ಕಟ್ಟುನಿಟ್ಟಾಗಿ ಸರ್ಕಾರದವರು ನೋಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಎರಡು ಮಾತುಗಳನ್ನು ಮುಗಿಸುತ್ತೇನೆ.

MR. SPEAKER.—Now the House stands adjourned to meet at 1 P.M. on Wednesday, the 11th April 1979.

The House adjourned at Ten Minutes Past Six of the Clock to meet again at one of the Clock on Wednesday, the 11th April, 1979.